
ಗುರುವಾರ, ಆಗಸ್ಟ್ 12, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಲಕ್ಷ್ಮಿಗೆ ಅಲಂಕಾರ...**
ವರಮಹಾಲಕ್ಷ್ಮಿ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ ಮಾಗಡಿ ಮುಖ್ಯ ರಸ್ತೆಯ ಜೈ ಮುನಿರಾವ್ ವೃತ್ತದಲ್ಲಿರುವ ಮಳಿಗೆಯೊಂದರಲ್ಲಿ ಮಹಿಳೆಯೊಬ್ಬರು ಲಕ್ಷ್ಮಿ ಗೊಂಬೆಗಳಿಗೆ ಬುಧವಾರ ಅಲಂಕಾರ ಮಾಡಿದರು





ಭಾರತ ಹಾಕಿ ತಂಡದ ತರಬೇತುಗಾರ್ತಿ ಅಂಕಿತಾ ಸುರೇಶ್ ಅವರು ವಿಜಯನಗರದ ಆದಿಚುಂಚನಗಿರಿ ಶಾಖಾ ಮಠಕ್ಕೆ ಬುಧವಾರ ಭೇಟಿ ನೀಡಿ ನಿರ್ಮಲಾನಂದನಾಥ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದುಕೊಂಡರು

### ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾಡಳಿತ ಭಿನ್ನ ನಿಲುವು

# ಹಬ್ಬ ಹರಿದಿನ: ದೇವಸ್ಥಾನಗಳಿಗೆ ಭಕ್ತರಿಗೆ ಪ್ರವೇಶ ನಿಷೇಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶ್ರಾವಣ ತಿಂಗಳಲ್ಲಿ ಬರುವ ಹಬ್ಬಗಳಲ್ಲಿ ದೇವಸ್ಥಾನಗಳಲ್ಲಿ ಜನಜಂಗುಳಿ ಹೆಚ್ಚು ಇರುತ್ತದೆ. ಈ ಸಂದರ್ಭಗಳಲ್ಲಿ ಕೋವಿಡ್ ಹರಡುವುದನ್ನು ತಡೆಯಲು ದೇವಸ್ಥಾನಗಳಲ್ಲಿ ಭಕ್ತರಿಗೆ ಪ್ರವೇಶ ಕಲ್ಪಿಸುವ ವಿಚಾರದಲ್ಲಿ ಬಿಬಿಎಂಪಿ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತ ವಿಭಿನ್ನ ನಿಲುವು ತಳೆದಿವೆ.

'ಹಬ್ಬ ಹರಿದಿನಗಳಲ್ಲಿ ದೇವಸ್ಥಾನಗಳನ್ನು ಹಾಗೂ ಮಾರುಕಟ್ಟೆಗಳನ್ನು ಮುಚ್ಚುವ ತೀರ್ಮಾನವನ್ನು ಕೈಗೊಂಡಿಲ್ಲ. ದೇವಸ್ಥಾನ ಹಾಗೂ ಮಾರುಕಟ್ಟೆಗಳಲ್ಲಿ ಜನಜಂಗುಳಿ ಉಂಟಾಗುವುದನ್ನು ಜನರೇ ತಡೆಯಬೇಕು. ದೇವಸ್ಥಾನಗಳಿಗೆ ಭೇಟಿ ನೀಡುವುದನ್ನು ಆದಷ್ಟು ತಪ್ಪಿಸಬೇಕು. ದೇವಸ್ಥಾನ ಹಾಗೂ ಮಾರುಕಟ್ಟೆಗಳಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಕುರಿತು ವಿಸ್ತೃತ ಆದೇಶ ಹೊರಡಿಸಿದ್ದೇವೆ. ಅವುಗಳ ಜಾರಿಗೆ ಮಾರ್ಷಲ್‌ಗಳು, ಗೃಹರಕ್ಷಕ ಸಿಬ್ಬಂದಿ ಹಾಗೂ ಅಧಿಕಾರಿಗಳ ತಂಡಗಳನ್ನು ರಚಿಸಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಬುಧವಾರ ಹೇಳಿಕೆ ನೀಡಿದ್ದರು.

ಇದರ ಬೆನ್ನಲ್ಲೇ ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್, 'ಕೋವಿಡ್ ಹರಡುವುದನ್ನು ತಪ್ಪಿಸಲು ನಗರ ಜಿಲ್ಲಾ ವ್ಯಾಪ್ತಿಯ ಎಲ್ಲ ಮುಜರಾಯಿ ಇಲಾಖೆಯ ದೇವಾಲಯಗಳಲ್ಲಿ ಹಾಗೂ ಖಾಸಗಿ ದೇವಸ್ಥಾನಗಳಲ್ಲಿ ಶ್ರಾವಣ ಮಾಸದ ಶನಿವಾರ, ಭಾನುವಾರ ಹಾಗೂ ಸಾರ್ವತ್ರಿಕ ರಜಾ ದಿನಗಳಂದು ಸಾರ್ವಜನಿಕರಿಗೆ ಹಾಗೂ ಭಕ್ತರಿಗೆ ದೇವಾಲಯ ಪ್ರವೇಶ ನಿಷೇಧಿಸಲಾಗಿದೆ' ಎಂದು ಆದೇಶ ಹೊರಡಿಸಿದ್ದಾರೆ.



ಗೌರವ್ ಗುಪ್ತ



ಮಂಜುನಾಥ್

'ಭಕ್ತರಿಗೆ ಪ್ರವೇಶ ನಿರ್ಬಂಧ ಹೇರಿರುವ ದಿನಗಳಲ್ಲಿ ಅರ್ಚಕರು ಮತ್ತು ದೇವಸ್ಥಾನದ ಸಿಬ್ಬಂದಿಯ ಉಪಸ್ಥಿತಿಯಲ್ಲಿ ದೈನಂದಿನ ಧಾರ್ಮಿಕ ಕಾರ್ಯಗಳನ್ನು ಎಂದಿನಂತೆ ಮುಂದುವರಿಸಬಹುದು. ಭಕ್ತರಿಗೆ ಪ್ರವೇಶಾವಕಾಶ ಇರುವ ಇನ್ನುಳಿದ ದಿನಗಳಲ್ಲಿ ಧಾರ್ಮಿಕ ಮತ್ತು ದತ್ತಿ ಆಯುಕ್ತರು ಹೊರಡಿಸಿರುವ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಭಕ್ತರು ದೇವರ ದರ್ಶನ ಮಾಡುವುದಕ್ಕೆ ವ್ಯವಸ್ಥೆ ಕಲ್ಪಿಸಬಹುದು' ಎಂದು ಆದೇಶದಲ್ಲಿ ತಿಳಿಸಿದ್ದಾರೆ.

'ಶ್ರಾವಣ ಮಾಸದ ಶನಿವಾರ ಮತ್ತು ಭಾನುವಾರ ನಗರದ ದೇವಸ್ಥಾನಗಳಿಗೆ ವಿವಿಧ ಜಿಲ್ಲೆಗಳಿಂದ ಹಾಗೂ ರಾಜ್ಯಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಈ ಸಮಯದಲ್ಲಿ ಕೋವಿಡ್ ಹರಡುವ ಸಾಧ್ಯತೆ ಹೆಚ್ಚು ಇರುತ್ತದೆ. ಕೋವಿಡ್ ಮೂರನೇ ಅಲೆಯ ಭೀತಿಯೂ ಇದೆ. ಹಾಗಾಗಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ತಿಳಿಸಿದ್ದಾರೆ.

**ಕೋವಿಡ್ ಪರೀಕ್ಷೆ ವಿಳಂಬಕ್ಕೆ ಆಸ್ಪದವಿಲ್ಲ:** ಕೋವಿಡ್ ಪರೀಕ್ಷೆಯ ವರದಿ ಕೈಸೇರುವುದು ವಿಳಂಬವಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ಪ್ರತಿಯೊಂದು ಪ್ರಯೋಗಾಲಯವೂ ಕೋವಿಡ್ ಪರೀಕ್ಷೆಯ ಫಲಿತಾಂಶವನ್ನು ಚಾಚೂತಪ್ಪದೇ ಬಿಬಿಎಂಪಿಗೆ ಒದಗಿಸುವಂತೆ ಆದೇಶ ಮಾಡಿದ್ದೇವೆ. ಕೋವಿಡ್ ಪರೀಕ್ಷಾ ಫಲಿತಾಂಶವನ್ನು 24 ಗಂಟೆಗಳ ಒಳಗೆ ನೀಡಬೇಕು. ವಿಳಂಬಕ್ಕೆ ಆಸ್ಪದವಿಲ್ಲ. ಯಾವುದಾದರೂ ನಿರ್ದಿಷ್ಟ ಪ್ರಕರಣದಲ್ಲಿ ಫಲಿತಾಂಶದ ವರದಿ ನೀಡುವಾಗ ವಿಳಂಬವಾಗಿದ್ದರೆ ಗಮನಕ್ಕೆ ತರಬಹುದು. ಈ ಬಗ್ಗೆ ಬಿಬಿಎಂಪಿ ಕ್ರಮ ಕೈಗೊಳ್ಳಲಿದೆ' ಎಂದು ತಿಳಿಸಿದರು.

ಕಟ್ಟಡ ನಿರ್ಮಿಸುವವರಿಂದ ನೆಲ ಬಾಡಿಗೆ, ಪರವಾನಗಿ ಶುಲ್ಕ, ಕಟ್ಟಡ ನಿರ್ಮಾಣ ಪರವಾನಗಿ ಶುಲ್ಕ, ಪರಿಶೀಲನಾ ಶುಲ್ಕ ಮತ್ತು ಭದ್ರತಾ ಠೇವಣಿಗಳನ್ನು ಪಡೆಯುವ ಅಧಿಕಾರ ಬಿಬಿಎಂಪಿಗೆ ಇಲ್ಲ ಎಂದು ಈ ಎಲ್ಲ ಶುಲ್ಕಗಳನ್ನೂ ರದ್ದುಮಾಡಿ ಹೈಕೋರ್ಟ್ ಆದೇಶ ಹೊರಡಿಸಿದೆ. ಈ ಕುರಿತು ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ಯಾವ ಸನ್ನಿವೇಶದಲ್ಲಿ ಹೈಕೋರ್ಟ್ ಈ ರೀತಿ ಆದೇಶ ಮಾಡಿದೆಯೋ ತಿಳಿಯದು. ಈ ಆದೇಶದಲ್ಲಿರುವ ನಿರ್ದಿಷ್ಟ ಅಂಶಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಿದ್ದೇವೆ' ಎಂದರು.

## 'ಸ್ವಾತಂತ್ರ್ಯ ದಿನಾಚರಣೆ– ಸಾಂಸ್ಕೃತಿಕ ಕಾರ್ಯಕ್ರಮಗಳಿಲ್ಲ'

'ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ರಾಜ್ಯ ಮುಖ್ಯ ಕಾರ್ಯದರ್ಶಿಯವರು ಕೂಡ ಈ ಬಗ್ಗೆ ಪರಾಮರ್ಶಿಸಿ ಕೆಲವು ತೀರ್ಮಾನಗಳನ್ನು ಕೈಗೊಂಡಿದ್ದಾರೆ. ಆ ಪ್ರಕಾರ ರಾಜಧಾನಿಯಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆಗೆ ಸೀಮಿತ ಸಂಖ್ಯೆಯ ಜನರನ್ನು ಮಾತ್ರ ಆಹ್ವಾನಿಸಲಿದ್ದೇವೆ. ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮ ಇರುವುದಿಲ್ಲ' ಎಂದು ಗೌರವ್ ಗುಪ್ತ ತಿಳಿಸಿದರು.

# ಚಿಕಿತ್ಸೆಗೆ ಆರ್ಥಿಕ ನೆರವು: ಕೇಂದ್ರಕ್ಕೆ ಮನವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಅಪರೂಪದ ಆನುವಂಶಿಕ ಕಾಯಿಲೆಯಿಂದ ಬಳಲುತ್ತಿರುವ ಅರ್ಹ ರೋಗಿಗಳ ಚಿಕಿತ್ಸೆಗೆ ಆರ್ಥಿಕ ನೆರವು ನೀಡುವಂತೆ ರಾಜ್ಯಸಭೆಯ ಸದಸ್ಯರು ಕೇಂದ್ರದ ಆರೋಗ್ಯ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ.

ರಾಜ್ಯಸಭೆ ಸದಸ್ಯರಾದ ಎನ್‌ಸಿಪಿಯ ಡಾ.ಫೌಜಿಯಾ ಖಾನ್, ಕಾಂಗ್ರೆಸ್‌ನ ಎಲ್.ಹನುಮಂತಯ್ಯ, ಜಿ.ಸಿ. ಚಂದ್ರಶೇಖರ್ ಸೇರಿದಂತೆ 23 ಸಂಸದರ ನಿಯೋಗವು ಕೇಂದ್ರದ ಆರೋಗ್ಯ ಸಚಿವ ಮನಸುಖ್ ಮಾಂಡವಿಯಾ ಅವರಿಗೆ ಮನವಿ ಸಲ್ಲಿಸಿದೆ.

ಅಪರೂಪದಲ್ಲೇ ಅಪರೂಪದ್ದಾದ ಲೈಸೊಸೋಮಲ್ ಸ್ಟೋರೇಜ್ ಡಿಸಾರ್ಡರ್ಸ್ (ಎಲ್‌ಎಸ್‌ಡಿ) ನಂತಹ ಗುಂಪು 3 (ಎ) ಆನುವಂಶಿಕ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ತುರ್ತು ಚಿಕಿತ್ಸೆಯ ಅಗತ್ಯವಿದ್ದು, ಕೂಡಲೇ ಗಮನ ಹರಿಸಬೇಕು ಎಂದು ಸಚಿವರನ್ನು ಕೋರಲಾಗಿದೆ.

ದೇಶದಾದ್ಯಂತ ಅಂದಾಜು 200 ರೋಗಿಗಳು ಇಂಥ ಕಾಯಿಲೆಯಿಂದ ಬಳಲುತ್ತಿದ್ದು, ಅವರಿಗೆ ನೆರವಾಗುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೋರಲಾಗಿದೆ.




## ಸುದ್ದಿ 2 ನಿಮಿಷ

### ಅಧಿಕಾರಕ್ಕೆ ಬಂದರೆ ಜಾತಿಗಣತಿ ವರದಿ ಚರ್ಚೆ– ಸಿದ್ದರಾಮಯ್ಯ

**ಮೈಸೂರು:** 'ಅಧಿಕಾರಕ್ಕೆ ಬಂದ ಕೂಡಲೇ ಜಾತಿಗಣತಿ ವರದಿ ಪಡೆದು ಚರ್ಚೆಗೆ ಇಡುವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

'ನಾನು ಅಧಿಕಾರದಲ್ಲಿದ್ದಾಗ ಜಾತಿ ಗಣತಿ ಮಾಡಿಸಿದೆ. ನಂತರ ಬಂದ ಸರ್ಕಾರಗಳು ಗಣತಿ ವರದಿಯನ್ನು ಪಡೆಯಲೇ ಇಲ್ಲ. ಅದರಲ್ಲೇನಿದೆ, ಯಾವ ಜಾತಿಯ ಸಮಾಜ ಬಡತನದಲ್ಲಿದೆ ಎಂದೂ ಗೊತ್ತಾಗಿಲ್ಲ. ಎಲ್ಲ ಹಂತಗಳಲ್ಲೂ ಮೀಸಲಾತಿಯನ್ನು ವಿರೋಧಿಸಿದ ಬಿಜೆಪಿಯು ಹಿಂದುಳಿದ ವರ್ಗಗಳ ಪರವಾಗಿ ಇಲ್ಲ' ಎಂದು ಇಲ್ಲಿ ಬುಧವಾರ ಸುದ್ದಿಗಾರರಿಗೆ ಹೇಳಿದರು.

'ಸರ್ಕಾರಕ್ಕೆ ಬದ್ಧತೆ ಇದ್ದರೆ ಕೇಂದ್ರ ಜಲನ್ಯಾಯ ಮಂಡಳಿಯ ಅನುಮತಿ ಪಡೆದು ಮೊದಲು ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ತಮಿಳುನಾಡಿಗೆ ಪತ್ರ ಬರೆದು ಅನುಮತಿ ಕೇಳುತ್ತೇವೆ ಎನ್ನುವುದು ಸರಿಯಲ್ಲ' ಎಂದು ಪ್ರತಿಪಾದಿಸಿದರು.



ರಾಜಕೀಯದಲ್ಲಿರುವೆ; 'ರಾಜಕೀಯದಲ್ಲಿ ಮುಂದುವರಿಯಲು ಉತ್ತಮ ಆರೋಗ್ಯ, ಕೆಲಸ ಮಾಡುವ ಉತ್ಸಾಹ ಮುಖ್ಯವೇ ಹೊರತು ವಯಸ್ಸಲ್ಲ. ನನಗೀಗ 75 ವಯಸ್ಸಾಗಿದೆ. ರಾಜಕೀಯದಲ್ಲಿ ಮುಂದುವರಿಯುವ ಆಸೆಯೂ ಇದೆ' ಎಂದರು.

'ಸಿಗರೇಟ್ ಸೇದುತ್ತಿದ್ದುದರಿಂದ ತೊಂದರೆಯಾಗಿ ಹೃದಯನಾಳದಲ್ಲಿ ಸ್ಟೆಂಟ್ ಅಳವಡಿಸಲಾಗಿದೆ. ಮಧುಮೇಹವಿದ್ದರೂ ಎಚ್ಚರ ವಹಿಸಿದ್ದರಿಂದ ಗಂಭೀರ ಕಾಯಿಲೆಗಳಿಲ್ಲದೆ ಗಟ್ಟಿಮುಟ್ಟಾಗಿದ್ದೇನೆ' ಎಂದರು.

'ನನ್ನ ಜನ್ಮದಿನಾಂಕವೇ ತಪ್ಪಾಗಿದೆ' ಎಂದು ಹಾಸ್ಯ ಚಟಾಕಿ ಹಾರಿಸಿದ ಅವರು, 'ಶಾಲೆಯ ದಾಖಲಾತಿಯಲ್ಲಿ 3-8-1947 ಅಂತ ಇದೆ. ಇದು ತಪ್ಪಾಗಿ 12-8-1947 ಅಂತ ಆಗಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

### ಗ್ರಾಹಕರ ವೇದಿಕೆ: ಖಾಲಿ ಹುದ್ದೆ ಭರ್ತಿಗೆ 'ಸುಪ್ರೀಂ' ಸೂಚನೆ

**ನವದೆಹಲಿ:** ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗಳಲ್ಲಿ ಖಾಲಿ ಇರುವ 800 ಹುದ್ದೆಗಳನ್ನು, ಎರಡು ತಿಂಗಳ ಒಳಗಾಗಿ ಭರ್ತಿ ಮಾಡುವಂತೆ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಬುಧವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಹೃಷಿಕೇಶ್ ರಾಯ್ ಅವರನ್ನು ಒಳಗೊಂಡ ನ್ಯಾಯಪೀಠ, 'ಸಾರ್ವಜನಿಕರು, ಕಾನೂನಿನ ಅಡಿಯಲ್ಲಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆಯುವುದು ನಿಮಗೆ ಬೇಕಿಲ್ಲವೇ?' ಎಂದು ತರಾಟೆಗೆ ತೆಗೆದುಕೊಂಡಿತು. ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗೆ ಬರುವ ಪ್ರಕರಣಗಳ ಇತ್ಯರ್ಥಕ್ಕಾಗಿ, ಅಗತ್ಯವಿರುವ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲೇಬೇಕು ಎಂದು ಕೇಂದ್ರಾಡಳಿತ ಪ್ರದೇಶಗಳು ಹಾಗೂ ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆ ನೀಡಿತು.

ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗಳಿಗೆ ಅಗತ್ಯ ಸಿಬ್ಬಂದಿ ನೇಮಿಸುವಲ್ಲಿ ಹಾಗೂ ಸೌಕರ್ಯ ಒದಗಿಸುವಲ್ಲಿ ಸರ್ಕಾರಗಳು ನಿಷ್ಕ್ರಿಯವಾಗಿವೆ ಎಂಬ ವಿಷಯವನ್ನು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡು ಕೋರ್ಟ್ ವಿಚಾರಣೆ ನಡೆಸುತ್ತಿದೆ.

ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಗ್ರಾಹಕರ ನ್ಯಾಯಾಲಯಗಳಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನೂ, ನೇಮಕಾತಿ ನಿಯಮಗಳ ಅನುಸಾರವಾಗಿ ಎಂಟು ವಾರಗಳ ಒಳಗಾಗಿ ಭರ್ತಿ ಮಾಡಬೇಕು. ಒಂದು ವೇಳೆ ಗಡುವಿನೊಳಗಾಗಿ ಭರ್ತಿ ಮಾಡದಿದ್ದಲ್ಲಿ, ಕೇಂದ್ರ ಗ್ರಾಹಕರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಹಾಗೂ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಮುಂದಿನ ವಿಚಾರಣೆಯ ದಿನದಂದು ಹಾಜರಿರಬೇಕು ಎಂದು ನಿರ್ದೇಶನ ನೀಡಿತು.

# ಸಾಮಗಾನ ಸಭಾದಿಂದ ವಿಡಿಯೊ ಗೀತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತೀಯ ಸಾಮಗಾನ ಸಭಾ 75ನೇ ಸ್ವಾತಂತ್ರ್ಯ ದಿನದ ಅಂಗವಾಗಿ 'ವಂದೇ ಭಾರತ ಮಾತರಂ' ಶೀರ್ಷಿಕೆಯ ಸಂಗೀತ ಪ್ರಧಾನವಾದ ವಿಡಿಯೊ ಹೊರತಂದಿದೆ.

ಭಾರತೀಯ ಸಾಮಗಾನ ಸಭಾದ ಅಧ್ಯಕ್ಷ ಆರ್.ಆರ್.ರವಿಶಂಕರ್,'ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ರಾಗ ಸಂಯೋಜನೆ ಮಾಡಲಾಗಿದೆ. ಪಿಟೀಲು ವಾದಕಿ ಎ.ಕನ್ಯಾಕುಮಾರಿ ಅವರು ಸಂಗೀತ ಸಂಯೋಜಿಸಿದ್ದಾರೆ. 'ವಿಷ್ಣು ಪುರಾಣ'ದಲ್ಲಿ ಭಾರತ ಮಾತೆಯನ್ನು ವರ್ಣಿಸುವ ಅರ್ಥಪೂರ್ಣ ಶ್ಲೋಕವಿದ್ದು, ಅದನ್ನು ವರ್ಣಿಸುವ ದೃಶ್ಯ ಸಂಯೋಜನೆಯೂ ಇದರಲ್ಲಿದೆ' ಎಂದು ವಿವರಿಸಿದರು.

'ವಂದೇ ಭಾರತ ಮಾತರಂ' ಹಾಡು ದೇಶದ ಜನರಲ್ಲಿ ರಾಷ್ಟ್ರೀಯತೆ ಭಾವ ಮೂಡಿಸುತ್ತದೆ ಹಾಗೂ ನಮ್ಮ ಶ್ರೀಮಂತ ಪರಂಪರೆಯನ್ನು ನೆನಪಿಸುವಂತಿದೆ. ಒಂದು ನಿಮಿಷದ ಈ ವಿಡಿಯೊ ಆಗಸ್ಟ್ 15ರಂದು ಸಾಮಗಾನ ಸಭಾದ ಯೂಟ್ಯೂಬ್ ವಾಹಿನಿಯಲ್ಲಿ ಬಿಡುಗಡೆಯಾಗಲಿದೆ' ಎಂದೂ ಹೇಳಿದರು.

# ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ ಘೋಷಣೆ

**ಬೆಂಗಳೂರು:** ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ತನ್ನ ಪ್ರಕಟಣೆಯ ಪುಸ್ತಕಗಳಿಗೆ ಆಗಸ್ಟ್ ತಿಂಗಳಲ್ಲಿ ಶೇ 50 ರಷ್ಟು ರಿಯಾಯಿತಿ ಘೋಷಿಸಿದೆ.

ಆನ್‌ಲೈನ್ ಮೂಲಕ ಕೂಡ ಪುಸ್ತಕಗಳ ಖರೀದಿಗೆ ಅವಕಾಶವಿದೆ. kuvempubhashabharathi.karnataka.gov.in ಮೂಲಕ ರಿಯಾಯಿತಿ ದರಲ್ಲಿ ಪುಸ್ತಕವನ್ನು ಒದಗಿಸಲಾಗುತ್ತದೆ ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ತಿಳಿಸಿದ್ದಾರೆ.




ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ (ಸಂಗ್ರಹ ಚಿತ್ರ)

# '2022ರ ಅಕ್ಟೋಬರ್‌ಗೆ ಬೆಂಗಳೂರು– ಮೈಸೂರು ಆರ್ಥಿಕ ಕಾರಿಡಾರ್ ಪೂರ್ಣ'

**ನವದೆಹಲಿ:** ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ದಶ ಪಥಗಳ ಆರ್ಥಿಕ ಕಾರಿಡಾರ್ ನಿರ್ಮಾಣ ಕಾಮಗಾರಿಯನ್ನು 2022ರ ಅಕ್ಟೋಬರ್ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಬುಧವಾರ ತಿಳಿಸಿದರು.

'10 ಪಥಗಳ ಬೆಂಗಳೂರು--ಮೈಸೂರು ಆರ್ಥಿಕ ಕಾರಿಡಾರ್ ಅನ್ನು ದಾಖಲೆಯ ವೇಗದಲ್ಲಿ ನಿರ್ಮಿಸಲಾಗುತ್ತಿದೆ. ₹8,172 ಕೋಟಿ ವೆಚ್ಚದ ಆರ್ಥಿಕ ಕಾರಿಡಾರ್ 2022ರ ಅಕ್ಟೋಬರ್ ಒಳಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಇದು ಎರಡು ನಗರಗಳ ನಡುವಿನ ಪ್ರಯಾಣದ ಸಮಯವನ್ನು ಈಗಿನ 3 ಗಂಟೆಯಿಂದ ಒಂದೂವರೆ ಗಂಟೆಗೆ (90 ನಿಮಿಷಕ್ಕೆ) ತಗ್ಗಿಸುತ್ತದೆ' ಎಂದು ಗಡ್ಕರಿ ಟ್ವೀಟ್ ಮಾಡಿದ್ದಾರೆ.


ಎರಡು ನಗರಗಳ ನಡುವಿನ ರಸ್ತೆ ಯೋಜನೆಯನ್ನು ಭಾರತಮಾಲಾ ಪರಿಯೋಜನ ಹಂತ -1ರ ಅಡಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಎರಡು ಪ್ಯಾಕೇಜ್‌ಗಳಾಗಿ ಕೈಗೆತ್ತಿಕೊಳ್ಳಲಾಗಿದ್ದು, ಮೊದಲನೆಯ ಪ್ಯಾಕೇಜ್‌ನಲ್ಲಿ ಬೆಂಗಳೂರಿನಿಂದ ಮದ್ದೂರು ತಾಲ್ಲೂಕಿನ ನಿಡಘಟ್ಟವರೆಗೆ ಮತ್ತು ಎರಡನೆಯ ಪ್ಯಾಕೇಜ್‌ನಲ್ಲಿ ನಿಡಘಟ್ಟದಿಂದ ಮೈಸೂರಿನವರೆಗೆ ಕಾಮಗಾರಿ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ಗುರುವಾರ, ಆಗಸ್ಟ್ 12, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 224 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸ್ಪರ್ಧಾವಾಣಿ**
ಬ್ಯಾಂಕ್ ಪರೀಕ್ಷೆಗೆ ಕೂರುವವರು ಗಣಿತದಲ್ಲಿ ಕೆಲವು ಸುಲಭ ವಿಧಾನಗಳನ್ನು ರೂಢಿಸಿಕೊಂಡರೆ ಯಶಸ್ಸು ಕಟ್ಟಿಟ್ಟ ಬುತ್ತಿ.





| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 54,525 ▼ | 16,282 ▲ | 74.44 ▼ |





**ಚಿನಕುರಳಿ**
ಪ್ರಕಾಶ್ ಶೆಟ್ಟಿ



### ನಿಯಮ ಉಲ್ಲಂಘಿಸಿ 'ಅಫಿಶಿಯಲ್ ಕೆಟಗರಿ'ಯಡಿ ನೇಮಕ

# ಕೆಪಿಎಸ್‌ಸಿ ಅಧ್ಯಕ್ಷ 'ಅನರ್ಹ'?

• ರಾಜೇಶ್ ರೈ ಚಟ್ಲ

**ಬೆಂಗಳೂರು:** ಕೆಎಎಸ್ ಸೇರಿದಂತೆ ರಾಜ್ಯ ಸರ್ಕಾರದ ನಾನಾ ಹುದ್ದೆಗಳಿಗೆ ನಡೆಯುವ ನೇಮಕಾತಿ ವೇಳೆ ಭ್ರಷ್ಟಾಚಾರ, ಅಕ್ರಮ, ಸ್ವಜನಪಕ್ಷಪಾತ ಆರೋಪಗಳಿಂದ ಸದಾ ಸುದ್ದಿಯಲ್ಲಿರುವ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಹಾಲಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರ ನೇಮಕವೇ 'ಅಕ್ರಮ' ಎಂಬ ಗಂಭೀರ ಆರೋಪ ಕೇಳಿಬಂದಿದೆ.

ರಾಜ್ಯಪಾಲರಾಗಿದ್ದ ವಜುಭಾಯಿ ವಾಲಾ ಅವರು ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರದ ಶಿಫಾರಸಿನ ಅನ್ವಯ ಶಿವಶಂಕರಪ್ಪ ಸಾಹುಕಾರ್ ಅವರನ್ನು ಸಂವಿಧಾನದ 316ನೇ ವಿಧಿಯ ಸೆಕ್ಷನ್ 1ರ ಪ್ರಕಾರ 'ಅಫಿಶಿಯಲ್ ಕೆಟಗರಿ'ಯಲ್ಲಿ (ಅಧಿಕಾರಿ ವರ್ಗ) ಕೆಪಿಎಸ್‌ಸಿ ಸದಸ್ಯರಾಗಿ ನೇಮಿಸಿ 2019ರ ಆಗಸ್ಟ್ 31ರಂದು ಅಧಿಸೂಚನೆ ಹೊರಡಿಸಿದ್ದರು. ಆ ಬಳಿಕ, ಮತ್ತೆ ಸರ್ಕಾರದ ಶಿಫಾರಸಿನಂತೆ ಸಂವಿಧಾನದ ಅದೇ ವಿಧಿಯ ಪ್ರಕಾರ ಕೆಪಿಎಸ್‌ಸಿ ಅಧ್ಯಕ್ಷರಾಗಿ ನೇಮಿಸಿ 2021ರ ಏಪ್ರಿಲ್ 3ರಂದು ಅಧಿಸೂಚನೆ ಹೊರಡಿಸಿದ್ದರು.

'ಆದರೆ, ಸಂವಿಧಾನದ 316ನೇ ವಿಧಿಯ ಸೆಕ್ಷನ್ 1ರಲ್ಲಿರುವ ಅಂಶಗಳ ಪ್ರಕಾರ ಶಿವಶಂಕರಪ್ಪ ಅವರಿಗೆ ಕೆಪಿಎಸ್‌ಸಿ ಸದಸ್ಯರಾಗುವ ಅರ್ಹತೆಯೇ ಇಲ್ಲ. ಸಂವಿಧಾನದ ನಿಯಮಗಳನ್ನು ಉಲ್ಲಂಘಿಸಿ ಅವರನ್ನು ಕೆಪಿಎಸ್‌ಸಿ ಸದಸ್ಯ, ಬಳಿಕ ಅಧ್ಯಕ್ಷರಾಗಿ ನೇಮಿಸುವಂತೆ ರಾಜ್ಯಪಾಲರಿಗೆ ರಾಜ್ಯ ಸರ್ಕಾರ ಶಿಫಾರಸು ಮಾಡಿತ್ತು' ಎಂಬ ಆರೋಪ ಕೇಳಿಬಂದಿದೆ.

ಕೆಪಿಎಸ್‌ಸಿಯ ಒಟ್ಟು ಸದಸ್ಯರ ಪೈಕಿ ಅರ್ಧದಷ್ಟು ಸದಸ್ಯರು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಲ್ಲಿ ಕನಿಷ್ಠ 10 ವರ್ಷ ಕರ್ತವ್ಯ ಸಲ್ಲಿಸಿದವರು (ಅಫಿಶಿಯಲ್ ಕೆಟಗರಿ) ಇರಬೇಕು ಎಂದು ಸಂವಿಧಾನದ 316ನೇ ವಿಧಿಯ ಸೆಕ್ಷನ್ 1 ಹೇಳುತ್ತದೆ. ಈ ಕೆಟಗರಿಯಲ್ಲಿ ನೇಮಕಗೊಂಡಿರುವ ಶಿವಶಂಕರಪ್ಪ, ಕೇಂದ್ರ ಅಥವಾ ರಾಜ್ಯ ಸರ್ಕಾರದ ನೌಕರರೇ ಆಗಿರಲಿಲ್ಲ ಎಂದು ಗೊತ್ತಾಗಿದೆ.

5ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

### 'ನೇಮಕಾತಿ ಅಧಿಸೂಚನೆ ತಪ್ಪಾಗಿದೆ'



ಅಪಘಾತವೊಂದರಲ್ಲಿ ಗಾಯಗೊಂಡು ಕಲಬುರ್ಗಿಯ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸಂದರ್ಭದಲ್ಲಿ ನನ್ನನ್ನು ಕೆಪಿಎಸ್‌ಸಿ ಸದಸ್ಯರಾಗಿ ನೇಮಿಸಿ ಅಧಿಸೂಚನೆ ಹೊರಡಿಸಿರುವ ಮಾಹಿತಿ ಬಂದಿತ್ತು. ಅಧಿಕಾರಿಯೇತರ ವರ್ಗದಿಂದ ನೇಮಕಗೊಳ್ಳುವ ಬದಲು, ಅಧಿಕಾರಿ ವರ್ಗದಿಂದ ನೇಮಕಗೊಂಡಿದ್ದೆ. ನನ್ನ ನೇಮಕಾತಿ ಅಧಿಸೂಚನೆಯಲ್ಲಿ ತಪ್ಪಾಗಿದೆ. ಈಗ ಈ ವಿಷಯ ಯಾಕೆ ಮುನ್ನಲೆಗೆ ಬಂದಿದೆಯೆಂದು ಗೊತ್ತಿಲ್ಲ.

**ಶಿವಶಂಕರಪ್ಪ ಸಾಹುಕಾರ್,** ಕೆಪಿಎಸ್‌ಸಿ ಅಧ್ಯಕ್ಷ

### ಪಿಐಎಲ್: ಸಿ.ಎಂಗೆ ಸಿದ್ದರಾಮಯ್ಯ ಪತ್ರ

ಕೆಪಿಎಸ್‌ಸಿ ಅಧ್ಯಕ್ಷರ ನೇಮಕಾತಿ ಸಂದರ್ಭದಲ್ಲಿ ಸಂವಿಧಾನದ 316ನೇ ವಿಧಿಯ ಉಲ್ಲಂಘನೆಯಾಗಿದೆ ಎಂದು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿರುವ ವಕೀಲ ಶಶಿ ಪಿ. ಗಾಂಧಿ ಎಂಬವರು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಡಿಪಿಎಆರ್ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಶಿವಶಂಕರಪ್ಪ ಸಾಹುಕಾರ್ ಮತ್ತು ಕೆಪಿಎಸ್‌ಸಿಯನ್ನು ಪ್ರತಿವಾದಿಯಾಗಿ ಹೆಸರಿಸಿದ್ದಾರೆ.

ಅಲ್ಲದೆ, ಈ ಆರೋಪದ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

# ದೆಹಲಿ ಅಂಗಳಕ್ಕೆ ಆನಂದ್ ಬೇಡಿಕೆ

### ಎಲ್ಲವೂ ಸುಖಾಂತ್ಯ: ಮಾತುಕತೆ ಬಳಿಕ ಬೊಮ್ಮಾಯಿ ಹೇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಖಾತೆ ಬದಲಾವಣೆಗಾಗಿ ಪಟ್ಟು ಹಿಡಿದು ರಾಜೀನಾಮೆಯ 'ಗುಮ್ಮ' ಮುಂದಿಟ್ಟಿದ್ದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು, ದೆಹಲಿಗೆ ಹೋಗಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ.



ಆನಂದ್ ಸಿಂಗ್


ಖಾತೆ ಬದಲಿಸುವ ವಿಚಾರದಲ್ಲಿ ಅಂತಿಮ ತೀರ್ಮಾನವನ್ನು ವರಿಷ್ಠರೇ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ದೆಹಲಿಯಲ್ಲಿ ವರಿಷ್ಠರನ್ನು ಕಾಣುವುದೇ ಸೂಕ್ತ ಎಂಬುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು. ಆಗಸ್ಟ್ 15ರ ಬಳಿಕ, ಆನಂದ್ ದೆಹಲಿಗೆ ಹೋಗಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸಚಿವ ಸ್ಥಾನ ಸಿಗದೇ ಕುಪಿತಗೊಂಡಿರುವ ಶಾಸಕರಾದ ರಮೇಶ ಜಾರಕಿಹೊಳಿ, ಸಿ.ಪಿ.ಯೋಗೇಶ್ವರ ಅವರು ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಎಂ.ಪಿ.ರೇಣುಕಾಚಾರ್ಯ ಅವರೂ ದೆಹಲಿಗೆ ಹೋಗುವ ಸಿದ್ಧತೆ ನಡೆಸಿದ್ದಾರೆ. ಸಚಿವ ಸ್ಥಾನ ಹಾಗೂ ಖಾತೆ ಬದಲಾವಣೆಗಾಗಿ ಬೇಡಿಕೆಯನ್ನು ವರಿಷ್ಠರೇ ನಿಭಾಯಿಸಬೇಕಾದ ಸನ್ನಿವೇಶ ಸದ್ಯಕ್ಕೆ ನಿರ್ಮಾಣವಾಗಿದೆ.

**ಪಟ್ಟು ಸಡಿಲಿಸಿದ ಸಿಂಗ್:** ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಆನಂದ್ ಸಿಂಗ್ ಅವರನ್ನು ಭೇಟಿ ಮಾಡಲು ಬುಧವಾರ ರಾತ್ರಿ ಖುದ್ದು ಅಲ್ಲಿಗೆ ಹೋದ ಮುಖ್ಯಮಂತ್ರಿ ಬೊಮ್ಮಾಯಿ ಅವರು ಎರಡು ತಾಸು ಮಾತುಕತೆ ನಡೆಸಿದರು. ಈ ವೇಳೆ ಕಂದಾಯ ಸಚಿವ ಆರ್. ಅಶೋಕ, ಶಾಸಕ ರಾಜೂಗೌಡ ಕೂಡ ಇದ್ದರು.

'ವರಿಷ್ಠರ ಸೂಚನೆ ಮೇರೆಗೆ ಖಾತೆ ಹಂಚಿಕೆ ಮಾಡಲಾಗಿದೆ. ಈ ಹಂತದಲ್ಲಿ ಖಾತೆ ಬದಲಾವಣೆ ಮಾಡಲಾಗದು. ನಿಮ್ಮ ಬೇಡಿಕೆಯನ್ನು ಮುಂದಿನ ದಿನಗಳಲ್ಲಿ ದೆಹಲಿಗೆ ಹೋದಾಗ ವರಿಷ್ಠರ ಮುಂದೆ ಮಂಡಿಸುವೆ. ಅಲ್ಲಿವರೆಗೆ ಕಾಯಿರಿ' ಎಂದು ಬೊಮ್ಮಾಯಿ ಹೇಳಿದ್ದಾರೆ ಎಂದು ಗೊತ್ತಾಗಿದೆ.

5ನೇ ಪುಟ ನೋಡಿ



ನಮ್ಮಲ್ಲಿ ವಿಚಾರ ಭೇದಗಳಿಲ್ಲ. ಇದೇ 15 ರಂದು ವಿಜಯನಗರದಲ್ಲಿ ಆನಂದ್ ಸಿಂಗ್ ಧ್ವಜಾರೋಹಣ ಮಾಡಲಿದ್ದಾರೆ. ಎಲ್ಲವೂ ಸುಖಾಂತ್ಯಗೊಂಡಿದೆ

**ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ



ಸುಖಾಂತ್ಯಗೊಂಡಿದ್ದರೂ ಮಾಧ್ಯಮಗಳಿಗೆ ಹೇಳಲಾಗದ ಬೇರೆ ವಿಷಯಗಳೂ ಇವೆ. ಅಂತಿಮವಾಗಿ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗುವುದಾಗಿ ಅವರು ಹೇಳಿದ್ದಾರೆ

**ರಾಜೂಗೌಡ,** ಶಾಸಕ

### ಹಿಮಾಚಲ ಪ್ರದೇಶದ ಕಿನ್ನೌರ್‌ನಲ್ಲಿ ಅವಘಡ

# ಭೂಕುಸಿತ: 10 ಸಾವು, 30 ಜನ ನಾಪತ್ತೆ

**ಕಿನ್ನೌರ್ (ಪಿಟಿಐ):** ಹಿಮಾಚಲ ಪ್ರದೇಶದ ಕಿನ್ನೌರ್‌ನ ರೆಕಾಂಗ್ ಪಿಯೋ-ಶಿಮ್ಲಾ ಹೆದ್ದಾರಿಯ ಛಾವುರಾ ಎಂಬಲ್ಲಿ ಸಂಭವಿಸಿದ ಭೂಕುಸಿತದಲ್ಲಿ 10 ಮಂದಿ ಮೃತಪಟ್ಟಿದ್ದಾರೆ. 30ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದಾರೆ.

ಭೂಕುಸಿತದ ವೇಳೆ ಹೆದ್ದಾರಿಯಲ್ಲಿದ್ದ ಬಸ್, ಟ್ರಕ್ ಮತ್ತು ಹಲವು ಕಾರುಗಳು ಕಲ್ಲು-ಮಣ್ಣಿನಡಿಯಲ್ಲಿ ಸಿಲುಕಿವೆ. ಬಸ್‌ನಲ್ಲಿ 40ಕ್ಕೂ ಹೆಚ್ಚು ಪ್ರಯಾಣಿಕರಿದ್ದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭೂಕುಸಿತದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಸ್, ಟ್ರಕ್ ಮತ್ತು ಕಾರುಗಳು ಅವಶೇಷಗಳ ಅಡಿ ಸಿಲುಕುವ ದೃಶ್ಯ ವಿಡಿಯೊದಲ್ಲಿದೆ. ಭೂಕುಸಿತ ಸಂಭವಿಸಿದ ಸ್ಥಳಕ್ಕೆ ಇಂಡೊ-ಟಿಬೆಟಿಯನ್ ಗಡಿ ಭದ್ರತಾ ಪಡೆ ಪೊಲೀಸರು (ಐಟಿಬಿಪಿ) ಭೇಟಿ ನೀಡಿ, ರಕ್ಷಣಾ ಕಾರ್ಯ ನಡೆಸಿದ್ದಾರೆ.

6ನೇ ಪುಟ ನೋಡಿ

### ಮೂರು ಮಹಾನಗರಪಾಲಿಕೆ ಸೆ. 3ಕ್ಕೆ ಚುನಾವಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮತ್ತು ಕಲಬುರ್ಗಿ ಮಹಾನಗರ ಪಾಲಿಕೆಗಳಿಗೆ ರಾಜ್ಯ ಚುನಾವಣಾ ಆಯೋಗ ಚುನಾವಣಾ ದಿನಾಂಕವನ್ನು ಬುಧವಾರ ಪ್ರಕಟಿಸಿದ್ದು, ಸೆ. 3ರಂದು ಮತದಾನ, 6ರಂದು ಮತಗಳ ಎಣಿಕೆ ನಡೆಯಲಿದೆ.

ಕೋವಿಡ್ ನೆಪ ಮುಂದಿಟ್ಟುಕೊಂಡು ಚುನಾವಣೆ ಮುಂದೂಡುವಂತೆ ರಾಜ್ಯ ಸರ್ಕಾರ ಕೋರಿತ್ತು. ಆದರೆ, ಈ ಕಾರಣ ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿದ್ದ ಹೈಕೋರ್ಟ್, ಬಾಕಿ ಉಳಿದಿರುವ ಮಹಾನಗರ ಪಾಲಿಕೆ ಹಾಗೂ ನಗರಸಭೆಗಳಿಗೆ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿತ್ತು.

### ಹಳ್ಳಿಗಳಿಗೆ 7 ಗಂಟೆ ತ್ರೀಫೇಸ್ ವಿದ್ಯುತ್

**ಬೆಂಗಳೂರು:** ರಾಜ್ಯದ ಎಲ್ಲ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ 7 ಗಂಟೆಗಳ ಕಾಲ ತ್ರೀಫೇಸ್ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚನೆ ನೀಡಿದರು. 5

### ಕೋಲಾಹಲ, ಗದ್ದಲದ ಸಂಸತ್ ಕಲಾಪ ಅಂತ್ಯ

**ನವದೆಹಲಿ:** ಗದ್ದಲ–ಕೋಲಾಹಲವನ್ನೇ ಹೆಚ್ಚು ಕಂಡ ಸಂಸತ್ತಿನ ಮುಂಗಾರು ಅಧಿವೇಶನವು ನಿಗದಿತ ಅವಧಿಗೆ ಎರಡು ದಿನ ಮುಂಚೆಯೇ ಬುಧವಾರ ಕೊನೆಗೊಂಡಿತು. 8










ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಕಳವಳ

# ‘ಸಾಂಕ್ರಾಮಿಕವಲ್ಲದ ರೋಗಗಳಿಂದ ಸಾವಿನ ಪ್ರಮಾಣ ಹೆಚ್ಚಳ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಾಂಕ್ರಾಮಿಕವಲ್ಲದ ರೋಗಗಳಿಂದ ಸಾವಿನ ಪ್ರಮಾಣ ಹೆಚ್ಚುತ್ತಿದೆ. ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿ, ಚಿಕಿತ್ಸೆ ನೀಡುವ ಕೆಲಸ ಆಗಬೇಕು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.




ಇಲಾಖೆಯ ಅಧಿಕಾರಿಗಳ ಜತೆಗೆ ಬುಧವಾರ ಸಭೆ ನಡೆಸಿದ ಅವರು, ಪ್ರಸಕ್ತ ವರ್ಷದ ಕಾರ್ಯಕ್ರಮಗಳು ಮತ್ತು ಅನುದಾನದ ಪ್ರಸ್ತಾವನೆಗಳ ಬಗ್ಗೆ ಪರಿಶೀಲನೆ ನಡೆಸಿದರು.

‘ಸಾಂಕ್ರಾಮಿಕವಲ್ಲದ ರೋಗಗಳ ಸಾವನ್ನು ತಡೆಯಲು ವಿವಿಧ ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಬರುವವರಿಗೆ ರಕ್ತ ಹಾಗೂ ಇತರೆ ಪರೀಕ್ಷೆಗಳನ್ನು ನಡೆಸಿ, ರೋಗಗಳನ್ನು ಪತ್ತೆ ಮಾಡಬೇಕು. ಅದನ್ನು ದಾಖಲಿಸುವ ಕೆಲಸ ಕೂಡ ಆಗಬೇಕು. ಅದಕ್ಕಾಗಿ ಕೆಲ ಆರೋಗ್ಯ ಕಾರ್ಯಕ್ರಮಗಳ ಮರು ವಿನ್ಯಾಸ ಮಾಡಿಕೊಳ್ಳುವ ಅಗತ್ಯವಿದೆ. ಸಾಂಕ್ರಾಮಿಕವಲ್ಲದ ರೋಗಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಕೆಲಸವೂ ಆಗಬೇಕಿದೆ. ಇದಕ್ಕಾಗಿ ಇಲಾಖೆಯ ಮಾಹಿತಿ ವಿಭಾಗವು ಹೆಚ್ಚು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಬೇಕು’ ಎಂದರು.

‘ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಜಾರಿಗೊಳಿಸುತ್ತಿರುವ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ನೀಲನಕ್ಷೆ ರೂಪಿಸಬೇಕು. ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಬೇಕು. ಅದಕ್ಕಾಗಿ ಪ್ರತಿಯೊಂದು ಕಾರ್ಯಕ್ರಮಗಳನ್ನೂ ಜನಸ್ನೇಹಿಯಾಗಿ ಮರುವಿನ್ಯಾಸಗೊಳಿಸುವ ಅಗತ್ಯವಿದೆ’ ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

‘ಜೀವಸಾರ್ಥಕತೆ ವಿಭಾಗವೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ. ಅಂಗಾಂಗ ದಾನ ಮತ್ತು ಚಿಕಿತ್ಸೆಯು ಎಲ್ಲ ಬಡವರಿಗೂ ಕೈಗೆಟಕುವ ರೀತಿಯಲ್ಲಿ ಜಾರಿಗೊಳ್ಳಬೇಕಿದೆ. ನೆರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ರಾಜ್ಯದಲ್ಲಿ ಈ ಕಾರ್ಯಕ್ರಮ ನಿರೀಕ್ಷಿತ ವೇಗದಲ್ಲಿ ನಡೆಯುತ್ತಿಲ್ಲ’ ಎಂದರು.

ಸಭೆಯಲ್ಲಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಆಯುಕ್ತ ಡಾ. ಕೆ.ವಿ. ತ್ರಿಲೋಕ್ ಚಂದ್ರ, ಎನ್‌ಎಚ್‌ಎಂ ನಿರ್ದೇಶಕಿ ಡಾ. ಅರುಂಧತಿ ಚಂದ್ರಶೇಖರ್ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು ಇದ್ದರು.




## ದೇಶದಲ್ಲಿ 41,574 ಪ್ರಕರಣಗಳು ಪತ್ತೆ

**ನವದೆಹಲಿ(ಪಿಟಿಐ):** ‘ಭಾರತದಲ್ಲಿ ಒಂದೇ ದಿನ 41,574 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 3,20,36,511 ಕ್ಕೆ ಏರಿಕೆಯಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಬುಧವಾರ ತಿಳಿಸಿದೆ.

‘ಬುಧವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ 497 ಜನರು ಸೋಂಕಿನಿಂದ ಸಾವಿಗೀಡಾಗಿದ್ದು, ಈವರೆಗೆ ಒಟ್ಟು 4,29,179 ಮಂದಿ ಮೃತಪಟ್ಟಿದ್ದಾರೆ.

ಇದೇ ವೇಳೆ ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆಯು 3,86,351ಕ್ಕೆ ಇಳಿದಿದ್ದು, ಇದು 140 ದಿನಗಳ ಬಳಿಕ ವರದಿಯಾದ ಅತಿ ಕಡಿಮೆ ಸಂಖ್ಯೆಯ ಸಕ್ರಿಯ ಪ್ರಕರಣವಾಗಿದೆ. ಒಟ್ಟು ಪ್ರಕರಣಗಳ ಪೈಕಿ ಸಕ್ರಿಯ ಪ್ರಕರಣಗಳು ಶೇಕಡ 1.21 ರಷ್ಟು ಭಾಗವನ್ನು ಹೊಂದಿದೆ. ದೇಶದ ಚೇತರಿಕೆ ಪ್ರಮಾಣವು ಶೇಕಡ 97.45 ರಷ್ಟಿದೆ’ ಎಂದು ಸಚಿವಾಲಯ ತಿಳಿಸಿದೆ.

## ಕೈಗಾರಿಕೆಗಳ ಮೇಲಿದೆ ಸ್ವಾವಲಂಬಿ ಭಾರತದ ಯಶಸ್ಸು: ಪ್ರಧಾನಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ‘ಆರ್ಥಿಕತೆಯು ಮತ್ತೊಮ್ಮೆ ವೇಗ ಪಡೆದುಕೊಳ್ಳುತ್ತಿದೆ. ಇದೇ ವೇಳೆ ದೇಶದಲ್ಲಿ ‘ಮೇಕ್-ಇನ್-ಇಂಡಿಯಾ’ ಹೊಸ ವಿಶ್ವಾಸವನ್ನು ತುಂಬಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹೇಳಿದರು.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು ಅವರು, ಸರ್ಕಾರವು ಕೋವಿಡ್ ಸಂದರ್ಭದಲ್ಲಿಯೂ ದಿಟ್ಟ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಇದನ್ನು ಕೈಗಾರಿಕೆಗಳು ಸಮರ್ಪಕವಾಗಿ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸ್ವಾವಲಂಬಿ ಭಾರತ ಅಭಿಯಾನದ ಯಶಸ್ಸಿನ ಪ್ರಮುಖ ಜವಾಬ್ದಾರಿ ಭಾರತೀಯ ಕೈಗಾರಿಕೆಗಳ ಮೇಲಿದೆ ಎಂದು ಅವರು ಹೇಳಿದರು.

ಕಳೆದ ಕೆಲ ವರ್ಷಗಳಲ್ಲಿ ತೆಗೆದುಕೊಂಡ ಕಠಿಣ ನಿರ್ಧಾರಗಳು ಮತ್ತು ಮಾಡಿದ ಸುಧಾರಣೆಗಳಿಂದಾಗಿ ಭಾರತಕ್ಕೆ ದಾಖಲೆ ಪ್ರಮಾಣದಲ್ಲಿ ವಿದೇಶಿ ನೇರ ಹೂಡಿಕೆ ಹರಿದು ಬರುತ್ತಿದೆ ಎಂದು ಅವರು ತಿಳಿಸಿದರು.

## ಬೇಗೂರು ಕೆರೆಯಲ್ಲಿ ಪ್ರತಿಮೆ ಅನಾವರಣ: ಕ್ರಮಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೇಗೂರು ಕೆರೆಯಲ್ಲಿ ಕೃತಕವಾಗಿ ನಿರ್ಮಿಸಿರುವ ದ್ವೀಪದಲ್ಲಿನ ಪ್ರತಿಮೆ ಅನಾವರಣಗೊಳಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಆಯುಕ್ತರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ. ಕೆರೆಯ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆಯೇ ಎಂಬುದನ್ನು ಖಚಿತಪಡಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ತಡೆಯಾಜ್ಞೆಯ ನಡುವೆಯೂ ಕೆರೆಯಲ್ಲಿನ ಪ್ರತಿಮೆ ಅನಾವರಣಗೊಳಿಸಲಾಗಿದೆ ಎಂದು ಪರಿಸರ ಸಂರಕ್ಷಕರ ಗುಂಪು ಸಲ್ಲಿಸಿದ್ದ ಮೆಮೊ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ಹೊರಡಿಸಿತು.

ತಡೆಯಾಜ್ಞೆ ಆದೇಶದಿಂದ ಯಾರ ಮನಸಿಗಾದರೂ ನೋವಾಗಿದ್ದರೆ ಕಾನೂನಿನ ಅಡಿಯಲ್ಲೇ ಪರಿಹಾರ ಕಂಡುಕೊಳ್ಳಲು ಅವಕಾಶ ಇದೆ. ಆದರೆ, ಮುಚ್ಚಿರುವ ಪ್ರತಿಮೆಯನ್ನು ಪದೇ ಪದೇ ತೆಗೆದು ಅನಾವರಣಗೊಳಿಸುತ್ತಿರುವುದು ಆಘಾತಕಾರಿ ಸಂಗತಿ. ಹಾಳಾಗಿರುವ ಕೆರೆಯ ಸ್ವರೂಪ ಪುನರ್ ಸ್ಥಾಪಿಸುವುದು ಆದೇಶದ ಉದ್ದೇಶ. ಅದನ್ನು ತಿರಸ್ಕರಿಸುವುದು ಕಾನೂನುಬಾಹಿರ’ ಎಂದು ಪೀಠ ಹೇಳಿತು.

‘ಕೆರೆಯ ಮಧ್ಯದಲ್ಲಿ ದ್ವೀಪ ನಿರ್ಮಿಸಲು ಕಾನೂನಿನ ಅಡಿಯಲ್ಲಿ ಅವಕಾಶ ಇದೆಯೇ ಎಂಬುದು ಅರ್ಜಿದಾರರ ಪ್ರಶ್ನೆಗಳಾಗಿವೆ. ಯಾವುದೇ ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ಅರ್ಜಿಗಳು ಒಳಗೊಂಡಿಲ್ಲ’ ಎಂದು ಪೀಠ ಸ್ಪಷ್ಟಪಡಿಸಿತು. ಮುಂದಿನ ಮಂಗಳವಾರದೊಳಗೆ ಅನುಸರಣಾ ವರದಿ ಸಲ್ಲಿಸಬೇಕು. ಪ್ರತಿಮೆಯನ್ನು ಮತ್ತೆ ಮುಚ್ಚಲು ಪೊಲೀಸರ ರಕ್ಷಣೆಯನ್ನು ಬಿಬಿಎಂಪಿ ಪಡೆಯಬೇಕು. ಹಾರಾಡುತ್ತಿರುವ ಧ್ವಜಗಳನ್ನು ತೆರವುಗೊಳಿಸಬೇಕು ಎಂದು ಪೀಠ ತಿಳಿಸಿತು.

## ಹಾರ ತುರಾಯಿ ಬದಲು ಕನ್ನಡ ಪುಸ್ತಕ: ಬಿಬಿಎಂಪಿ ಸುತ್ತೋಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರ ಏರ್ಪಡಿಸುವ ಸಭೆ ಸಮಾರಂಭಗಳಲ್ಲಿ ಹಾರ–ತುರಾಯಿ ನೀಡುವ ಬದಲು ಕನ್ನಡ ಪುಸ್ತಕಗಳನ್ನು ಕಾಣಿಕೆಯಾಗಿ ನೀಡುವ ಸಂಪ್ರದಾಯಕ್ಕೆ ರಾಜ್ಯ ಸರ್ಕಾರ ನಾಂದಿ ಹಾಡಿದ ಬೆನ್ನಲ್ಲೇ ಬಿಬಿಎಂಪಿಯೂ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿದೆ.

ಬಿಬಿಎಂಪಿ ಏರ್ಪಡಿಸುವ ಎಲ್ಲ ಸಭೆ-ಸಮಾರಂಭಗಳಲ್ಲಿ ಹೂಗುಚ್ಛ, ಹಾರ-ತುರಾಯಿ, ಹಣ್ಣಿನ ಬುಟ್ಟಿ, ಶಾಲು, ನೆನಪಿನ ಕಾಣಿಕೆ ನೀಡುವ ಶಿಷ್ಟಾಚಾರವನ್ನು ರದ್ದುಪಡಿಸಲಾಗಿದೆ. ಇಂತಹ ಉಡುಗೊರೆಗಳ ಬದಲು ರಾಜ್ಯದ ಆಡಳಿತ ಭಾಷೆಯಾದ ಕನ್ನಡ ಪುಸ್ತಕಗಳನ್ನು ನೀಡಬಹುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಬುಧವಾರ ಸುತ್ತೋಲೆ ಹೊರಡಿಸಿದ್ದಾರೆ.

‘ರಾಜ್ಯ ಸರ್ಕಾರ ಮತ್ತು ಸರ್ಕಾರದ ಅಧೀನದ ಸಂಸ್ಥೆಗಳು ಏರ್ಪಡಿಸುವ ಸಭೆ-ಸಮಾರಂಭಗಳಲ್ಲಿ ಹೂಗುಚ್ಛ, ಹಾರ-ತುರಾಯಿ, ಹಣ್ಣಿನ ಬುಟ್ಟಿಗಳನ್ನು ಉಡುಗೊರೆಯನ್ನಾಗಿ ನೀಡಬಾರದು. ಶಾಲು ಹೊದಿಸಬಾರದು ಹಾಗೂ ಅದರ ಬದಲು ಕನ್ನಡ ಪುಸ್ತಕಗಳನ್ನು ನೀಡಬಹುದು ಎಂದು ಸರ್ಕಾರ ನಿರ್ದೇಶಿಸಿದೆ. ಈ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ತಪ್ಪಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಮುಖ್ಯ ಆಯುಕ್ತರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

## ಚಿತ್ರಾವಳಿ




ಬೆಂಗಳೂರಿನ ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ಡಾ. ರಾಜ ಕುಮಾರ್ ಅವರ ಸಮಾಧಿ ಬಳಿ ಕೊರೊನಾ ಸೇನಾನಿಗಳು ಬುಧವಾರ ನಟಿ ಮಾಳವಿಕಾ ಅವಿನಾಶ್ ಅವರೊಂದಿಗೆ ಸೆಲ್ಫಿ ತೆಗೆದುಕೊಂಡರು



ನಗರದ ಮಲ್ಲೇಶ್ವರದಲ್ಲಿರುವ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು ಪ್ರವೇಶಕ್ಕಾಗಿ ಅರ್ಜಿಗಳನ್ನು ಪಡೆಯಲು ಬುಧವಾರ ಕಾಯುತ್ತಿರುವ ವಿದ್ಯಾರ್ಥಿಗಳು ಮತ್ತು ಪೋಷಕರು



ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಬಾಲಕಿಗೆ ಬುಧವಾರ ಕೋವಿಡ್ ಪರೀಕ್ಷೆ ಮಾಡಲಾಯಿತು – ಪ್ರಜಾವಾಣಿ ಚಿತ್ರಗಳು




ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ



ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಬುಧವಾರ ಬೆಸ್ಕಾಂ ಸಿಬ್ಬಂದಿಯೊಬ್ಬರು ಬೀದಿದೀಪ ದುರಸ್ತಿ ಮಾಡುತ್ತಿರುವುದು ಕಂಡುಬಂತು –ಪ್ರಜಾವಾಣಿ ಚಿತ್ರ

## ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ಕೆಲವೆಡೆ ಆ.12 ಮತ್ತು 13ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ರಾಜರಾಜೇಶ್ವರಿ ನಗರದ ರಂಗನಾಥ ಕಾಲೊನಿ, ಸಿ.ಎನ್. ಪಾಳ್ಯದ ಸರ್ಕಾರಿ ಶಾಲೆ ಸುತ್ತಮುತ್ತ, ಟಿ.ಜಿ ಪಾಳ್ಯ, ದುಬಾಸಿಪಾಳ್ಯ, ಟೆಲಿಕಾಂ ಲೇಔಟ್, ಮಾರುತಿನಗರದಲ್ಲಿ ಆ.12ರಂದು ವ್ಯತ್ಯಯವಾಗಲಿದೆ. ಆ.13ರಂದು ಹೊಸಕೆರೆಹಳ್ಳಿ, ಬಿಇಎಂಎಲ್ ರಸ್ತೆ, ಸುವರ್ಣನಗರ, ಕೆ.ಎಚ್.ಬಿ. ಪ್ಲಾಟೀನಂ, ಸರ್ ಎಂ.ವಿ. ಲೇಔಟ್, ದೊಡ್ಡಬಸ್ತಿಯಲ್ಲಿ ವ್ಯತ್ಯಯವಾಗಲಿದೆ.

ಇನ್ನೊಂದೆಡೆ ತುರ್ತು ನಿರ್ವಹಣಾ ಕಾರ್ಯ ನಿಮಿತ್ತ ಆ.13ರಂದು ಸೆಸ್ನಾ ಗಾರ್ಡನ್, ಹೊರ ವರ್ತುಲ ರಸ್ತೆ, ಸೆಂಟ್ರಲ್ ಮಾಲ್, ಶೋಭಾ ಅಪಾರ್ಟ್‌ಮೆಂಟ್, ತಕ್ಷಶಿಲಾ ಹೆಲ್ತ್ ಕೇರ್, ಸರ್ಜಾಪುರ ರಸ್ತೆ, ಇಬ್ಬಲೂರು, ಬೆಳ್ಳಂದೂರು, ಅಂಬಲೀಪುರ, ಹರಳೂರು ರಸ್ತೆ, ಕಸವನಹಳ್ಳಿ, ಕೈಕೊಂಡ್ರಹಳ್ಳಿ, ಜುನ್ನಸಂದ್ರ, ಹಾಲನಾಯಕನಹಳ್ಳಿ ಸುತ್ತಮುತ್ತಲ ವಿದ್ಯುತ್ ವ್ಯತ್ಯಾಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

# ‘ರಾಷ್ಟ್ರೀಯ ಶಿಕ್ಷಣ ನೀತಿ: ತಜ್ಞರೊಂದಿಗೆ ಚರ್ಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ಕುರಿತಂತೆ ಇರುವ ತೊಡಕುಗಳ ನಿವಾರಣೆಗಾಗಿ ಕಾನೂನು ಮತ್ತು ಶಿಕ್ಷಣ ತಜ್ಞರು, ಅಧ್ಯಾಪಕ ಪ್ರತಿನಿಧಿಗಳು ಹಾಗೂ ವಿಧಾನ ಮಂಡಲದಲ್ಲಿ ಚರ್ಚಿಸಿ, ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, ‘ಶಿಕ್ಷಣ ನೀತಿಯನ್ನು ಈ ವರ್ಷದಿಂದಲೇ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಇದೇ 7ಕ್ಕೆ ಆದೇಶ ಹೊರಡಿಸಿದೆ. ಪದವಿ ತರಗತಿಗಳಲ್ಲಿ ಒಂದು ವರ್ಷಕ್ಕೆ ಮಿತಿಗೊಳಿಸಿದ್ದ ಭಾಷಾ ಬೋಧನೆಯ ಪ್ರಸ್ತಾವನೆಯನ್ನು ಬದಲಾಯಿಸಿ, ಎರಡು ವರ್ಷಗಳ ಅವಧಿಗೆ ವಿಸ್ತರಿಸಲಾಗಿದೆ. ಕನ್ನಡ ಭಾಷಾ ವಿಷಯವನ್ನು ಕಡ್ಡಾಯಗೊಳಿಸಿರುವ ಈ ಆದೇಶದ ಕ್ರಮವನ್ನು ಸ್ವಾಗತಿಸುತ್ತೇನೆ’ ಎಂದು ಹೇಳಿದ್ದಾರೆ.



ಬರಗೂರು ರಾಮಚಂದ್ರಪ್ಪ

‘ಭಾಷಾ ಅಲ್ಪಸಂಖ್ಯಾತರಿಗೆ ಅವರ ಮಾತೃಭಾಷೆಯಲ್ಲಿ ಅಭ್ಯಾಸಕ್ಕೆ ಅವಕಾಶವಿಲ್ಲದೆ ಇರುವುದರಿಂದ ಎದುರಾಗುವ ಕಾನೂನು ತೊಡಕುಗಳನ್ನೂ ಗಮನಿಸಬೇಕು. ಗೋಕಾಕ್ ವರದಿಗೆ ಅನುಗುಣವಾಗಿ 1982ರ ಜು.20 ರಂದು ಆದೇಶ ಹೊರಡಿಸಿದ್ದ ಕರ್ನಾಟಕ ಸರ್ಕಾರ, ಪ್ರೌಢಶಾಲೆಯಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನು ಕಡ್ಡಾಯ ಮಾಡಿತ್ತು. ಆದರೆ, ಈ ಆದೇಶವನ್ನು ಹೈಕೋರ್ಟ್ ರದ್ದು ಮಾಡಿತ್ತು. ಹಾಗಾಗಿ, ಕನ್ನಡ ಕಡ್ಡಾಯಕ್ಕೆ ಎದುರಾಗುವ ಕಾನೂನಾತ್ಮಕ ತೊಡಕುಗಳನ್ನು ಈಗಲೇ ನಿವಾರಣೆ ಮಾಡಿಕೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

‘ಶಿಕ್ಷಣ ನೀತಿಯ ಅನುಷ್ಠಾನದ ಆದೇಶವು ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಿಗೆ ಮಾತ್ರ ಅನ್ವಯಿಸುತ್ತಿದೆ. ಡೀಮ್ಡ್ ಮತ್ತು ಖಾಸಗಿ ವಿದ್ಯಾಲಯಗಳು ತಮ್ಮದೇ ಆದ ದಾರಿ ಹಿಡಿಯಲು ಅವಕಾಶವಾಗಿದೆ’ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

‘ಸ್ವಾಯತ್ತ ಕಾಲೇಜುಗಳು ಸರ್ಕಾರ ಸೂಚಿಸಿದ ಪಠ್ಯಕ್ರಮದ ಶೇ 30 ರಷ್ಟನ್ನು ಬದಲಾಯಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿವೆ. ಹೀಗಾಗಿ, ಕನ್ನಡ ಕಡ್ಡಾಯ ಮತ್ತು ಎರಡು ವರ್ಷದ ಬೋಧನಾವಧಿಯನ್ನು ಉಲ್ಲಂಘಿಸುವ ಸಾಧ್ಯತೆ ಹೆಚ್ಚಿದೆ. ಇವರನ್ನು ನಿಯಂತ್ರಿಸಲು ಸರ್ಕಾರಿ ಆದೇಶ ಸಾಕಾಗದಿದ್ದರೆ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತಂದು,ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಒಪ್ಪಿಗೆ ಪಡೆಯಬೇಕಾಗುತ್ತದೆ. ಈ ಎಲ್ಲ ತೊಡಕುಗಳ ನಿವಾರಣೆಗೆ ಚರ್ಚೆ ನಡೆಸಿ, ನಿರ್ಣಯ ತಗೆದುಕೊಳ್ಳುವುದು ಸೂಕ್ತ’ ಎಂದು ಅವರು ಹೇಳಿದ್ದಾರೆ.

## ಡಿಆರ್‌ಡಿಒ: ಕ್ಷಿಪಣಿಯ ಯಶಸ್ವಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಸ್ವದೇಶಿ ತಂತ್ರಜ್ಞಾನದ ‘ಮಾಣಿಕ್’ ಟರ್ಬೋಫ್ಯಾನ್ ಎಂಜಿನ್‌ನೊಂದಿಗೆ ನಿರ್ಮಿಸಿದ ‘ನಿರ್ಭಯ್’ ಖಂಡಾಂತರ ಕ್ಷಿಪಣಿಯನ್ನು ಬುಧವಾರ ಯಶಸ್ವಿಯಾಗಿ ಪರೀಕ್ಷಿಸಿದೆ.

ಈ ಕ್ಷಿಪಣಿಯನ್ನು ಬೆಂಗಳೂರಿನ ಡಿಆರ್‌ಡಿಒ ಪ್ರಯೋಗಾಲಯವಾದ ‘ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್’ ವಿನ್ಯಾಸಗೊಳಿಸಿದೆ. ಈ ಎಂಜಿನ್ ಅನ್ನು ಡಿಆರ್‌ಡಿಒದ ಮತ್ತೊಂದು ಪ್ರಯೋಗಾಲಯ, ‘ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್’ (ಜಿಟಿಆರ್‌ಇ) ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಿದೆ. ಇದು ಸಹ ಬೆಂಗಳೂರಿನಲ್ಲಿಯೇ ಇದೆ.

ಒಡಿಶಾದ ಕರಾವಳಿಯಲ್ಲಿರುವ ಮಿಲಿಟರಿ ಪರೀಕ್ಷಾ ಕೇಂದ್ರದಿಂದ ಕ್ಷಿಪಣಿಯನ್ನು ಹಾರಿಸಲಾಯಿತು. ಇದು 15 ನಿಮಿಷಗಳಲ್ಲಿ 150 ಕಿ.ಮೀ ಕ್ರಮಿಸಿತು.

# ‘ಪೋಕ್ಸೊ: ವಯಸ್ಸಿನ ಮಿತಿ ಇಳಿಕೆಗೆ ಒತ್ತಡವಿಲ್ಲ’

ನವದೆಹಲಿ(ಪಿಟಿಐ): ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯಡಿ ವಿಚಾರಣೆಗೆ ಒಳಪಡಿಸುವ ಆರೋಪಿಗಳ ವಯಸ್ಸಿನ ಮಿತಿಯನ್ನು 18 ವರ್ಷದಿಂದ 16 ವರ್ಷಕ್ಕೆ ಇಳಿಸುವಂತೆ ಒತ್ತಡ ಹೇರದಿರಲು ಸಂಸದೀಯ ಸಮಿತಿ ನಿರ್ಧರಿಸಿದೆ.

‘ಪೋಕ್ಸೊ ಪ್ರಕರಣದಡಿ ಬರುವ ವಯೋಮಾನದವರು ಮಾಡುವ ಹೀನಾಯ ಅಪರಾಧಗಳಿಗೆ ಶಿಕ್ಷೆ ವಿಧಿಸಲು ಈಗಿರುವ ಕಾನೂನುಗಳೇ ಸಾಕು ಎಂದು ಸರ್ಕಾರ ಪ್ರತಿಪಾದಿಸಿದ ನಂತರ, ಸಮಿತಿ ಈ ನಿರ್ಧಾರ ಕೈಗೊಂಡಿದೆ.

ರಾಜ್ಯಸಭಾ ಸದಸ್ಯ ಮತ್ತು ಕಾಂಗ್ರೆಸ್ ನಾಯಕ ಆನಂದ ಶರ್ಮಾ ನೇತೃತ್ವದ ಗೃಹ ವ್ಯವಹಾರಗಳ ಕುರಿತ ಸಂಸದೀಯ ಸ್ಥಾಯಿ ಸಮಿತಿ, ‘ಪೋಕ್ಸೊ ಕಾಯ್ದೆಯಡಿ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಈ ಪ್ರಕರಣಗಳಲ್ಲಿ ಆರೋಪಿಗಳ ವಯಸ್ಸು ಗಮನಿಸಿದರೆ ಕಾನೂನು ಅನ್ವಯಿಸಲು ಆಗುವುದಿಲ್ಲ ಎಂದು ಹೇಳಿತ್ತು.

# ಮೈಸೂರು ಜಿಲ್ಲೆಯಲ್ಲಿ ಮಿದುಳು ಜ್ವರ ಪತ್ತೆ

ಪ್ರಜಾವಾಣಿ ವಾರ್ತೆ

ಜಯಪುರ (ಮೈಸೂರು ಜಿಲ್ಲೆ): ಹೋಬಳಿಯ ಕೆಲ್ಲಹಳ್ಳಿಯ 4 ವರ್ಷದ ಬಾಲಕನಿಗೆ ಮಿದುಳು ಜ್ವರ (ಜಪಾನೀಸ್ ಬಿ ಎನ್‌ಕೆಫಾಲೆಟಿಸ್)ಇರುವುದು ಪತ್ತೆಯಾಗಿದೆ. 2 ವರ್ಷದ ಹಿಂದೆ ಈ ಬಗೆಯ ಜ್ವರ ಜಿಲ್ಲೆಯಲ್ಲಿ ಕಂಡು ಬಂದಿತ್ತು.

ತೀವ್ರ ಜ್ವರದಿಂದ ಬಳಲುತ್ತಿರುವ ಬಾಲಕನನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಕ್ಕೆ ಆರೋಗ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಈಚೆಗೆ ಜ್ವರದಿಂದ ಬಳಲಿದವರ ರಕ್ತದ ಮಾದರಿಗಳನ್ನು ಪಡೆದು ಪರೀಕ್ಷೆಗೆ ಕಳುಹಿಸಿದ್ದಾರೆ.



ಜಯಪುರ ಹೋಬಳಿಯ ಕೆಲ್ಲಹಳ್ಳಿ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ ‘ಮಿದುಳು ಜ್ವರ ಪತ್ತೆಯಾಗಿದೆ. ಆತಂಕಪಡುವ ಅಗತ್ಯವಿಲ್ಲ’ ಎಂದರು.

‘ಸೊಳ್ಳೆಯಿಂದಹರಡುವ‘ಜಪಾನಿಸ್ ಬಿ ಎನ್‌ಕೆಫಾಲೆಟಿಸ್’ ಪ್ರಕರಣ ಕೆಲ್ಲಹಳ್ಳಿಯಲ್ಲಿ ಕಂಡುಬಂದಿದೆ. ರೋಗ ಇರುವ ವೈರಸ್ ಅನ್ನು ಸೊಳ್ಳೆಯು ಮನುಷ್ಯನಿಂದ ಹಂದಿಗೆ ಮೊದಲು ರವಾನಿಸುತ್ತದೆ. ಹಂದಿಯಲ್ಲಿ ಬೆಳವಣಿಗೆಯಾದ ಅದೇ ವೈರಸ್ ಮತ್ತೆ ಸೊಳ್ಳೆಯಿಂದ ಮನುಷ್ಯನಿಗೆ ಹರಡುತ್ತದೆ’ ಎಂದು ಮಾಹಿತಿ ನೀಡಿದರು.

## ಸುದ್ದಿ 2 ನಿಮಿಷ

### 15ಕ್ಕೆ ಉಚಿತ ಶ್ರವಣ ತಪಾಸಣೆ ಶಿಬಿರ

ಬೆಂಗಳೂರು: ಎಸ್.ಜಿ.ಎಸ್. ವಾಗ್ದೇವಿ ಸಂಸ್ಥೆಯು ಇದೇ 15ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಉಚಿತ ವಾಕ್-ಶ್ರವಣ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.

ಮಾತಿನ ತೊಂದರೆ, ಉಗ್ಗುವುದು, ಉಚ್ಚಾರಣೆ ದೋಷ, ಧ್ವನಿಯ ತೊಂದರೆ, ಎರಡು ವರ್ಷಗಳಾದರೂ ಮಾತನಾಡದಿರುವುದು, ಪಾರ್ಶ್ವವಾಯುವಿನಿಂದ ಮಾತು ನಿಂತು ಹೋಗಿರುವುದು ಹಾಗೂ ಕಿವಿ ಕೇಳಿಸದಿರುವಿಕೆ ಸಮಸ್ಯೆ ಎದುರಿಸುತ್ತಿದ್ದಲ್ಲಿ ಉಚಿತ ವಾಕ್, ಶ್ರವಣ ಪರೀಕ್ಷೆ ನಡೆಸಲಾಗುತ್ತದೆ ಎಂದು ಸಂಸ್ಥೆಯ ಡಾ. ಶಾಂತಾ ರಾಧಾಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸ್ಥಳ:** ಎಸ್.ಜಿ.ಎಸ್. ವಾಗ್ದೇವಿ ಸಂಸ್ಥೆ, 3ನೇ ಸಿ ಮುಖ್ಯರಸ್ತೆ, 7ನೇ ಕ್ರಾಸ್, ಗಿರಿನಗರ 2ನೇ ಹಂತ, ಗಣಪತಿ ಆಶ್ರಮದ ಹತ್ತಿರ, ಬೆಂಗಳೂರು.

**ದೂರವಾಣಿ ಸಂ.:** 080-26727141 ಅಥವಾ 9606212030

## ‘ಕನ್ನಡವೇ ಸಾರ್ವಭೌಮ ಎಂಬ ನಿಲುವು ನನ್ನದು’



ಬೆಂಗಳೂರು: ‘ದೇಶದ ಯಾವುದೇ ರಾಜ್ಯವಿರಲಿ ಅಲ್ಲಿನ ಸ್ಥಳೀಯ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲೇಬೇಕು. ಭಾಷೆಯ ಅನುಷ್ಠಾನದ ಪ್ರಸ್ತಾಪ ಬಂದರೆ ಕನ್ನಡವೇ ಸಾರ್ವಭೌಮ ಎಂಬ ನಿಲುವು ನನ್ನದು’ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಹಾಗೂ ಕಾರ್ಯದರ್ಶಿ ಸಂತೋಷ ಹಾನಗಲ್ಲ ಅವರು ರಾಜ್ಯಪಾಲರನ್ನು ಬುಧವಾರ ಭೇಟಿ ಮಾಡಿ, ಪ್ರಾಧಿಕಾರದ ಪ್ರಮುಖ ಪ್ರಕಟಣೆಗಳು ಹಾಗೂ ಕಾರ್ಯಯೋಜನೆಗಳ ಅವಲೋಕನದ ಕೈಪಿಡಿಗಳನ್ನು ನೀಡಿದರು.

ರಾಜ್ಯದ ಆಡಳಿತದಲ್ಲಿ ಕನ್ನಡ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಸಹಕಾರ ನೀಡುವಂತೆ ಮನವಿ ಮಾಡಿದ ಟಿ.ಎಸ್. ನಾಗಾಭರಣ, ಉದ್ಯೋಗದಲ್ಲಿ ಸ್ಥಳೀಯ ಕನ್ನಡಿಗರಿಗೆ ಆದ್ಯತೆ, ತಂತ್ರಜ್ಞಾನದಲ್ಲಿ ಕನ್ನಡ ತಂತ್ರಾಂಶಗಳ ಆವಿಷ್ಕಾರ ಮತ್ತು ಬಳಕೆ ಸೇರಿದಂತೆ ಕನ್ನಡಕ್ಕೆ ಸಂಬಂಧಿಸಿದ ವಿವಿಧ ಬೇಡಿಕೆಗಳ ಮನವಿ ಸಲ್ಲಿಸಿದರು. ಇದೇ ವೇಳೆ ಕನ್ನಡದ ಅಸ್ಮಿತೆಯ ಉಳಿವಿಗೆ ಪ್ರಾಧಿಕಾರದ ಕಾರ್ಯಚಟುವಟಿಕೆಗಳಿಗೆ ಬೆನ್ನೆಲುಬಾಗಿ ನಿಲ್ಲಬೇಕೆಂದು ಕೇಳಿಕೊಂಡರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ರಾಜ್ಯಪಾಲರು, ‘ಪ್ರಾಧಿಕಾರದ ಎಲ್ಲ ಕೆಲಸಗಳಿಗೆ ಸಹಕಾರ ಇರುತ್ತದೆ’ ಎಂದು ಭರವಸೆ ನೀಡಿದರು.





ಕೆರೆಯಲ್ಲಿರುವ ಕಳೆ ಮುಕ್ತಿಗೇ ಇನ್ನೂ ಒಂದೂವರೆ ತಿಂಗಳು ಬೇಕು

# ಆರಕೆರೆ ಪುನರುಜ್ಜೀವನ ಆರಂಭ

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ಒಂದು ಕಾಲದಲ್ಲಿ ಸಮೃದ್ಧಿಯಿಂದ ಕೂಡಿದ್ದ 'ಆರಕೆರೆ ಕೆರೆ' ಈಗ ಅಳಿವಿನ ಅಂಚಿನಲ್ಲಿದ್ದು, ಇದರ ಪುನರುಜ್ಜೀವನಕ್ಕೆ ಬಿಬಿಎಂಪಿ ಪ್ರಯತ್ನ ಆರಂಭಿಸಿದೆ.

ಬನ್ನೇರುಘಟ್ಟ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ ಈ ಜಲಾಶಯ ರಾಜರ ಕಾಲದಲ್ಲಿ ನಿರ್ಮಾಣವಾಗಿದೆ. ಈ ಕೆರೆ ನೀರನ್ನು ಸುತ್ತಮುತ್ತಲ ಗ್ರಾಮಗಳ ಜನರು ಕುಡಿಯಲು ಕೂಡ ಬಳಸುತ್ತಿದ್ದರು. ದಿನ ಕಳೆದಂತೆ ಕೆರೆಯಲ್ಲಿ ಜೀವಸೆಲೆ ಬತ್ತಲಾರಂಭಿಸಿತು. ನಗರ ಬೆಳೆದಂತೆ ಒಳಚರಂಡಿ ನೀರು ಜಲಕಾಯದ ಒಡಲು ಸೇರಲಾರಂಭಿಸಿತು. ತಿಳಿ ನೀರಿನ ಕೊಳದಂತೆ ನಳನಳಿಸುತ್ತಿದ್ದ ಕೆರೆಗೆ ಒಳಚರಂಡಿ ನೀರು ಹರಿಯಲು ಆರಂಭವಾದ ಬಳಿಕ ಅದರ ಸ್ವರೂಪವೇ ಬದಲಾಗತೊಡಗಿತು. ಈಗ ಅಕ್ಷರಶಃ ಮಲದ ಗುಂಡಿಯಾಗಿ ಬದಲಾಗಿದೆ.

ಕೆರೆಯ ನೀರೆಲ್ಲವೂ ಕಪ್ಪು ಬಣ್ಣಕ್ಕೆ ತಿರುಗಿದೆ. ಇಡೀ ಜಲಾಶಯ ದುರ್ವಾಸನೆ ಬೀರುತ್ತಿದೆ. ಅದರ ಮೇಲೆ ಬೆಳೆದು ನಿಂತಿರುವ ಕಳೆ ಸಸ್ಯ ಕೆರೆಯಲ್ಲಿ ನೀರಿದೆ ಎಂಬುದೇ ಕಾಣದಂತೆ ಆವರಿಸಿಕೊಂಡಿತ್ತು. ಒಂದೆಡೆ ಹೂಳು, ಇನ್ನೊಂದೆಡೆ ಒತ್ತುವರಿಯಿಂದ ಕೆರೆಯ ಸ್ವರೂಪವೇ ಬದಲಾಗಿದೆ. ಸಮೃದ್ಧಿಯಿಂದ ಕೂಡಿದ್ದ ಜಲಕಾಯವನ್ನು ಸರ್ಕಾರವೇ ಹಾಳು ಮಾಡಿದೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ.

'ಇದರ ಪುನರುಜ್ಜೀವನಕ್ಕೆ ಬಿಬಿಎಂಪಿ ಹೊಸದಾಗಿ ಯೋಜನೆ ರೂಪಿಸಿದೆ.



ಜೆಸಿಬಿ ಮೂಲಕ ಕಳೆ ಸಸ್ಯ ತೆಗೆಯುತ್ತಿರುವುದು

> **ಕೆರೆಗೆ ಒಳಚರಂಡಿ ನೀರು ಹರಿಸಿ ಹಾಳು ಮಾಡಿದರು. ಈಗ ಸ್ವಚ್ಛಗೊಳಿಸುವ ಕಾಮಗಾರಿ ಆರಂಭವಾಗಿದೆ. ಇದು ಯಶಸ್ವಿಯಾಗುವ ಲಕ್ಷಣ ಇಲ್ಲ**
> **ಶ್ರೀನಿವಾಸ್,** ಆರಕೆರೆ ನಿವಾಸಿ

ಮೊದಲ ಹಂತದಲ್ಲಿ ಒಳಚರಂಡಿ ನೀರು ಕೆರೆಗೆ ಹರಿಯುವುದನ್ನು ತಪ್ಪಿಸಿ, ನೀರು ಶುದ್ಧೀಕರಣ ಮಾಡಲು ಉದ್ದೇಶಿಸಿದೆ. ಅದರ ಭಾಗವಾಗಿ ಕೆರೆಯನ್ನೇ ಆವರಿಸಿದ್ದ ಜೊಂಡು ತೆಗೆಯುವ ಕೆಲಸ ಆರಂಭಿಸಲಾಗಿದೆ. ಒಂದೂವರೆ ತಿಂಗಳಿಂದ ಈ ಕಾಮಗಾರಿ ನಡೆಯುತ್ತಿದ್ದು, ಕಳೆ ಸಸ್ಯವನ್ನು ಜೆಸಿಬಿ ಮೂಲಕ ಎಳೆದು ಸುತ್ತಲೂ ಕೆರೆಯ ದಡಕ್ಕೆ ರಾಶಿ ಮಾಡಲಾಗುತ್ತಿದೆ. ಇಡೀ ಜಲಾಶಯವನ್ನು ಕಳೆ ಸಸ್ಯದಿಂದ ಮುಕ್ತಗೊಳಿಸಲು ಇನ್ನೂ ಒಂದೂವರೆ ತಿಂಗಳುಗಳ ಸಮಯ ಬೇಕು ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ.


ಕೆರೆ ಅಭಿವೃದ್ಧಿಯ ಜತೆಗೆ ಸುತ್ತಲೂ ಆಗಿರುವ ಒತ್ತುವರಿಯನ್ನೂ ತೆರವುಗೊಳಿಸಬೇಕು. ಸರ್ವೆ ನಡೆಸಿ ಜಲಮೂಲದ ಜಾಗದಲ್ಲಿ ನಿರ್ಮಾಣ ಆಗಿರುವ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಬೇಕು ಎಂಬುದು ಸ್ಥಳೀಯರ ಒತ್ತಾಯ.

## ಮೊದಲ ಹಂತದಲ್ಲಿ ಶುದ್ಧೀಕರಣ

ಸಂಪೂರ್ಣ ಮಲಿನಗೊಂಡಿರುವ ಕೆರೆಯ ನೀರನ್ನು ಶುದ್ಧೀಕರಣಗೊಳಿಸಲು ಯೋಜನೆ ರೂಪಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಎಂಜಿನಿಯರ್ (ಕೆರೆ) ಬಿ.ಟಿ. ಮೋಹನಕೃಷ್ಣ ತಿಳಿಸಿದರು. ಒಳಚರಂಡಿ ನೀರು ಹರಿಯುವುದನ್ನು ಮೊದಲಿಗೆ ತಪ್ಪಿಸಲಾಗುವುದು. ಸೂಕ್ತ ಪೋಷಕಾಂಶಗಳನ್ನು ಬಳಸಿ ಆಮ್ಲಜನಕ ಪ್ರಮಾಣ ಹೆಚ್ಚಿಸಲಾಗುವುದು. ಅದರ ಭಾಗವಾಗಿ ಸೂರ್ಯನ ಬೆಳಕು ನೀರಿನ ಮೇಲೆ ನೇರವಾಗಿ ಬೀಳುವಂತೆ ಮಾಡಲು ಕಳೆ ಸಸ್ಯ ತೆಗೆಯಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿ ನಿರ್ವಹಿಸಲಾಗುತ್ತಿದೆ. ಕೆರೆ ಸುತ್ತಲೂ ಅಭಿವೃದ್ಧಿಪಡಿಸುವ ಯೋಜನೆ ಬಗ್ಗೆ ಮುಂದಿನ ದಿನಗಳಲ್ಲಿ ಆಲೋಚಿಸಲಾಗುವುದು ಎಂದರು. ಕೆರೆ ಜಾಗ ಕೆಲವೆಡೆ ಒತ್ತುವರಿ ಕೂಡ ಆಗಿದ್ದು, ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

## ಎಸ್ಸೆಸ್ಸೆಲ್ಸಿ ಸಾಧಕರು

ವಿದ್ಯಾ ಪೂರ್ಣ ಪ್ರಜ್ಞ ಹೈಸ್ಕೂಲ್, ತುಮಕೂರು ರಸ್ತೆ



ರಾಕೇಶ್ ಎಸ್ (ಶೇ 99), ದೇವಿಕಾ ಸತೀಶ್ (ಶೇ 99), ಎಂ.ಪ್ರಜ್ವಲ್ (ಶೇ 100), ಅಕ್ಷಯಾ ಬಿ.ದೇವಿಕುಮಾರ್ (ಶೇ 99), ಸೂರ್ಯ ಶ್ರೀನಿವಾಸ್ (ಶೇ 100), ಎ.ನಂದನ್ (ಶೇ 99), ನಿತ್ಯಾ (ಶೇ 100), ಯಶಸ್ ರಂಗಸ್ವಾಮಿ (ಶೇ 99), ತನುಜಾ ಎಂ.ಆರ್ (ಶೇ 99), ಪ್ರಣಮ್ಯಾ ರಾವ್ (ಶೇ 99), ಎ.ಜ್ಯೋತಿಕಾ (ಶೇ 100), ಎಂ.ಕೆ.ಕಾವ್ಯ (ಶೇ 100), ಬಿ.ಪಿ.ಹಂಸಾ (ಶೇ 99)

ಮ್ಯಾಕ್ಸ್ ಮುಲ್ಲರ್ ಇಂಗ್ಲಿಷ್ ಹೈಸ್ಕೂಲ್, ಮಾಗಡಿ ರಸ್ತೆ: ಎಸ್.ವರ್ಷಾ (ಶೇ 99)

ಗುಡ್ ಸಮರಿಟನ್ ಪಬ್ಲಿಕ್ ಶಾಲೆ, ಕಗ್ಗದಾಸಪುರ, ಸಿ.ವಿ.ರಾಮನ್ ನಗರ: ಸ್ವಾತಿ ಆರ್.ನಾಯರ್ (ಶೇ 100)

ವಿಜಯಾ ಹೈಸ್ಕೂಲ್, ಬೆಂಗಳೂರು: ಶ್ರೇಯಾ ಎಸ್ (ಶೇ 99)

## ಪುಷ್ಪ ಬೆಳೆಗಾರರಿಂದ ಇಂದು ಪ್ರತಿಭಟನೆ

**ಬೆಂಗಳೂರು:** ಸರ್ಕಾರಿ ಕಾರ್ಯಕ್ರಮಗಳಲ್ಲಿ ಹೂಗುಚ್ಛ, ಹಾರ, ತುರಾಯಿ ಹಾಗೂ ಹಣ್ಣಿನ ಬುಟ್ಟಿಯನ್ನು ನಿಷೇಧ ಮಾಡಿರುವ ಸರ್ಕಾರದ ಕ್ರಮವನ್ನು ವಿರೋಧಿಸಿರುವ ದಕ್ಷಿಣ ಭಾರತದ ಪುಷ್ಪ ಬೆಳೆಗಾರರ ಸಂಘ, ಗುರುವಾರ ಬೆಳಿಗ್ಗೆ 11.15ಕ್ಕೆ ಇಲ್ಲಿನ ಅಂತರರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ ಎದುರು ಪ್ರತಿಭಟನೆ ಹಮ್ಮಿಕೊಂಡಿದೆ.

'ರಾಜ್ಯ ಸರ್ಕಾರ ಹಾಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ನಡೆಸುವ ಸಭೆ-ಸಮಾರಂಭಗಳಲ್ಲಿ ಹೂಗುಚ್ಛ, ಹಾರ, ತುರಾಯಿ, ಹಣ್ಣಿನ ಬುಟ್ಟಿಯ ಬದಲು ಕನ್ನಡ ಪುಸ್ತಕಗಳನ್ನು ನೀಡುವಂತೆ ಆದೇಶ ಹೊರಡಿಸಲಾಗಿದೆ. ಇದರಿಂದಾಗಿ ಪುಷ್ಪ ಬೆಳೆಗಾರರು, ರೈತರ ಮೇಲೆ ಗಧಾಪ್ರಹಾರ ಮಾಡಿದಂತಾಗಿದೆ. ಈ ಆದೇಶವನ್ನು ಸರ್ಕಾರ ತಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕು' ಎಂದು ಸಂಘದ ಅಧ್ಯಕ್ಷ ಟಿ.ಎಂ. ಅರವಿಂದ್ ಆಗ್ರಹಿಸಿದ್ದಾರೆ.

'ರಾಜ್ಯದ ಎಲ್ಲ ಪುಷ್ಪ ಬೆಳೆಗಾರರು, ಪುಷ್ಪ ಕೃಷಿ ರೈತ ಸಂಘಟನೆಗಳು, ಪುಷ್ಪ ಮಾರಾಟಗಾರರು, ರೈತರು ಹೂಗುಚ್ಛ, ಹಾರ, ಹಣ್ಣಿನ ಬುಟ್ಟಿಯನ್ನು ಹಿಡಿದುಕೊಂಡು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಿದ್ದಾರೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ನಾಲ್ವರು ಆರೋಪಿಗಳ ಕೃತ್ಯ: ಬಿಹಾರದಿಂದ ತಂದು ಅಕ್ರಮ

# ಪಿಸ್ತೂಲ್ ಮಾರಾಟ ದಂಧೆ: ಬಂಧನ

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ಹೊರ ರಾಜ್ಯದಿಂದ ನಾಡ ಪಿಸ್ತೂಲ್ ತಂದು ನಗರದಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಆರೋಪದಡಿ ನಾಲ್ಕು ಮಂದಿ ಆರೋಪಿಗಳನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

ರಾಮನಾಯಕನಹಳ್ಳಿ ಸೋನು ಕುಮಾರ್ (32), ಕಣ್ಣೂರಿನ ಸುನಿಲ್ ಕುಮಾರ್ (32), ಥಣಿಸಂದ್ರದ ಇರ್ಫಾನ್ (26) ಹಾಗೂ ಆಂಧ್ರ ಪ್ರದೇಶದ ಮದನಪಲ್ಲಿಯ ಮುರಳಿ ವಿನೋದ್ (47) ಬಂಧಿತರು.

'ಅಶೋಕನಗರ ಠಾಣಾ ವ್ಯಾಪ್ತಿಯ ಹೊಸೂರು ರಸ್ತೆಯಲ್ಲಿರುವ ಸ್ಮಶಾನವೊಂದರ ಸಮೀಪ ಆರೋಪಿಗಳು ಪಿಸ್ತೂಲ್ ಮಾರಾಟ ಮಾಡುತ್ತಿದ್ದ ಮಾಹಿತಿ ಲಭ್ಯವಾಗಿತ್ತು. ಸ್ಥಳಕ್ಕೆ ತೆರಳಿ ದಾಳಿ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು. ಬಂಧಿತರಿಂದ ಎರಡು ನಾಡ ಪಿಸ್ತೂಲ್, ಐದು ಜೀವಂತ ಗುಂಡುಗಳು, ಎರಡು ಬೈಕ್ ಹಾಗೂ ಐದು ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಸೋನುಕುಮಾರ್, ಸುನಿಲ್ ಹಾಗೂ ಇರ್ಫಾನ್ ಬಿಹಾರದ ಸುಲ್ತಾನ್‌ಗಂಜ್ ವ್ಯಕ್ತಿಯೊಬ್ಬನಿಂದ ಪಿಸ್ತೂಲ್ ಖರೀದಿಸಿ, ಬೆಂಗಳೂರಿನಲ್ಲಿ ಅಕ್ರಮವಾಗಿ ಮಾರಾಟ ಮಾಡುವ ದಂಧೆ ನಡೆಸುತ್ತಿದ್ದರು. ರೌಡಿ ಚಟುವಟಿಕೆಗಳಲ್ಲಿ ತೊಡಗುವ ವ್ಯಕ್ತಿಗಳಿಗೆ ಪಿಸ್ತೂಲ್‌ಗಳನ್ನು ಪೂರೈಕೆ ಮಾಡುತ್ತಿದ್ದರು' ಎಂದು ವಿವರಿಸಿದರು.

'ಆರೋಪಿ ಮುರಳಿ ಇವರಿಂದ ಪಿಸ್ತೂಲ್ ಹಾಗೂ ಐದು ಜೀವಂತ ಗುಂಡುಗಳನ್ನು ಖರೀದಿಸಿ, ಅಕ್ರಮವಾಗಿ ಇಟ್ಟುಕೊಂಡಿದ್ದ. ಹಾಗಾಗಿ, ನಾಲ್ವರನ್ನೂ ಬಂಧಿಸಿ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಪತ್ತೆ ಕಾರ್ಯ ಮುಂದುವರಿದಿದೆ' ಎಂದೂ ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಲಾದ ನಾಡ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳು



## ಧ್ವಜಗಳ ಮಾರಾಟ

ಸ್ವಾತಂತ್ರ್ಯ ದಿನದ ಅಂಗವಾಗಿ ವ್ಯಾಪಾರಿಯೊಬ್ಬರು ತ್ರಿವರ್ಣ ಧ್ವಜಗಳ ಮಾರಾಟದಲ್ಲಿ ತೊಡಗಿದ್ದ ದೃಶ್ಯ ನಗರದ ಬಿನ್ನಿಮಿಲ್ ರಸ್ತೆಯಲ್ಲಿ ಬುಧವಾರ ಕಂಡುಬಂತು

–ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

## ನದಿಯಲ್ಲಿ ಕೊಚ್ಚಿ ಹೋಗಿದ್ದ ಯುವಕನ ಶವ ಪತ್ತೆ

ಪ್ರಜಾವಾಣಿ ವಾರ್ತೆ

**ಬಿಡದಿ:** ವೃಷಭಾವತಿ ನದಿಯಲ್ಲಿ ಭಾನುವಾರ ಕೊಚ್ಚಿಹೋಗಿದ್ದ ಯುವಕ ಶವವನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಬುಧವಾರ ಪತ್ತೆ ಮಾಡಿದರು.

ಚೌಕಹಳ್ಳಿ ಬಳಿ ವೃಷಭಾವತಿ ನದಿಗೆ ಆಯತಪ್ಪಿ ಭಾನುವಾರ ಮುಂಜಾನೆ ರವೀಂದ್ರರೆಡ್ಡಿರವರ ಮಗ ಕೌಶಿಕ್‌ರೆಡ್ಡಿ (26) ಬಿದ್ದಿದ್ದರು. ಅವರ ಪತ್ತೆಗಾಗಿ ಸತತ ಮೂರುದಿನಗಳಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು. ಬುಧವಾರದಂದು ಸಿದ್ದೇನಹಳ್ಳಿಯ ಕಾಲುವೆಯ ಬಳಿ ಯುವಕನ ಶವ ಗುರುತಿಸಲಾಗದಂತಹ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಅಂಗಾಂಗ ದಾನ: ಸಾವಿನಲ್ಲೂ ಸಾರ್ಥಕತೆ ಕಂಡ ರೈತ

**ಬೆಂಗಳೂರು:** ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡಿದ್ದ 43 ವರ್ಷದ ಬಿಡದಿಯ ರೈತರೊಬ್ಬರು ಆರು ಅಂಗಗಳನ್ನು ದಾನ ಮಾಡಿದ್ದಾರೆ. ಈ ಮೂಲಕ ಸಾವಿನಲ್ಲೂ ಸಾರ್ಥಕತೆ ಕಂಡಿದ್ದಾರೆ.

ನಂಜುಂಡಯ್ಯ ಎಂಬ ಹೆಸರಿನ ರೈತ ಅಂಗಾಂಗ ದಾನ ಮಾಡಿದ್ದು, ಅವರು ಜು.26ರಂದು ರಸ್ತೆ ಅಪಘಾತಕ್ಕೆ ಒಳಗಾಗಿದ್ದರು. ಅವರನ್ನು ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಒದಗಿಸಲಾಗಿತ್ತು. ಆದರೆ, ಅವರ ಮಿದುಳು ನಿಷ್ಕ್ರಿಯಗೊಂಡಿರುವುದನ್ನು ಖಚಿತಪಡಿಸಿದ ವೈದ್ಯರು, ಕುಟುಂಬದ ಸದಸ್ಯರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ತಿಳಿಸಿದರು.

ಕುಟುಂಬದ ಸದಸ್ಯರ ಸಮ್ಮತಿಯ ಮೇರೆಗೆ ವೈದ್ಯರು ವ್ಯಕ್ತಿಯ ಶ್ವಾಸಕೋಶಗಳು, ಮೂತ್ರಪಿಂಡ, ಯಕೃತ್ತು, ಹೃದಯದ ಕವಾಟ, ಕಣ್ಣಿನ ಕಾರ್ನಿಯಾ ಹಾಗೂ ಚರ್ಮವನ್ನು ಜೀವ ಸಾರ್ಥಕತೆ ಯೋಜನೆಯಡಿ ಪಡೆದಿದ್ದಾರೆ. ಈ ಅಂಗಾಂಗಗಳನ್ನು ಹೆಸರು ನೋಂದಾಯಿಸಿಕೊಂಡು ಅಂಗಾಂಗ ಕಸಿಗೆ ಕಾಯುತ್ತಿರುವವರಿಗೆ ಒದಗಿಸಿ, ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಆಸ್ಪತ್ರೆಯ ಮುಖ್ಯ ನರರೋಗ ಶಸ್ತ್ರಚಿಕಿತ್ಸಕ ಡಾ.ಎನ್.ಕೆ. ವೆಂಕಟರಮಣ, 'ವ್ಯಕ್ತಿಯ ಮಿದುಳಿಗೆ ತೀವ್ರವಾಗಿ ಗಾಯವಾಗಿದ್ದರಿಂದ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕುಟುಂಬದ ಸದಸ್ಯರ ಸಹಕಾರದಿಂದ ಅಂಗಾಂಗ ದಾನ ಪ್ರಕ್ರಿಯೆ ನಡೆದಿದ್ದು, ಆರು ರೋಗಿಗಳಿಗೆ ಜೀವದಾನ ಸಿಕ್ಕಂತಾಗಿದೆ' ಎಂದು ತಿಳಿಸಿದರು.

# 'ಬಿಎಸ್‌ಪಿಗೆ ದ್ರೋಹ ಬಗೆದ ಮಹೇಶ್'

### ಬಿಎಸ್‌ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬಹುಜನ ಸಮಾಜ ಪಕ್ಷದಿಂದ (ಬಿಎಸ್‌ಪಿ) ಎಲ್ಲವನ್ನೂ ಪಡೆದಿರುವ ಶಾಸಕ ಎನ್. ಮಹೇಶ್ ಈಗ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ' ಎಂದು ಬಿಎಸ್‌ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಶೋಕ್ ಸಿದ್ಧಾರ್ಥ್ ಆರೋಪಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರಿ ಸೇವೆಯಿಂದ ಸ್ವಯಂನಿವೃತ್ತಿ ಪಡೆದಿದ್ದ ಒಬ್ಬ ವ್ಯಕ್ತಿಗೆ ಎಲ್ಲ ರೀತಿಯ ಸಹಕಾರವನ್ನೂ ನೀಡಿ, ಶಾಸಕನನ್ನಾಗಿ ಮಾಡಿದ್ದು ಬಿಎಸ್‌ಪಿ. ಓಡಾಡಲು ಅವರ ಬಳಿ ಕಾರು ಇರಲಿಲ್ಲ. ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಓಡಾಡುತ್ತಿದ್ದರು. ಮೂರು ಕಾರುಗಳನ್ನು ಪಕ್ಷದಿಂದ ನೀಡಿದೆವು. ಎಲ್ಲ ಅವಕಾಶಗಳನ್ನೂ ಪಡೆದು, ಬಿಜೆಪಿಗೆ ವಲಸೆ ಹೋಗಿರುವ ಮಹೇಶ್ ಈಗ ಬಿಎಸ್‌ಪಿ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ದೇಶದ ಪಾಲಿಗೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಈ ಪಕ್ಷಗಳು ಯಾವತ್ತೂ ಬಹುಜನರ ಪರವಾಗಿ ಕೆಲಸ ಮಾಡುವುದಿಲ್ಲ. ಆದರೆ, ಸ್ವಾರ್ಥ ಸಾಧನೆಗಾಗಿ ಬಿಜೆಪಿ ಸೇರಿರುವ ಮಹೇಶ್ ಅವರು ಈಗ ಅದನ್ನು ಸಮರ್ಥಿಸಿಕೊಳ್ಳಲು ಸುಳ್ಳುಗಳನ್ನು ಹೇಳುತ್ತಿದ್ದಾರೆ ಎಂದು ದೂರಿದರು.

ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಎಂ. ಕೃಷ್ಣಮೂರ್ತಿ ಮಾತನಾಡಿ, 'ಮಹೇಶ್ ಅವರು ಪಕ್ಷದ ವಿರುದ್ಧ ಮಾಡುತ್ತಿರುವ ಆರೋಪಗಳಲ್ಲಿ ಕಿಂಚಿತ್ತೂ ಹುರುಳಿಲ್ಲ. ತಮ್ಮ ಆತ್ಮಸಾಕ್ಷಿಯನ್ನೇ ಕೇಳಿಕೊಂಡರೆ ಗೊತ್ತಾಗುತ್ತದೆ' ಎಂದರು.

ಒಬ್ಬ ಸಾಮಾನ್ಯ ಸರ್ಕಾರಿ ಅಧಿಕಾರಿಯಾಗಿದ್ದ ವ್ಯಕ್ತಿಗೆ ಬಿಎಸ್‌ಪಿ ಎಂಟು ಚುನಾವಣೆಗಳಲ್ಲಿ ಟಿಕೆಟ್ ನೀಡಿತ್ತು. ಪ್ರತಿ ಚುನಾವಣೆಯಲ್ಲೂ ಪಕ್ಷದಿಂದ ಆರ್ಥಿಕ ನೆರವನ್ನೂ ನೀಡಲಾಗಿತ್ತು. ಎಲ್ಲವನ್ನೂ ಬಳಸಿಕೊಂಡ ಅವರು, ಎಚ್‌.ಡಿ. ಕುಮಾರಸ್ವಾಮಿ ಅವರ ವಿಶ್ವಾಸಮತ ಯಾಚನೆ ವೇಳೆ ಪಕ್ಷದ ನಿರ್ದೇಶನದಂತೆ ನಡೆದುಕೊಳ್ಳಲಿಲ್ಲ. ಸದನದಲ್ಲಿ ಹಾಜರಿದ್ದು, ತಟಸ್ಥರಾಗುವಂತೆ ಪಕ್ಷದ ವರಿಷ್ಠರು ಸೂಚಿಸಿದ್ದರು. ಆದರೆ, ಮಹೇಶ್ ನಾಪತ್ತೆಯಾಗಿ ಬಿಜೆಪಿ ಜತೆ ಕೈಜೋಡಿಸಿದ್ದರು ಎಂದು ಆಪಾದಿಸಿದರು.

ಬಿಎಸ್‌ಪಿ ರಾಜ್ಯ ಘಟಕದ ಸಂಯೋಜಕರಾದ ದಿನೇಶ್ ಗೌತಮ್, ಸುರೇಂದ್ರ ಸಿಂಗ್ ಕಲೋರಿಯಾ, ಮಾರಸಂದ್ರ ಮುನಿಯಪ್ಪ ಮತ್ತು ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಆರ್. ಮುನಿಯಪ್ಪ ಪತ್ರಿಕಾಗೋಷ್ಠಿಯಲ್ಲಿದ್ದರು.

ತುರ್ತು ಸ್ಪಂದನೆಗೆ ತಂಡ ರಚಿಸಿ ಪೊಲೀಸ್ ಇಲಾಖೆ ಸನ್ನದ್ಧ

# 'ಸ್ವ್ಯಾಟ್' ತಂಡಗಳಿಗೆ ತರಬೇತಿ

**ಬೆಂಗಳೂರು:** ನಗರದಲ್ಲಿ ಅಹಿತಕರ ಘಟನೆಗಳು, ವಿಶೇಷ ಕರ್ತವ್ಯ ಹಾಗೂ ತುರ್ತು ಸಂದರ್ಭಗಳಲ್ಲಿ ತ್ವರಿತವಾಗಿ ಸ್ಪಂದಿಸಲು ನುರಿತ (ಸ್ವ್ಯಾಟ್) ತಂಡಗಳನ್ನು ರಚಿಸಿ, ತರಬೇತಿ ನೀಡಿ ಪೊಲೀಸ್ ಇಲಾಖೆ ಸನ್ನದ್ಧಗೊಳಿಸಿದೆ.

ಇದಕ್ಕಾಗಿ ಸಿಎಆರ್ ಘಟಕಗಳಿಂದ ಒಟ್ಟು 120 ಸಿಬ್ಬಂದಿಯನ್ನು ಆಯ್ಕೆ ಮಾಡಲಾಗಿದೆ. ಈ ತಂಡಕ್ಕೆ ಭಯೋತ್ಪಾದನೆ ನಿಗ್ರಹ ಕೇಂದ್ರವು (ಸಿಸಿಟಿ) ಅಗರದ ಆಂತರಿಕ ಭದ್ರತೆ ವಿಭಾಗದಲ್ಲಿ ಎಂಟು ವಾರಗಳ ವಿಶೇಷ ತರಬೇತಿ ನೀಡಿದೆ.

'ಭಯೋತ್ಪಾದಕ ಮತ್ತು ನಕ್ಸಲ್ ಕೃತ್ಯಗಳು, ಸಮಾಜ ವಿರೋಧಿ ಚಟುವಟಿಕೆಗಳು, ಅಂತರರಾಷ್ಟ್ರೀಯ ಮಹತ್ವವುಳ್ಳ ಕಾರ್ಯಕ್ರಮಗಳ ಭದ್ರತೆ ಹಾಗೂ ಆಧುನಿಕ ಆಯುಧಗಳ ಬಗ್ಗೆ ಈ ವಿಶೇಷ ತಂಡಗಳಿಗೆ ತರಬೇತಿ ನೀಡಲಾಗಿದೆ' ಎಂದು ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ ತಿಳಿಸಿದರು.

'ತರಬೇತಿ ಪಡೆದವರನ್ನು ನಾಲ್ಕು ತಂಡಗಳಾಗಿ ವಿಭಜಿಸಿ, ನಗರದಲ್ಲಿ ಅಗತ್ಯವಿರುವ ಸ್ಥಳಗಳಿಗೆ ನಿಯೋಜಿಸಲಾಗಿದೆ. ಪ್ರತಿ ತಂಡದಲ್ಲಿ 30 ಸಿಬ್ಬಂದಿ ಹಾಗೂ ಇಬ್ಬರು ರಿಸರ್ವ್ ಸಬ್ ಇನ್‌ಸ್ಪೆಕ್ಟರ್ (ಆರ್‌ಎಸ್‌ಐ) ಕಾರ್ಯನಿರ್ವಹಿಸಲಿದ್ದಾರೆ. ಮುಂದಿನ ಹಂತದಲ್ಲಿ ಇನ್ನೂ ಎರಡು ತಂಡಗಳಿಗೆ ತರಬೇತಿ ನೀಡಲಾಗುವುದು' ಎಂದು ಮಾಹಿತಿ ನೀಡಿದರು.



'ಸ್ವ್ಯಾಟ್' ತಂಡಗಳ ಸಿಬ್ಬಂದಿ ತರಬೇತಿ ಪಡೆಯುತ್ತಿರುವುದು.

'ಮಾಸ್ತಿಗುಡಿ' ಬಳಿಕ ಮತ್ತೊಂದು ಅವಘಡ; ರಾಮನಗರದ ಹೆಸರಿಗೆ ಅಪಕೀರ್ತಿ

# ಚಿತ್ರೀಕರಣ ಸಂದರ್ಭದಲ್ಲಿ ದುರಂತದ 'ಕಪ್ಪು ಚುಕ್ಕೆ'

ಪ್ರಜಾವಾಣಿ ವಾರ್ತೆ

**ರಾಮನಗರ:** ಜಿಲ್ಲೆಯು ತನ್ನ ಪ್ರಾಕೃತಿಕ ಪ್ರವಾಸಿ ತಾಣಗಳು, ಧಾರ್ಮಿಕ ಕೇಂದ್ರಗಳಿಂದ ರಾಜ್ಯದ ಜನರ ಗಮನ ಸೆಳೆಯುತ್ತಿದ್ದು, ಚಿತ್ರರಂಗದ ಮಂದಿಯನ್ನೂ ತನ್ನತ್ತ ಆಕರ್ಷಿಸಿದೆ. ಆದರೆ ಈಚಿನ ದಿನಗಳಲ್ಲಿ ನಡೆಯುತ್ತಿರುವ ಅವಘಡಗಳು ಜಿಲ್ಲೆಯ ಹೆಸರಿಗೆ ಕಪ್ಪುಚುಕ್ಕೆ ಆಗುತ್ತಿವೆ.

ಗಾಂಧಿ ನಗರದ ಮಂದಿಗೆ ಸನಿಹದಲ್ಲೇ ಇರುವ ರಾಮನಗರ ಜಿಲ್ಲೆಯು ಚಿತ್ರೀಕರಣಕ್ಕೆ ಬೇಕಾದ ಎಲ್ಲ ಬಗೆಯ ತಾಣಗಳನ್ನು ಹೊಂದಿದೆ. ಸಿನಿಮಾಗಳಿಗೆ ಬೇಕಾದ ಹಳ್ಳಿಯ ವಾತಾವರಣ, ಧಾರ್ಮಿಕ ಸನ್ನಿವೇಶ, ಅರಣ್ಯ, ಬೆಟ್ಟಗುಡ್ಡಗಳಲ್ಲಿ ಸಾಹಸ ದೃಶ್ಯಗಳ ಚಿತ್ರೀಕರಣಗಳು ಆಗಿಂದಾಗ್ಗೆ ನಡೆಯುತ್ತಲೇ ಇರುತ್ತವೆ. ಆದರೆ ಇವುಗಳಿಗೆ ಪೊಲೀಸರು, ಜಿಲ್ಲಾಡಳಿತ, ಸ್ಥಳೀಯ ಸಂಸ್ಥೆಗಳೂ ಸೇರಿದಂತೆ ಯಾವುದರಿಂದಲೂ ಅನುಮತಿ ಪಡೆಯುತ್ತಿಲ್ಲ. ದುರಂತಗಳು ನಡೆದಾಗಲಷ್ಟೇ ಇವು ಸುದ್ದಿಯಾಗುತ್ತಿವೆ.

ರಾಮನಗರದ ರಾಮದೇವರ ಬೆಟ್ಟವು ಶೋಲೆ ಬೆಟ್ಟ ಎಂದೇ ಪ್ರಸಿದ್ಧಿ. ಅಮಿತಾಬ್ ಬಚ್ಚನ್ ಅಭಿನಯದ 'ಶೋಲೆ' ಹಿಂದಿ ಚಲನಚಿತ್ರದ ಚಿತ್ರೀಕರಣ ಇಲ್ಲಿಯೇ ನಡೆದಿತ್ತು. ಈ ಚಿತ್ರದ ಸಾಹಸ ದೃಶ್ಯದ ಚಿತ್ರೀಕರಣ ವೇಳೆ ನಟ ಅಮಿತಾಭ್ ಬಚ್ಚನ್ ಹಾಗೂ ಖಳನಟ ಅಮ್ಜದ್ ಖಾನ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು ಎಂದು ಹಿರಿಯರು ಸ್ಮರಿಸುತ್ತಾರೆ.

2016ರ ನವೆಂಬರ್‌ನಲ್ಲಿ ಮಾಗಡಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ಮಾಸ್ತಿಗುಡಿ ಸಿನಿಮಾ ಚಿತ್ರೀಕರಣ ವೇಳೆ ನೀರಿನಲ್ಲಿ ಮುಳುಗಿ ಉದಯೋನ್ಮುಖ ಕಲಾವಿದರಾದ ಉದಯ್ ಹಾಗೂ ಅನಿಲ್ ಪ್ರಾಣ ಕಳೆದುಕೊಂಡಿದ್ದರು. ಇದೀಗ ಬಿಡದಿಯ ಜೋಗರದೊಡ್ಡಿ ಬಳಿ ಲವ್ ಯೂ ರಚ್ಚು ಸಿನಿಮಾ ಚಿತ್ರೀಕರಣದ ವೇಳೆ ಸಾಹಸ ಕಲಾವಿದ ವಿವೇಕ್ ಪ್ರಾಣ ಬಿಟ್ಟಿದ್ದಾರೆ. ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸದೇ ನಿರ್ಲಕ್ಷ್ಯ ತೋರಿರುವುದೇ ಈ ಘಟನೆಗಳಿಗೆ ಪ್ರಮುಖ ಕಾರಣವಾಗಿದೆ.

**ಅನುಮತಿ ಕಡ್ಡಾಯ:** ಚಿತ್ರೀಕರಣ ನಡೆಸುವ ಮುನ್ನ ಸಿನಿಮಾ ತಂಡಗಳು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಅನುಮತಿ ಪಡೆಯಬೇಕು. ಚಿತ್ರೀಕರಣ ಸ್ಥಳದಲ್ಲಿ ಎಲ್ಲ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇದರಲ್ಲಿ ಸುರಕ್ಷತೆಗೆ ಸಂಬಂಧಿಸಿದ ಕೆಲವು ಷರತ್ತುಗಳೂ ಇರುತ್ತವೆ. ಅದ್ಯಾವುದನ್ನು ಸಿನಿಮಾ ತಂಡಗಳು ಪಾಲನೆ ಮಾಡದಿರುವುದೇ ದುರ್ಘಟನೆಗೆ ಕಾರಣವಾಗುತ್ತಿವೆ.

ಫಿಲಂ ಸಿಟಿಯಲ್ಲಿಯೂ ಚಿತ್ರೀಕರಣ ಮಾಡುವಾಗ ಅನುಮತಿ ಪಡೆದಿರಬೇಕು. ಅನುಮತಿಯು ನಿರ್ಬಂಧಿತ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸುವ ಅವಕಾಶ ಕಲ್ಪಿಸುವುದಿಲ್ಲ. ರಕ್ಷಿತ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸುವಂತಿಲ್ಲ. ಭದ್ರತೆಯ ಕಾರಣದಿಂದಾಗಿ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಿದ ಸ್ಥಳ ತಲುಪುವುದು ಹೇಗೆ ಎಂಬುದನ್ನು ಇನ್ನೊಬ್ಬರಿಗೆ ಗೊತ್ತುಪಡಿಸುವ ರೀತಿಯಲ್ಲಿ ಚಿತ್ರೀಕರಣ ಮಾಡಬಾರದು.

ಭದ್ರತಾ ದೃಷ್ಟಿಯಿಂದ ಪ್ರವೇಶ ನಿರ್ಬಂಧಿಸಲ್ಪಟ್ಟ ಯಾವುದೇ ಪ್ರದೇಶಗಳ ಸ್ಥಳ ನಿರ್ದೇಶನವನ್ನು ಸೂಚಿಸುವಂತೆ ಚಿತ್ರೀಕರಣ ಮಾಡಬಾರದು. ಚಿತ್ರೀಕರಣದ ಸ್ಥಳದಲ್ಲಿ ಸಾರ್ವಜನಿಕ ಆಸ್ತಿಪಾಸ್ತಿಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕು. ಆ ಸ್ಥಳದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಆಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಚಿತ್ರೀಕರಣದ ಬಗ್ಗೆ ಪೊಲೀಸರಿಗೆ ಮುಂಚಿತವಾಗಿ ಮಾಹಿತಿ ನೀಡಿ ಭದ್ರತೆಗೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಷರತ್ತುಗಳು ಹೇಳುತ್ತವೆ.



ಲವ್ ಯೂ ರಚ್ಚು ಚಿತ್ರದ ಚಿತ್ರೀಕರಣ ಸಂದರ್ಭ ಅವಘಡ ನಡೆದ ಸ್ಥಳ

## ವಿವೇಕ್ ಕುಟುಂಬಕ್ಕೆ ₹5 ಲಕ್ಷ ಪರಿಹಾರ

**ಬೆಂಗಳೂರು:** 'ಲವ್ ಯೂ ರಚ್ಚು' ಸಿನಿಮಾ ಚಿತ್ರೀಕರಣದ ವೇಳೆ ನಡೆದ ಅವಘಡದಲ್ಲಿ ಮೃತಪಟ್ಟ ಸಾಹಸ ಕಲಾವಿದ ವಿವೇಕ್ ಕುಟುಂಬಕ್ಕೆ ಚಿತ್ರತಂಡದ ಪರವಾಗಿ ನಿರ್ಮಾಪಕ ಗುರು ದೇಶಪಾಂಡೆ ಅವರ ಪತ್ನಿ ಪ್ರೀತಿಕಾ ದೇಶಪಾಂಡೆ ಅವರು ₹5 ಲಕ್ಷದ ಚೆಕ್ ನೀಡಿದ್ದಾರೆ.

ಘಟನೆಯ ಕುರಿತು ಬುಧವಾರ ಸುದ್ದಿಗೋಷ್ಠಿ ನಡೆಸಿದ ಪ್ರೀತಿಕಾ ಅವರು, 'ಗುರು ದೇಶಪಾಂಡೆ ಅವರು ತಲೆಮರೆಸಿಕೊಂಡಿಲ್ಲ. ಮಾಧ್ಯಮಗಳು ಈ ರೀತಿ ಪದ ಪ್ರಯೋಗಿಸುವುದನ್ನು ನಿಲ್ಲಿಸಬೇಕು. ಗುರು ದೇಶಪಾಂಡೆ ಅವರು ತಮ್ಮ ವಕೀಲರ ಮಾತನ್ನು ಪಾಲಿಸುತ್ತಿದ್ದಾರೆ. ಪ್ರಕರಣದ ತನಿಖೆ ಆಗಿ ನಾವೇ ತಪ್ಪಿತಸ್ಥರು ಎಂದಾದರೆ ಖಂಡಿತವಾಗಿಯೂ ಹೊಣೆ ಹೊತ್ತುಕೊಳ್ಳುತ್ತೇವೆ' ಎಂದು ಹೇಳಿದರು.

'ಶೂಟಿಂಗ್ ಸ್ಥಳದಲ್ಲಿ ನಾನಾಗಲಿ ಅಥವಾ ನನ್ನ ಪತಿ ಇರಲಿಲ್ಲ. ಹೀಗಾಗಿ ನಾನು ತನಿಖೆಯ ಮೊದಲೇ ಏನೇ ಹೇಳಿದರೂ ತಪ್ಪಾಗುತ್ತದೆ. ನಾವು ಎಷ್ಟೇ ಕ್ಷಮೆ ಕೇಳಿದರೂ ಆ ಮಗುವನ್ನು ತಾಯಿಗೆ ಹಿಂದಿರುಗಿಸಲು ಸಾಧ್ಯವಿಲ್ಲ. ನಾವು ಎಷ್ಟು ಹಣ ನೀಡಿದರೂ ಅದು ಸಾಲುವುದಿಲ್ಲ. ಅಷ್ಟೊಂದು ಗಂಭೀರವಾದ ಸಾಹಸದೃಶ್ಯದ ಚಿತ್ರೀಕರಣ ಆಗಿರಲಿಲ್ಲ. ಹೀಗಾಗಿ ಸ್ಥಳದಲ್ಲಿ ಚಿತ್ರತಂಡದ ಎಲ್ಲ ಸದಸ್ಯರೂ ಇರಲಿಲ್ಲ. ಪರಿಹಾರವಾಗಿ ₹10 ಲಕ್ಷ ಕೊಡುತ್ತೇವೆ ಎಂದಿದ್ದೆವು. ಈಗ ₹5 ಲಕ್ಷ ಕೊಡುತ್ತೇವೆ. ಗುರು ದೇಶಪಾಂಡೆಯವರು ಬಂದ ನಂತರ ಮತ್ತೆ ₹5 ಲಕ್ಷ ನೀಡುತ್ತೇವೆ' ಎಂದರು.



ವಿವೇಕ್

'ಚಿತ್ರೀಕರಣಕ್ಕೂ ಮೊದಲು ಸಿದ್ಧತೆ ನಡೆಸುವ ಸಂದರ್ಭದಲ್ಲಿ ಆದ ಘಟನೆ ಇದು. ಮಳೆ ಇದ್ದ ಕಾರಣ ಕ್ರೇನ್ ಚಕ್ರ ಸಿಲುಕಿ ಈ ಅವಘಡ ಸಂಭವಿಸಿದೆ ಎಂದು ಹೇಳುತ್ತಿದ್ದಾರೆ. ತನಿಖೆಯಲ್ಲಿ ಎಲ್ಲ ತಿಳಿಯಲಿದೆ. ಗಾಯಗೊಂಡಿರುವ ರಂಜಿತ್ ಅವರನ್ನು ವಿಶೇಷ ವಾರ್ಡ್‌ಗೆ ಶಿಫ್ಟ್ ಮಾಡಿದ್ದಾರೆ. ಎಲ್ಲ ಆಸ್ಪತ್ರೆ ವೆಚ್ಚವನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ' ಎಂದರು.

'ಗುರು ದೇಶಪಾಂಡೆ ಅವರ ಜಾಮೀನು ಅರ್ಜಿಯನ್ನು ರಾಮನಗರ ನ್ಯಾಯಾಲಯದಲ್ಲಿ ಬುಧವಾರ ಸಲ್ಲಿಸಿದ್ದೇವೆ' ಎಂದು ವಕೀಲ ಕೆಂಪೇಗೌಡ ಹೇಳಿದರು.

# ಕ್ರಷರ್ ಗಲಾಟೆ: ಗ್ರಾಮಸ್ಥರ ಮೇಲೆ ಹಲ್ಲೆ?

**ರಾಮನಗರ:** ಮಾಗಡಿ ತಾಲ್ಲೂಕಿನ ಜೋಗಿಪಾಳ್ಯ ಬಳಿ ಇರುವ ಜೇನುಕಲ್ಲು ಗುಡ್ಡದಲ್ಲಿ ಕ್ರಷರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬುಧವಾರ ಕ್ರಷರ್ ಮಾಲೀಕ ಹಾಗೂ ಸ್ಥಳೀಯರ ನಡುವೆ ಗಲಾಟೆ ನಡೆದಿದ್ದು, ಇದನ್ನೇ ನೆಪವಾಗಿಸಿಕೊಂಡು ಪೊಲೀಸರು ಗ್ರಾಮಸ್ಥರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನೆಯಲ್ಲಿ ಜೋಗಿಪಾಳ್ಯದ ಗಿರಿಯಪ್ಪ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದು, ಬೆಂಗಳೂರಿನ ನಿಮಾನ್ಸ್‌ಗೆ ದಾಖಲಿಸಲಾಗಿದೆ.

ಜೋಗಿಪಾಳ್ಯದ ಬಳಿ ಗಿರಿಧರ್ ಕಸಬೆ ಎಂಬುವರು ಕ್ರಷರ್ ಆರಂಭಿಸುತ್ತಿದ್ದು, ಇದಕ್ಕೆ ಬೇಕಾದ ರಸ್ತೆ ನಿರ್ಮಾಣ ಕಾಮಗಾರಿ ನಡೆದಿದೆ. ಕ್ರಷರ್ ಆರಂಭ ವಿರೋಧಿಸಿ ಸೋಮವಾರ ಸ್ಥಳೀಯ ರೈತರು ಕ್ರಷರ್ ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದ್ದರು. ಬುಧವಾರ ಕ್ರಷರ್ ಮಾಲೀಕರು ಸ್ಥಳಕ್ಕೆ ತೆರಳಿದ್ದು, ರಸ್ತೆ ಕಾಮಗಾರಿ ಮುಂದುವರಿಸಲು ತಮ್ಮ ಸಿಬ್ಬಂದಿಗೆ ಸೂಚಿಸಿದ್ದಾರೆ. ಈ ಸಂದರ್ಭ ಸ್ಥಳೀಯ ರೈತರು ಹಾಗೂ ಕ್ರಷರ್ ಮಾಲೀಕರ ನಡುವೆ ವಾಗ್ವಾದ ನಡೆದಿದೆ.

ಈ ಘಟನೆ ಬಳಿಕ, 'ಗ್ರಾಮಸ್ಥರು ತನ್ನ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಆರೋಪಿಸಿ ಗಿರಿಧರ್ ಮಾಗಡಿ ಪೊಲೀಸರಿಗೆ ದೂರು ನೀಡಿದ್ದಾರೆ. ದೂರು ಆಧರಿಸಿ ಪೊಲೀಸರು ಸಂಜೆ ಗ್ರಾಮಕ್ಕೆ ತೆರಳಿದ್ದಾರೆ. ಈ ಸಂದರ್ಭ ಮನೆಮನೆಗೆ ನುಗ್ಗಿ ರೈತರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಹಲವರಿಗೆ ಗಾಯಗಳಾಗಿವೆ.

> **ಆರೋಪಿಗಳನ್ನು ಬಂಧಿಸಲು ತೆರಳಿದ್ದ ವೇಳೆ ಪೊಲೀಸರ ಮೇಲೆ ಗ್ರಾಮಸ್ಥರು ತಳ್ಳಾಟ ನಡೆಸಿದ್ದಾರೆ. ಸಿಬ್ಬಂದಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಜೀಪ್ ಜಖಂಗೊಂಡಿದೆ**
> **ಗಿರೀಶ್,** ಎಸ್ಪಿ, ರಾಮನಗರ

**ಪೊಲೀಸರು ಹೇಳುವುದೇನು?:** 'ಗಿರಿಧರ್ ಅವರು ನೀಡಿದ ದೂರು ಆಧರಿಸಿ ನಮ್ಮ ಸಿಬ್ಬಂದಿ ಆರೋಪಿಗಳ ಬಂಧನಕ್ಕೆ ತೆರಳಿದ್ದರು. ಈ ವೇಳೆ ಗ್ರಾಮಸ್ಥರು ಪೊಲೀಸರನ್ನು ಹಿಡಿದು ಎಳೆದಾಡಿದ್ದಾರೆ. ಘಟನೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಅವರಿಗೆ ಸಣ್ಣ ಗಾಯಗಳಾಗಿವೆ. ಪೊಲೀಸ್ ಜೀಪ್ ಸಹ ಜಖಂಗೊಂಡಿದೆ.' ಎಂದು ರಾಮನಗರ ಎಸ್ಪಿ ಗಿರೀಶ್ ಮಾಹಿತಿ ನೀಡಿದರು. ಘಟನೆಯಿಂದಾಗಿ ಸದ್ಯ ಜೋಗಿಪಾಳ್ಯ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣ ಆಗಿದೆ.

# ಐವರು ಪೊಲೀಸರ ಅಮಾನತು

ವಿಜಯಪುರ: ಕರ್ತವ್ಯ ಲೋಪ ಹಾಗೂ ಬೇಜವಾಬ್ದಾರಿ ಆರೋಪದ ಮೇರೆಗೆ ನಿಡಗುಂದಿ ಹಾಗೂ ಬಸವನಬಾಗೇವಾಡಿ ಪೊಲೀಸ್ ಠಾಣೆಯ ಐವರು ಸಿಬ್ಬಂದಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದಕುಮಾರ್ ಬುಧವಾರ ಅಮಾನತು ಮಾಡಿದ್ದಾರೆ. ನಿಡಗುಂದಿ ಪೊಲೀಸ್ ಠಾಣೆಯ ಎಸ್.ಸಿ. ರೆಡ್ಡಿ, ಐ.ಜಿ. ಹೊಸಗೌಡರ ಹಾಗೂ ಬಸವನಬಾಗೇವಾಡಿ ಪೊಲೀಸ್ ಠಾಣೆಯ ಐ.ಎಂ. ಮಕಾಂದಾರ, ಆರ್.ಎಲ್. ರಾಠೋಡ, ಎಂ.ಎಂ. ಯಾಳಗಿ ಅಮಾನತುಗೊಳಗಾದವರು.

## ತಿದ್ದುಪಡಿ ತಾಂತ್ರಿಕವಾಗಿ ನ್ಯಾಯಬದ್ಧ: ಡಾ.ಎಚ್‌ಸಿ. ಮಹದೇವಪ್ಪ

# ಒಬಿಸಿ ಅಧಿಕಾರ ರಾಜ್ಯಗಳಿಗೆ ನ್ಯಾಯೋಚಿತ

ಬೆಂಗಳೂರು: ಇತರೆ ಹಿಂದುಳಿದ ವರ್ಗಗಳನ್ನು(ಒಬಿಸಿ) ಗುರುತಿಸುವ ಅಧಿಕಾರವನ್ನು ಆಯಾ ರಾಜ್ಯಗಳಿಗೆ ದೊರಕಿಸಿ ಕೊಡುವ ಸಂವಿಧಾನದ 127ನೇ ತಿದ್ದುಪಡಿ ತಾಂತ್ರಿಕವಾಗಿ ನ್ಯಾಯಬದ್ಧ ವಿಚಾರ ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ.ಮಹದೇವಪ್ಪ ಹೇಳಿದ್ದಾರೆ.

ತಿದ್ದುಪಡಿ ಮಸೂದೆಗೆ ಲೋಕಸಭೆ ಅಂಗೀಕಾರ ನೀಡಿದ್ದು, ರಾಜ್ಯಸಭೆಯಲ್ಲಿ ಅಂಗೀಕಾರಗೊಂಡ ಬಳಿಕ ರಾಷ್ಟ್ರಪತಿ ಯವರ ಅಂಕಿತ ಸಿಕ್ಕಿದರೆ, 3 ವರ್ಷಗಳ ಹಿಂದೆ ರಾಜ್ಯ ಸರ್ಕಾರಗಳಿಂದ ಕಸಿದುಕೊಂಡಿದ್ದ ಸಾಂವಿಧಾನಿಕ ಹಕ್ಕೊಂದನ್ನು ಕೇಂದ್ರವು ರಾಜ್ಯಗಳಿಗೆ ಮರಳಿಸಿದಂತಾಗುತ್ತದೆ ಎಂದು ಅವರು ತಿಳಿಸಿದ್ದಾರೆ.



ಡಾ.ಎಚ್‌ಸಿ. ಮಹದೇವಪ್ಪ

ಒಂದು ಪ್ರಾದೇಶಿಕ ಗಡಿಯೊಳಗೆ ವಾಸಿಸುವ ನಿರ್ದಿಷ್ಟ ಭಾಷೆಯ ಜನ ಸಮುದಾಯಗಳ ಬದುಕಿನ ವಿನ್ಯಾಸಗಳು ಮತ್ತು ಒಂದು ರಾಜ್ಯದ ಆರ್ಥಿಕತೆಯ ಪರಿಮಿತಿಯಲ್ಲಿ ಬದುಕುವ ಮತ್ತು ಹಾಗೆ ಬದುಕುವಾಗ ಅವರ ಬದುಕಿನಲ್ಲಿ ಉಂಟಾಗುವ ಬದಲಾವಣೆಗಳನ್ನು ಆಯಾ ರಾಜ್ಯದೊಳಗಿನ ತಜ್ಞರು ಅರ್ಥ ಮಾಡಿಕೊಳ್ಳುವಷ್ಟು ಸುಲಭವಾಗಿ ಹೊರಗಿನ ಮಂದಿ ಅರ್ಥ ಮಾಡಿಕೊಳ್ಳುವುದು ಕಷ್ಟ ಎಂದು ಮಹದೇವಪ್ಪ ಹೇಳಿದ್ದಾರೆ.

ಈಗಾಗಲೇ ತಜ್ಞರ ಆಯೋಗದ ಶಿಫಾರಸಿನ ಮೇರೆಗೆ ಕೆಲ ನಿರ್ದಿಷ್ಟ ಜನ ಸಮುದಾಯಗಳಿಗೆ ನೀಡಲಾದ ಹಿಂದುಳಿದ ವರ್ಗ ಸ್ಥಾನಮಾನ ಪ್ರಕ್ರಿಯೆಯನ್ನು ಇನ್ನಷ್ಟು ಅರ್ಥ ಮಾಡಿಕೊಳ್ಳಲು ಹಾವನೂರು, ಚಿನ್ನಪ್ಪರೆಡ್ಡಿ ಹಾಗೂ ಇನ್ನೂ ಕೆಲ ಆಯೋಗದ ವರದಿಗಳನ್ನು ಪರಾಮರ್ಶೆ ಮಾಡುವ ಅಗತ್ಯವಿದೆ. ಈಗಾಗಲೇ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದ್ದು, ಅದರ ಆಧಾರದಲ್ಲಿ ಈಗಿನ ಜನಸಂಖ್ಯೆಯ ಸಾಮಾಜಿಕ ಸ್ಥಿತಿಗತಿ ಆಧರಿಸಿ, ಮೀಸಲಾತಿ ಇನ್ನಿತರ ಸಂವಿಧಾನಾತ್ಮಕ ಅನುಕೂಲಗಳನ್ನು ನೀಡುವುದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಹೆಚ್ಚು ಅರ್ಥಪೂರ್ಣ ಎಂದು ಅವರು ಹೇಳಿದ್ದಾರೆ.

# ಕೆರೆ ಪ್ರದೇಶಗಳ ಒತ್ತುವರಿ ತೆರವಿಗೆ ಸುತ್ತೋಲೆ

**ಮುಖ್ಯಾಂಶಗಳು**

- ಜಲ ಕಾಯಗಳ ಜಮೀನಿನ ಒತ್ತುವರಿ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಪಿಐಎಲ್
- ಜುಲೈ 14 ರಂದು ತೆರವಿಗೆ ಆದೇಶ ಹೊರಡಿಸಿದ್ದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿನ ಕೆರೆ, ಕಟ್ಟೆ ಮೊದಲಾದ ಜಲಕಾಯಗಳ ಹಾಗೂ ಅವುಗಳ ನಿರ್ಬಂಧಿತ ಪ್ರದೇಶಗಳಲ್ಲಿನ ಒತ್ತುವರಿಗಳನ್ನು ಹೈಕೋರ್ಟ್ ಆದೇಶದಂತೆ ತೆರವುಗೊಳಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಬುಧವಾರ ಸುತ್ತೋಲೆ ಹೊರಡಿಸಿದೆ.

ಜಲ ಕಾಯಗಳ ಜಮೀನಿನ ಒತ್ತುವರಿ ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಜುಲೈ 14ರಂದು ಆದೇಶ ಪ್ರಕಟಿಸಿತ್ತು. ಕರ್ನಾಟಕ ಕೆರೆ ಸಂರಕ್ಷಣೆ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ, ಬಿಬಿಎಂಪಿ ಕಾಯ್ದೆ, ಮಹಾನಗರ ಪಾಲಿಕೆಗಳ ಕಾಯ್ದೆ, ಪುರಸಭೆಗಳ ಕಾಯ್ದೆಗಳಲ್ಲಿ ಜಲ ಕಾಯಗಳ ಸಂರಕ್ಷಣೆಗೆ ಇರುವ ಅಧಿಕಾರ ಬಳಸಿಕೊಂಡು ಒತ್ತುವರಿ ತೆರವುಗೊಳಿಸುವಂತೆ ಆದೇಶಿಸಿತ್ತು.

ಹೈಕೋರ್ಟ್ ಆದೇಶದ ಅನುಸಾರ ಬಿಬಿಎಂಪಿ ಸೇರಿದಂತೆ ಎಲ್ಲ ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು, ಪಟ್ಟಣ ಪಂಚಾಯಿತಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೂ ಸೇರಿದಂತೆ ಎಲ್ಲ ನಗರ ಯೋಜನಾ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯಲ್ಲಿರುವ ಜಲ ಕಾಯಗಳು ಮತ್ತು ಅವುಗಳ ಅಂಚಿನಿಂದ 30 ಮೀಟರ್‌ವರೆಗಿನ ನಿರ್ಬಂಧಿತ ವಲಯದಲ್ಲಿರುವ ಒತ್ತುವರಿಗಳನ್ನು ತೆರವುಗೊಳಿಸಬೇಕು ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

# ಈಗ ಚುನಾವಣೆ ನಡೆಸುವ ಅಗತ್ಯವೇನಿದೆ?

ಬೆಳಗಾವಿ: 'ಕೋವಿಡ್ 3ನೇ ಅಲೆಯ ಭೀತಿಯ ನಡುವೆ ಮಹಾನಗರಪಾಲಿಕೆಗೆ ಚುನಾವಣೆ ನಡೆಸುವ ಅಗತ್ಯವೇನಿದೆ?' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಕೇಳಿದರು.



ಇಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಡಿಸೆಂಬರ್‌ವರೆಗೂ ಯಾವುದೇ ಚುನಾವಣೆ ನಡೆಸದಿರಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ ಜಾಗ್ರತೆ ವಹಿಸಬೇಕು ಎಂದು ಪ್ರಧಾನಿ ಹೇಳುತ್ತಿದ್ದಾರೆ. ನ್ಯಾಯಾಲಯಗಳೂ ತಿಳಿಸುತ್ತಿವೆ. ಹೀಗಿರುವಾಗ ಆಯೋಗ ಚುನಾವಣೆ ಘೋಷಿಸಿದ ಉದ್ದೇಶವೇನು? ಯಾರಿಗೆ ಕೇಳೋಣ?' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ರಾಜಕೀಯ ಪಕ್ಷವಾಗಿ ಚುನಾವಣೆ ಎದುರಿಸಲು ಸಿದ್ಧವಿದ್ದೇವೆ. ಆದರೆ, ಈಗಲೇ ನಡೆಸುವ ತುರ್ತೇನಿದೆ?' ಎಂದು ಕೇಳಿದರು. 'ತಾಲ್ಲೂಕು ಪಂಚಾಯಿತಿಗಳನ್ನು ರದ್ದುಪಡಿಸಲು ಬರುವುದಿಲ್ಲ' ಎಂದು ಪ್ರತಿಕ್ರಿಯಿಸಿದರು.

# ಸಂಸದೀಯ ಇಲಾಖೆ: ಶ್ರೀಧರ್ ಕಾರ್ಯದರ್ಶಿ

ಬೆಂಗಳೂರು: ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಕಾರ್ಯದರ್ಶಿಯಾಗಿ ಜಿ. ಶ್ರೀಧರ್ ಅವರನ್ನು ನೇಮಿಸಲಾಗಿದೆ. ಕಳೆದ 3 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕಾರ್ಯದರ್ಶಿ ಹುದ್ದೆಯಲ್ಲಿದ್ದ ದ್ವಾರಕಾನಾಥ್ ಬಾಬು ಅವರ ಅವಧಿ ಜು. 31ರಂದು ಅಂತ್ಯವಾಗಿತ್ತು.



2018ರಿಂದ ಕಾರ್ಯದರ್ಶಿ ಹುದ್ದೆ ಖಾಲಿಯಿದ್ದು, ಈ ಹುದ್ದೆಯಿಂದ ನಿವೃತ್ತರಾಗಿದ್ದ ದ್ವಾರಕಾನಾಥ್ ಬಾಬು ಅವರನ್ನೇ ಗುತ್ತಿಗೆ ಆಧಾರದಲ್ಲಿ ಮುಂದುವರಿಸಲಾಗಿತ್ತು. ಹಿರಿಯ ಅಧಿಕಾರಿಗಳ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಇಲಾಖೆಯಲ್ಲಿ ವಿಶೇಷ ಕಾರ್ಯದರ್ಶಿಯಾಗಿರುವ ಶ್ರೀಧರ್ ಅವರನ್ನು ಇದೀಗ ಖಾಲಿ ಹುದ್ದೆಗೆ ನೇಮಿಸಿ ಆದೇಶ ಹೊರಡಿಸಲಾಗಿದೆ.

# ಕಸಾಪ: ಪುಸ್ತಕಗಳಿಗೆ ರಿಯಾಯಿತಿ ಘೋಷಣೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ ಪ್ರಕಟಣೆಯ ಎಲ್ಲ ಪುಸ್ತಕಗಳಿಗೆ ಶೇ 10ರಿಂದ ಶೇ 75ರವರೆಗೆ ರಿಯಾಯಿತಿ ಘೋಷಿಸಿದೆ.

ಈ ಕೊಡುಗೆ ಆಗಸ್ಟ್ 31 ರವರೆಗೂ ಇರಲಿದೆ. ರಜಾ ದಿನಗಳು ಸೇರಿದಂತೆ ವಾರದ ಎಲ್ಲ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಪರಿಷತ್ತಿನ ಪುಸ್ತಕ ಮಾರಾಟ ವಿಭಾಗದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ.

ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು ಹಾಗೂ ಸಂಕ್ಷಿಪ್ತ ಕನ್ನಡ ಇಂಗ್ಲಿಷ್ ನಿಘಂಟಿಗೆ ಶೇ 10ರಷ್ಟು ರಿಯಾಯಿತಿ ಸಿಗಲಿದೆ. ಬೃಹತ್ ಕನ್ನಡ-ಕನ್ನಡ ನಿಘಂಟು ಪರಿಷತ್ತಿನ ಸದಸ್ಯರಿಗೆ ಶೇ 25ರಷ್ಟು ಹಾಗೂ ಸದಸ್ಯರಲ್ಲದವರಿಗೆ ಶೇ 20ರಷ್ಟು ರಿಯಾಯಿತಿ ನಿಗದಿಪಡಿಸಲಾಗಿದೆ. ಪರೀಕ್ಷಾ ಪತ್ರ-ಪುಸ್ತಕಗಳನ್ನು ಹೊರತುಪಡಿಸಿ ಉಳಿದ ಪುಸ್ತಕಗಳಿಗೆ ಶೇ 50ರಷ್ಟು, ಹಾಗೂ ಸ್ಮರಣ ಸಂಚಿಕೆಗಳಿಗೆ ಶೇ 75ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಪುಸ್ತಕ ಮಾರಾಟಗಾರರು, ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು, ಸಂಶೋಧಕರು, ಜನಸಾಮಾನ್ಯರು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮನವಿ ಮಾಡಿದ್ದಾರೆ.

ವಿಳಾಸ: ಪುಸ್ತಕ ಮಾರಾಟ ವಿಭಾಗ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.

### ನೀಲನಕ್ಷೆ ರೂಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ

# ಹಳ್ಳಿಗಳಿಗೆ 7 ಗಂಟೆ ತ್ರೀಫೇಸ್ ವಿದ್ಯುತ್

ಪ್ರಜಾವಾಣಿ ವಾರ್ತೆ


**ಬೆಂಗಳೂರು:** ರಾಜ್ಯದ ಎಲ್ಲ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ 7 ಗಂಟೆಗಳ ಕಾಲ ತ್ರೀಫೇಸ್ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಬುಧವಾರ ಮೊದಲ ಬಾರಿಗೆ ಇಂಧನ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, 'ರಾಜ್ಯದ 15 ಜಿಲ್ಲೆಗಳಲ್ಲಿ ಮಾತ್ರ 7 ಗಂಟೆಗಳ ವಿದ್ಯುತ್ ಪೂರೈಕೆಯಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ 5 ಗಂಟೆಯ ಸರಿಯಾಗಿ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ಈ ಅಸಮಾನತೆ ಹೋಗಲಾಡಿಸಲು ತಕ್ಷಣ ನೀಲನಕ್ಷೆ ಸಿದ್ಧಪಡಿಸಿ ಕಾಲಮಿತಿಯಲ್ಲಿ ಯೋಜನೆ ಜಾರಿಗೊಳಿಸಿ ಕಾರ್ಯ ನಿರ್ವಹಿಸಬೇಕು' ಎಂದು ಹೇಳಿದರು.

ವಿದ್ಯುತ್ ಸೋರಿಕೆ ತಡೆಗಟ್ಟಿ ಒಟ್ಟಾರೆ

**ಮುಖ್ಯಾಂಶಗಳು**

- ಇಂಧನ ವ್ಯವಸ್ಥೆಯ ಸುಧಾರಣೆಗೆ ಒತ್ತು
- ನವೀಕೃತ ಇಂಧನಕ್ಕೆ ಆದ್ಯತೆ ನೀಡಲು ಸಲಹೆ
- ಗಂಗಾ ಕಲ್ಯಾಣ ಯೋಜನೆ: ಕೊಳವೆ ಬಾವಿಗಳಿಗೆ ವಿಳಂಬ ಇಲ್ಲದಂತೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚನೆ



ಬಸವರಾಜ ಬೊಮ್ಮಾಯಿ

'ಇಂಧನ ವ್ಯವಸ್ಥೆಯ ಸುಧಾರಣೆಗೆ ಒತ್ತು ನೀಡಬೇಕು. ರಾಜ್ಯದಲ್ಲಿ ನವೀಕೃತ ಮೂಲಗಳ ಸ್ಥಾಪಿತ ಸಾಮರ್ಥ್ಯ 15,184.13 ಮೆಗಾವ್ಯಾಟ್‌ಗಳಿದ್ದು, ದೇಶದಲ್ಲಿಯೇ ಕರ್ನಾಟಕ ಮುಂಚೂಣಿಯಲ್ಲಿದೆ. ಭವಿಷ್ಯದ ದೃಷ್ಟಿಯಿಂದ ನವೀಕೃತ ಇಂಧನಕ್ಕೆ ಆದ್ಯತೆ ನೀಡುವಂತೆಯೂ ಸಲಹೆ ನೀಡಿದರು.

ಗಂಗಾ ಕಲ್ಯಾಣ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಎಲ್ಲ ಅಭಿವೃದ್ಧಿ ನಿಗಮಗಳು ಸೇರಿ ಒಟ್ಟು 18,569 ಕೊಳವೆ ಬಾವಿಗಳ ವಿದ್ಯುದೀಕರಣಗೊಳಿಸುವ ಗುರಿ ಇದೆ. ಇದಕ್ಕಾಗಿ ಪ್ರತಿ ಪಂಪ್ ಸೆಟ್ ವಿದ್ಯುದೀಕರಣಕ್ಕೆ ವಿಧಿಸುವ ಮಾಡುವ ₹50 ಸಾವಿರ ವೆಚ್ಚವನ್ನು ₹1.2 ಲಕ್ಷಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಪರಿಶೀಲಿಸಲಾಗುವುದು ಎಂದು ಅವರು ಹೇಳಿದರು.

ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬಿ ಆಗುವುದರ ಜೊತೆಗೆ ಸಮರ್ಥವಾಗಿ ವಿದ್ಯುತ್ ನಿರ್ವಹಣೆಯ ದೂರದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡುವಂತೆಯೂ ಅವರು ಸೂಚನೆ ನೀಡಿದರು.

ವಿದ್ಯುತ್ ಉತ್ಪಾದನೆ ಮತ್ತು ನಿರ್ವಹಣೆ ಇನ್ನೂ ಬಹಳ ವ್ಯವಸ್ಥಿತವಾಗಿ ಮಾಡಬೇಕು. ಮಾರುಕಟ್ಟೆ ಸ್ಥಿತಿಗತಿಯನ್ನು ಆಧರಿಸಿ ಹೆಚ್ಚಿನ ದರಕ್ಕೆ ವಿದ್ಯುತ್ ಅನ್ನು ಮಾರಾಟ ಮಾಡುವಂತಾಗಬೇಕು. ಕರ್ನಾಟಕ ವಿದ್ಯುತ್ ನಿಗಮದಿಂದ ವಿದ್ಯುತ್ ಉತ್ಪಾದನೆ ಅತ್ಯಂತ ದಕ್ಷತೆಯಿಂದ ಆಗಬೇಕು. ಜಲ ಮತ್ತು ಉಷ್ಣ ವಿದ್ಯುತ್ ಘಟಕಗಳು ಅತಿ ಹೆಚ್ಚು ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಗಂಗಾ ಕಲ್ಯಾಣ ಯೋಜನೆಯಡಿ ಕೊರೆಸಿರುವ ಕೊಳವೆ ಬಾವಿಗಳಿಗೆ ವಿಳಂಬ ಇಲ್ಲದಂತೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಕೋವಿಡ್ ಸಂದರ್ಭದಲ್ಲಿ ವಿಶೇಷವಾಗಿ ಆಸ್ಪತ್ರೆಗಳಿಗೆ ವಿದ್ಯುತ್ ಸರಬರಾಜಿನಲ್ಲಿ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಇಂಧನ ಸಚಿವ ಸುನಿಲ್‌ಕುಮಾರ್, ಮುಖ್ಯಕಾರ್ಯದರ್ಶಿ ಪಿ.ರವಿಕುಮಾರ್ ಇದ್ದರು.



ಕನ್ನಡ ಮತ್ತು ಸಂಸ್ಕೃತಿ, ಇಂಧನ ಖಾತೆ ಸಚಿವ ವಿ.ಸುನಿಲ್‌ಕುಮಾರ್ ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲುಗಳ ಮೇಲೆ ಕುಳಿತು ಸಂಸ್ಕೃತಿ ಇಲಾಖೆಯ ಕಡತಗಳಿಗೆ ಸಹಿ ಮಾಡುವ ಮೂಲಕ ಕಾರ್ಯಾರಂಭ ಮಾಡಿದರು. ಈ ಸಂದರ್ಭದಲ್ಲಿ ಇಲಾಖೆ ಕಾರ್ಯದರ್ಶಿ ರವಿಶಂಕರ್, ನಿರ್ದೇಶಕ ರಂಗಪ್ಪ, ನಾಗಾಭರಣ, ತಾರಾ ಅನೂರಾಧ, ಸುನಿಲ್ ಪುರಾಣಿಕ್ ಮುಂತಾದವರು ಇದ್ದರು ಪ್ರಜಾವಾಣಿ ಚಿತ್ರ

### ಸಾಹಿತಿ–ಕಲಾವಿದರೊಂದಿಗೆ ಕಾಫಿ ಜತೆ ಚರ್ಚೆ

# ಕಲಾಕ್ಷೇತ್ರದ ಮೆಟ್ಟಿಲ ಮೇಲೆ ಕಡತಕ್ಕೆ ಸಚಿವ ಸುನಿಲ್ ಸಹಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅವರು ರವೀಂದ್ರ ಕಲಾಕ್ಷೇತ್ರದ ಮುಂಭಾಗದ ಮೆಟ್ಟಿಲುಗಳ ಮೇಲೆ ಕುಳಿತು ಇಲಾಖೆಯ ಕಡತಗಳಿಗೆ ಸಹಿ ಮಾಡುವ ಮೂಲಕ ಇಲಾಖೆಯ ಸಚಿವರಾಗಿ ಬುಧವಾರ ಕಾರ್ಯಾರಂಭ ಮಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಗ್ಗೆ ಒಲವು ಹೊಂದಿರುವ ಕಾರಣ, ಇಂಧನ ಇಲಾಖೆ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲು ವಿಶಿಷ್ಟ ರೀತಿಯಲ್ಲಿ ಅಧಿಕಾರ ವಹಿಸಿಕೊಂಡರು.

ಇದೇ ಸಂದರ್ಭದಲ್ಲಿ 2019 ಮತ್ತು 2020ನೇ ಸಾಲಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಾನಪದಶ್ರೀ ಪ್ರಶಸ್ತಿಗೆ ಆಯ್ಕೆ ಆಗಿದ್ದ ಭೀಮವ್ವ ದೊಡ್ಡ ಶಿಳ್ಳೆಕ್ಯಾತರ ಹಾಗೂ ಬಿ.ವಿ.ಕಾರಂತ ಪ್ರಶಸ್ತಿಗೆ ಆಯ್ಕೆಯಾದ ಎಚ್.ವಿ.ವೆಂಕಟಸುಬ್ಬಯ್ಯ ಅವರಿಗೆ ಕಲಾಕ್ಷೇತ್ರದ ಆವರಣದಲ್ಲಿ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಇದಕ್ಕೂ ಮುನ್ನ ಕಲಾಕ್ಷೇತ್ರದ ಮೆಟ್ಟಿಲುಗಳಿಗೆ ಸುನಿಲ್ ನಮಸ್ಕರಿಸಿದರು.

ಬಳಿಕ ಮಾತನಾಡಿದ ಅವರು, 'ಕನ್ನಡಿಗರು ಪ್ರತಿದಿನ ಕನ್ನಡ ಪತ್ರಿಕೆಯೊಂದನ್ನು ಓದುವ ಮತ್ತು ತಿಂಗಳಿಗೊಂದು ಕನ್ನಡ ಪುಸ್ತಕ ಓದುವ ಹಾಗೂ ಎರಡು ತಿಂಗಳಿಗೊಂದು ಕನ್ನಡ ಚಲನಚಿತ್ರ ನೋಡುವ ಅಭ್ಯಾಸ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಈ ಪರಿಪಾಟ ಬೆಳೆಸಿಕೊಂಡರೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಲ್ಲಿ ಎಲ್ಲರೂ ಕೈಜೋಡಿಸಿದಂತಾಗುತ್ತದೆ ಎಂದರು.

'ಇಂಧನ (ಪವರ್) ಇಲಾಖೆಯಲ್ಲಿ ಸಂಸ್ಕೃತಿ ತರುವ, ಸಂಸ್ಕೃತಿ ಇಲಾಖೆಗೆ ಪವರ್ (ಶಕ್ತಿ) ತುಂಬುವ ಕೆಲಸ ಮಾಡಬೇಕಿದೆ. ಅದನ್ನು ಅತ್ಯಂತ ಪ್ರಾಮಾಣಿಕವಾಗಿ ಮಾಡುತ್ತೇನೆ. ಎರಡೂ ಇಲಾಖೆಗಳ ಆಡಳಿತ ಸುಧಾರಣೆಗೆ ಮತ್ತು ಕಾರ್ಯಕ್ರಮಗಳ ಸಮರ್ಥ ಅನುಷ್ಠಾನಕ್ಕೆ ಬೇಕಾಗುವ ಎಲ್ಲಾ ಕ್ರಮಗಳನ್ನು ನಿರ್ದಾಕ್ಷಿಣ್ಯವಾಗಿ ಕೈಗೊಳ್ಳುತ್ತೇನೆ' ಎಂದು ಸುನಿಲ್ ಹೇಳಿದರು.

ಕಲಾಕ್ಷೇತ್ರದ ಆವರಣದಲ್ಲಿ ಇರುವ ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕ ಮಳಿಗೆಗೆ ಭೇಟಿ ಕೊಟ್ಟು, 'ಕನಕಾವಲೋಕನ', ಡಿವಿಜಿ ಅವರ 'ನೆನಪಿನ ಚಿತ್ರಗಳು' ಮತ್ತು 'ಶಿವರಾಮ ಕಾರಂತರ ನಾಟಕಗಳು' ಈ ಪುಸ್ತಕಗಳನ್ನು ಹಣ ಕೊಟ್ಟು ಖರೀದಿಸಿದರು.

**ಕಾಫಿ ಜತೆ ಚರ್ಚೆ:** ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿದ್ದ ಕ್ಯಾಂಟೀನಿನಲ್ಲಿ ಸಾಹಿತಿ ಮತ್ತು ಕಲಾವಿದರ ಜೊತೆ ಕಾಫಿ ಸೇವಿಸುತ್ತಲೇ ಕಲೆ, ವಿವಿಧ ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರ ಜತೆ ಮಾತುಕತೆ ನಡೆಸಿದರು.

# ಇಟಲಿ ವಿಶ್ವವಿದ್ಯಾಲಯದವರ ಸಂಸ್ಕೃತಿ ಏನು: ಈಶ್ವರಪ್ಪ ಪ್ರಶ್ನೆ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** 'ಇಡೀ ಜಗತ್ತು ಮೆಚ್ಚುಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರನ್ನು ಸುಲಭ ಶೌಚಾಲಯಕ್ಕೆ ಇಡಬೇಕು ಎಂದು ಹೇಳುವ 'ಇಟಲಿ ವಿಶ್ವವಿದ್ಯಾಲಯ'ದವರ ಸಂಸ್ಕೃತಿ ಎಂಥದು? ಅಂತಹ ಹೇಳಿಕೆಯನ್ನು ಕಾಂಗ್ರೆಸ್‌ನವರು ಒಪ್ಪುತ್ತಾರೆಯೇ?'

– ಹೀಗೆ ಕೇಳಿದವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ನಮ್ಮ ನಾಯಕ ಮೋದಿ ಬಗ್ಗೆ ಹಗುರವಾಗಿ ಮಾತನಾಡಿದ್ದರಿಂದ ರಕ್ತ ಕುದಿಯಿತು. ಆ ಸಿಟ್ಟಿನಲ್ಲಿ 'ಆ ಪದ' ಬಳಸಿದ್ದೆ. ಕೂಡಲೇ ವಾಪಸ್ ಪಡೆದಿದ್ದೇನೆ. ಆದರೂ ಕಾಂಗ್ರೆಸ್‌ನವರು ರಾಜಕಾರಣಕ್ಕೆ ಬಳಸಿಕೊಂಡರೆ ಏನು ಮಾಡಲಾದೀತು?' ಎಂದು ಕೇಳಿದರು.

'ನಾನು ನಾಗಪುರ ವಿಶ್ವವಿದ್ಯಾಲಯದನು ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಕರೆದಿದ್ದಾರೆ. ಅಲ್ಲಿ ಕಲಿತಿದ್ದರಿಂದಲೇ ಒಳ್ಳೆಯ ಸಂಸ್ಕಾರ ಬೆಳೆಸಿಕೊಂಡಿದ್ದೇನೆ. ಆದ್ದರಿಂದಲೇ ಶಿವಮೊಗ್ಗದ ಜನರು ನನ್ನನ್ನು 5 ಬಾರಿ ಆಯ್ಕೆ ಮಾಡಿದ್ದಾರೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ದೀನದಯಾಳ್ ಉಪಾಧ್ಯಾಯ ಮತ್ತು ವೀರ್‌ಸಾವರ್ಕರ್ ಫೋಟೊಗಳಿಗೆ ಮಸಿ ಬಳಿಯುತ್ತೇವೆ ಎನ್ನುವ ಕಾಂಗ್ರೆಸ್‌ನವರ ಸಂಸ್ಕಾರ–ಸಂಸ್ಕೃತಿ ಏನು' ಎಂದು ಪ್ರಶ್ನಿಸಿದರು.

'ಜೆಡಿಎಸ್ ಜೊತೆಗೆ ಮೃದು ಧೋರಣೆ ತಳೆದಿಲ್ಲ.ರಾಜಕೀಯ ಪಕ್ಷಗಳಾಗಿ ಕೆಲಸ ಮಾಡುತ್ತಿದ್ದಾರೆ. ಜೆಡಿಎಸ್ ಜೊತೆ ಮೈತ್ರಿಯ ಪ್ರಶ್ನೆಯೇ ಬರುವುದಿಲ್ಲ. ನಮ್ಮ ಸರ್ಕಾರ ಅಧಿಕಾರದ ಅವಧಿ ಪೂರೈಸುತ್ತದೆ' ಎಂದರು.

> ಈ ಸರ್ಕಾರ ಪತನಗೊಳ್ಳುತ್ತದೆ ಎಂಬ ಕೆಟ್ಟ ಕನಸನ್ನು ಸಿದ್ದರಾಮಯ್ಯ ಕಾಣುತ್ತಿದ್ದಾರೆ. ಈ ಜನ್ಮದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ
>
> **ಕೆ.ಎಸ್. ಈಶ್ವರಪ್ಪ,** ಸಚಿವ

### 'ಈಶ್ವರಪ್ಪ ಹರಕುಬಾಯಿ ದಾಸ'

**ನವದೆಹಲಿ:** ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಅವರು 'ಹರಕುಬಾಯಿ ದಾಸ' ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಹರಿಪ್ರಸಾದ್ ಅಭಿಪ್ರಾಯಪಟ್ಟರು.

ಅವಾಚ್ಯ ಪದಗಳಿಂದ ನಿಂದಿಸಿರುವ ಈಶ್ವರಪ್ಪ ಅವರ ಹೇಳಿಕೆಗೆ ಬುಧವಾರ ಪ್ರತಿಕ್ರಿಯೆ ನೀಡಿ, ಅವರು ಹೇಳಿಕೆ ನೀಡಿದ ದಿನ ಅಮಾವಾಸ್ಯೆ ಆಗಿದ್ದರಿಂದ ಆ ರೀತಿ ಮಾತನಾಡಿರಬಹುದು ಎಂದು ವ್ಯಂಗ್ಯವಾಡಿದರು.

ತಾವೊಬ್ಬ ಸಚಿವ ಎಂಬುದನ್ನೂ ಲೆಕ್ಕಿಸದೆ ಈಶ್ವರಪ್ಪ ಅವರು ಮೇಲಿಂದ ಮೇಲೆ ಈ ರೀತಿಯ ಹೇಳಿಕೆ ನೀಡುತ್ತಿರುವುದನ್ನು ಅವಲೋಕಿಸಿದರೆ, ಕೂಡಲೇ ಏಷ್ಯದ ಅತಿ ದೊಡ್ಡ ಮನೋ ಚಿಕಿತ್ಸಾಲಯವಾದ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುವುದು ಒಳಿತು ಎಂದು ಅವರು ಸಲಹೆ ನೀಡಿದರು.

## ಇವರೆಲ್ಲ ಎಲ್ಲಿದ್ದರೋ ಗೊತ್ತಿಲ್ಲ: ಪ್ರೀತಂಗೆ ಸೋಮಣ್ಣ ತಿರುಗೇಟು

**ಬೆಂಗಳೂರು:** 'ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿ ಹಾಸನದಲ್ಲಿ ಚುನಾವಣೆ ಮಾಡಿದ್ದೆ. ಆಗ ಇವರೆಲ್ಲ ಎಲ್ಲಿದ್ದರೊ ಗೊತ್ತಿಲ್ಲ. ದೇವೇಗೌಡರು ಈ ರಾಜ್ಯದ ಮುತ್ಸದ್ದಿ ನಾಯಕ. ಅವರ ಹಿರಿತನಕ್ಕೆ ಗೌರವ ಕೊಡಬೇಕು' ಎಂದು ಹಾಸನ ಕ್ಷೇತ್ರದ ಶಾಸಕ ಪ್ರೀತಂ ಗೌಡ ಅವರಿಗೆ ವಸತಿ ಸಚಿವ ವಿ. ಸೋಮಣ್ಣ ತಿರುಗೇಟು ನೀಡಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಸೋಮಣ್ಣನವರ ಒಳ್ಳೆಯತನ ಪ್ರೀತಂ ಗೌಡ ಅವರಿಗೆ ಖಾರವಾಗಿ ಕಾಣಿಸಿರಬಹುದು. ಅವರಿಗೆ ಒಳ್ಳೆಯದಾಗಲಿ. ಇನ್ಮುಂದೆ ನಾನು ಎಲ್ಲರಿಗೂ ಬಹುವಚನದಲ್ಲೇ ಮಾತನಾಡುತ್ತೇನೆ' ಎಂದು ಪ್ರೀತಂ ಹೇಳಿಕೆಗೆ ಸೂಕ್ಷ್ಮವಾಗಿ ಉತ್ತರಿಸಿದರು.

ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಸೋಮಣ್ಣ ಜೊತೆಗೆ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ನಿವಾಸಕ್ಕೆ ಬಸವರಾಜ ಬೊಮ್ಮಾಯಿ ತೆರಳಿ ಆಶೀರ್ವಾದ ಪಡೆದಿದ್ದರು. ಅದಕ್ಕೆ ಪ್ರೀತಂ ಗೌಡ ಅಸಮಾಧಾನ ವ್ಯಕ್ತಪಡಿಸಿದ್ದರು.

'ಮುಖ್ಯಮಂತ್ರಿಯಾದ ಕೂಡಲೇ ಸುತ್ತೂರು, ಸಿರಿಗೆರೆ, ಸಿದ್ದಗಂಗಾ ಅಥವಾ ಆದಿಚುಂಚನಗಿರಿ ಮಠಕ್ಕೋ ಭೇಟಿ ನೀಡುತ್ತಾರೆ ಎಂದು ಭಾವಿಸಿದ್ದೆವು. ಆದರೆ, ಬಸವರಾಜ ಬೊಮ್ಮಾಯಿ ಅವರು ದೇವೇಗೌಡರ ಮನೆಗೆ ಹೋಗಿದ್ದು ಬೇಸರವಾಗಿದೆ' ಎಂದಿದ್ದರು.

'ಪ್ರೀತಂ ಗೌಡ ಇತಿಮಿತಿಯಲ್ಲಿ ಮಾತನಾಡಬೇಕು. ಒಂದು ಬಾರಿ ಶಾಸಕರಾದ ತಕ್ಷಣ ದೇವರಾಗುವುದಿಲ್ಲ' ಎಂದು ಸೋಮಣ್ಣ ಕಿಡಿಕಾರಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಪ್ರೀತಂ ಗೌಡ, 'ಸೋಮಣ್ಣ ಅವರು ಐದಾರು ಸಲ ಗೆದ್ದಿರಬಹುದು. 5-6 ಸಲ ಗೆದ್ದವರಿಗೇನು ಆರು ಮತ ಕೊಡಲ್ಲ. ಅವರಿಗೂ ಒಂದೇ ಮತ . ಯಾರೂ ಇಲ್ಲಿ ಜೀತದ ಆಳುಗಳಲ್ಲ. ನಾನು ರಾಜಕಾರಣ ಮಾಡಲು ಬಂದಿರುವವನು' ಎಂದು ಹೇಳಿದ್ದರು.

## ಕೆ-ಸೆಟ್ ಪರೀಕ್ಷೆಯಲ್ಲಿ ಲೋಪ: ಪ್ರತಾಪಸಿಂಹ ಆರೋಪ

**ಮೈಸೂರು:** 'ಮೈಸೂರು ವಿಶ್ವವಿದ್ಯಾಲಯ ಈಚೆಗೆ ನಡೆಸಿದ 2021ನೇ ಸಾಲಿನ ಕೆ-ಸೆಟ್ ಪರೀಕ್ಷೆಯ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳ ಆಯ್ಕೆಯಲ್ಲೇ ಗಂಭೀರ ಲೋಪವಿದೆ' ಎಂದು ಸಂಸದ ಪ್ರತಾಪಸಿಂಹ ಆರೋಪಿಸಿದ್ದು, ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ಇತಿಹಾಸ ವಿಭಾಗದಲ್ಲಿ 17 ಕೀ–ಉತ್ತರಗಳು ತಪ್ಪಾಗಿವೆ. ಒಂದು ಕೀ–ಉತ್ತರಕ್ಕೆ ಆಕ್ಷೇಪಣೆ ಸಲ್ಲಿಸಲು ₹1 ಸಾವಿರ ಡಿ.ಡಿ ತೆಗೆಸಬೇಕು. ಆಕ್ಷೇಪಣೆ ಸಲ್ಲಿಕೆಯಾಗದಿದ್ದರೆ ಕೀ–ಉತ್ತರಗಳು ಸರಿ ಎಂಬ ನಿರ್ಧಾರಕ್ಕೆ ವಿಶ್ವವಿದ್ಯಾಲಯ ಬರುತ್ತದೆ. ಈ ಮೂಲಕ ಅಭ್ಯರ್ಥಿಗಳ ಜೀವನದೊಂದಿಗೆ ವಿಶ್ವವಿದ್ಯಾಲಯ ಚೆಲ್ಲಾಟವಾಡುತ್ತಿದೆ. ಮೈಸೂರು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಂತೆ ಆಗಬಾರದು. ಆರೋಪಗಳಿಗೆ ಸ್ಪಷ್ಟೀಕರಣ ನೀಡಿ, ಮರು ಪರೀಕ್ಷೆ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

'ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ನುರಿತ ಪ್ರಾಧ್ಯಾಪಕರ ಸಮಿತಿ ಈಗ ಇಲ್ಲ. ಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆ ಠೇವಣಿ ವಿಭಾಗದಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳನ್ನು ತೆಗೆಯಲಾಗಿದೆ ಎಂಬ ದೂರುಗಳೂ ಬಂದಿವೆ. ಕೂಡಲೇ ಇಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು' ಎಂದು ಮನವಿ ಮಾಡಿದ್ದಾರೆ.

'ಕೆ-ಸೆಟ್ ಪರೀಕ್ಷೆಯಲ್ಲಿ ನಡೆಯುತ್ತಿರುವ ಅಕ್ರಮ ಹಾಗೂ 2 ವರ್ಷಗಳಲ್ಲಿ ಯಾವುದೇ ಪ್ರಕ್ರಿಯೆ ನಡೆಸದೆ 400ಕ್ಕಿಂತ ಹೆಚ್ಚು ಗ್ರೂಪ್–ಡಿ ನೌಕರರ ಅಕ್ರಮವಾಗಿ ನೇಮಕಾತಿ ಕುರಿತು ಸಮಗ್ರ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆಗಾಗಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿದಾಗ, 'ಸಂಸದ ಪ್ರತಾಪಸಿಂಹ ಅವರ ಪತ್ರ ಈಗಷ್ಟೇ ಬಂದಿದೆ. ಓದಿದ ನಂತರ ಪ್ರತಿಕ್ರಿಯಿಸುವೆ' ಎಂದರು.

## 'ರಾಜ್ಯಕ್ಕೆ ಕೇಂದ್ರದ ₹ 500 ಕೋಟಿ ಮಂಜೂರು'

**ನವದೆಹಲಿ:** ಹನಿ ನೀರಾವರಿ ಪದ್ಧತಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಆರಂಭಿಸಿರುವ 'ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ' (ಪಿಎಂಕೆಎಸ್‌ವೈ) ಅಡಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಕರ್ನಾಟಕಕ್ಕೆ ₹ 500 ಕೋಟಿ ಮಂಜೂರು ಮಾಡಲಾಗಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಯೋಜನೆಯ ಮೊದಲ ಕಂತಿನ ರೂಪದಲ್ಲಿ ರಾಜ್ಯಕ್ಕೆ ₹ 300 ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

₹ 300 ಕೋಟಿ ಅನುದಾನದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ರೈತರಿಗೆ ₹ 51 ಕೋಟಿ , ಪರಿಶಿಷ್ಟ ಪಂಗಡಗಳ ರೈತರಿಗೆ ₹ 21 ಕೋಟಿ, ಇತರ ರೈತರಿಗೆ ₹ 228 ಕೋಟಿ ಮೀಸಲಿರಿಸಲಾಗಿದೆ ಎಂದು ಅವರು ವಿವರಿಸಿದರು.

ಕಡಿಮೆ ನೀರು ಲಭ್ಯವಿರುವ ಪ್ರದೇಶಗಳಲ್ಲಿ ಹನಿ ನೀರಾವರಿ ಪದ್ಧತಿಯನ್ನು ಉತ್ತೇಜಿಸಲು 2018ರಲ್ಲಿ ಯೋಜನೆ ಆರಂಭಿಸಲಾಗಿದೆ. ಇದುವರೆಗೆ ರಾಷ್ಟ್ರಾದ್ಯಂತ 54 ಲಕ್ಷ ಹೆಕ್ಟೇರ್ ಭೂಮಿಯು ಯೋಜನೆ ಅಡಿ ಒಳಪಟ್ಟಿದ್ದು, 2026ರ ಅಂತ್ಯಕ್ಕೆ 1.12 ಲಕ್ಷ ಹೆಕ್ಟೇರ್‌ನ ಗುರಿ ಇರಿಸಿಕೊಳ್ಳಲಾಗಿದೆ. ಪ್ರಸಕ್ತ ವರ್ಷ ದೇಶದಾದ್ಯಂತ ₹ 4000 ಕೋಟಿ ಒದಗಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಸಿರಿ ಧಾನ್ಯ ಬೆಳೆಯುವ ರೈತರನ್ನೂ ಕೇಂದ್ರ ಸರ್ಕಾರ ಉತ್ತೇಜಿಸುತ್ತಿದೆ. ವಿಶ್ವಸಂಸ್ಥೆಯು 2023ರ ವರ್ಷವನ್ನು ಅಂತರರಾಷ್ಟ್ರೀಯ 'ಸಿರಿ ಧಾನ್ಯ ವರ್ಷ'ವನ್ನಾಗಿ ಆಚರಿಸಲು ಒಪ್ಪಿಗೆ ಸೂಚಿಸಿದೆ ಎಂದು ಅವರು ತಿಳಿಸಿದರು.

ಅಮೆರಿಕ ಮತ್ತಿತರ ರಾಷ್ಟ್ರಗಳು ಭಾರತದಲ್ಲಿ ಬೆಳೆಯುವ ಸಿರಿ ಧಾನ್ಯವನ್ನು ಆಮದು ಮಾಡಿಕೊಳ್ಳಲು ಒಪ್ಪಿಗೆ ನೀಡಿವೆ. ರಾಜ್ಯದ ಒಣಭೂಮಿ ಪ್ರದೇಶದ ರೈತರು ಕಡಿಮೆ ನೀರನ್ನು ಬಳಸಿ ಬೆಳೆಯಬಹುದಾದ ಸಿರಿ ಧಾನ್ಯಗಳತ್ತ ಒತ್ತು ನೀಡಬೇಕು ಎಂದು ಅವರು ಮನವಿ ಮಾಡಿದರು.

## ದೆಹಲಿ ಅಂಗಳಕ್ಕೆ ಆನಂದ್ ಬೇಡಿಕೆ

ಒಂದನೇ ಪುಟದಿಂದ...

'ಈ ರೀತಿಯ ಗೊಂದಲಗಳು ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರಲಿದ್ದು, ಮಾಡುತ್ತಿರುವ ಒಳ್ಳೆಯ ಕೆಲಸಗಳನ್ನು ಮರೆ ಮಾಚಲಿವೆ. ಮುಂದೆ ಒಳ್ಳೆಯ ಅವಕಾಶಗಳು ಬರಲಿವೆ' ಎಂದು ಹೇಳಿದ ಬೊಮ್ಮಾಯಿ, ಸಿಂಗ್ ಮನವೊಲಿಸುವ ಯತ್ನ ಮಾಡಿದರು ಎಂದು ಗೊತ್ತಾಗಿದೆ.

ಮಾತುಕತೆ ನಂತರ ಆನಂದ ಸಿಂಗ್ ತಮ್ಮ ಪಟ್ಟು ಸಡಿಲಿಸಿದರು.

ಬಳಿಕ, ಬೊಮ್ಮಾಯಿ ಜತೆಗೆ ಸುದ್ದಿಗಾರರೊಂದಿಗೆ ಮಾತನಾಡಿದ ಸಿಂಗ್, 'ರಾಜೀನಾಮೆ ಕೊಡುವುದಾಗಿ ಎಲ್ಲಿಯೂ ಹೇಳಿಲ್ಲ. ಖಾತೆ ಬದಲಾವಣೆಗಾಗಿ ಬೇಡಿಕೆ ಮಂಡಿಸಿರುವುದು ಹೌದು. ವರಿಷ್ಠರ ಜತೆ ಮಾತನಾಡಿ, ಆದ್ಯತೆ ಮೇರೆಗೆ ಪರಿಹಾರ ಕಲ್ಪಿಸುವುದಾಗಿ ಮುಖ್ಯಮಂತ್ರಿ ಭರವಸೆ ಕೊಟ್ಟಿದ್ದಾರೆ. ಸರ್ಕಾರಕ್ಕೆ ನಮ್ಮ ಸಹಕಾರ ಮುಂದುವರಿಯಲಿದೆ' ಎಂದರು.

'ನಾನೂ ದೊಡ್ಡ ಖಾತೆಗಳನ್ನು ನಿಭಾಯಿಸಬಲ್ಲೆ, ಅವಕಾಶ ನೀಡಿ ಎಂಬುದಾಗಿ ಸಿಂಗ್ ಹೇಳಿದರು. ಅವರ ಎಲ್ಲ ಬೇಡಿಕೆ ಮತ್ತು ಭಾವನೆಗಳನ್ನು ಪಕ್ಷದ ವರಿಷ್ಠರಿಗೆ ತಿಳಿಸಲಾಗುವುದು. ಅಂತಿಮವಾಗಿ ವರಿಷ್ಠರು ಕೈಗೊಳ್ಳುವ ಯಾವುದೇ ತೀರ್ಮಾನಕ್ಕೂ ಬದ್ಧರಾಗಲು ಅವರು ಒಪ್ಪಿದ್ದಾರೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

'ಈ ಹಿಂದೆಯೂ ಕ್ಲಿಷ್ಟ ಪರಿಸ್ಥಿತಿಯಲ್ಲಿ ಆನಂದ್ ಸಿಂಗ್ ಮತ್ತು ನಾವು ಒಂದಾಗಿ ಹೋಗಿದ್ದೆವು. ಈಗಲೂ ಒಂದಾಗಿ ಹೋಗಲು ತೀರ್ಮಾನಿಸಿದ್ದೇವೆ' ಎಂದರು.

ಆರ್.ಅಶೋಕ ಮಾತನಾಡಿ, 'ಆನಂದ್ ಸಿಂಗ್ ರಾಜೀನಾಮೆ ಕೊಡುವುದಿಲ್ಲ. ಪಕ್ಷದ ಪರವಾಗಿ ಇರ್ತಾರೆ ಮತ್ತು ಕೆಲಸ ಮಾಡುತ್ತಾರೆ. ಅವರು ತಮ್ಮ ಎಲ್ಲ ವಿಚಾರಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದರು' ಎಂದು ಹೇಳಿದರು.

**ಮನವೊಲಿಸಿದ ಯಡಿಯೂರಪ್ಪ:** ಬೊಮ್ಮಾಯಿ ಅವರನ್ನು ಭೇಟಿ ಮಾಡುವುದಕ್ಕೆ ಮೊದಲು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಶಾಸಕ ರಾಜೂಗೌಡ ಅವರ ಜತೆ ಸಿಂಗ್ ಭೇಟಿ ಮಾಡಿದರು.

'ಯಾವುದೇ ಕಾರಣಕ್ಕೂ ದುಡುಕಿ ನಿರ್ಧಾರ ತೆಗೆದುಕೊಳ್ಳುವುದು ಬೇಡ. ಖಾತೆಗಳ ಹಂಚಿಕೆ ತೀರ್ಮಾನ ಮಾಡಿದ್ದು ವರಿಷ್ಠರು. ಸದ್ಯಕ್ಕೆ ಬದಲಾವಣೆ ಮಾಡುವ ಸಾಧ್ಯತೆ ಇಲ್ಲ. ಮುಂದೆ ಉತ್ತಮ ಭವಿಷ್ಯ ಇರುವುದರಿಂದ ಈಗ ಕೊಟ್ಟಿರುವ ಖಾತೆಯಲ್ಲೇ ಮುಂದುವರಿಯುವುದು ಸೂಕ್ತ' ಎಂದು ಯಡಿಯೂರಪ್ಪ ಸಲಹೆ ನೀಡಿದರು.

'ವಿಜಯನಗರ ಜಿಲ್ಲೆ ರಚನೆ ಮಾಡಬೇಕು ಎಂಬ ಪ್ರಮುಖ ಬೇಡಿಕೆ ಈಡೇರಿಸಿದಿರಿ. ಎರಡೆರಡು ಬಾರಿ ಮಂತ್ರಿ ಮಾಡಿದಿರಿ. ಆದರೆ ನಿಮ್ಮ ಅವಧಿಯಲ್ಲೇ ಹೇಳದೇ ಮಾಡದೇ ಕೊಟ್ಟ ಖಾತೆ ಬದಲಿಸಲಾಯಿತು. ಈಗಲೂ ಅದೇ ರೀತಿ ಆಗಿದೆ. ನನಗೂ ಉತ್ತಮ ಖಾತೆ ನಿರ್ವಹಿಸುವ ಶಕ್ತಿ ಇದೆ' ಎಂದು ಆನಂದ್ ಸಿಂಗ್, ಯಡಿಯೂರಪ್ಪ ಅವರಿಗೆ ಹೇಳಿದರು ಎಂದು ಮೂಲಗಳು ತಿಳಿಸಿವೆ.

### 'ವೇಣುಗೋಪಾಲ ನಿರ್ಧರಿಸುತ್ತಾನೆ'

**ಹೊಸಪೇಟೆ (ವಿಜಯನಗರ):** 'ನನ್ನ ರಾಜಕೀಯ ಜೀವನ ಅಂತ್ಯವಾಗಬಹುದೊ ಅಥವಾ ಮತ್ತೆ ಹೊಸದಾಗಿ ಆರಂಭವಾಗಬಹುದೊ ಎನ್ನುವುದು ವೇಣುಗೋಪಾಲ ನಿರ್ಧರಿಸುತ್ತಾನೆ. ಅದನ್ನು ಕಾದು ನೋಡೋಣ' ಎಂದು ಸಚಿವ ಆನಂದ್ ಸಿಂಗ್ ಹೇಳಿದರು.

ನಗರದ ವೇಣುಗೋಪಾಲ ದೇವಸ್ಥಾನದಲ್ಲಿ ಬುಧವಾರ ಬೆಳಿಗ್ಗೆ ಏರ್ಪಡಿಸಿದ್ದ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಐದು ವರ್ಷ ಸಮಾಜ ಸೇವೆ ಮಾಡಿದ್ದೇನೆ. 15 ವರ್ಷಗಳಿಂದ ರಾಜಕೀಯದಲ್ಲಿದ್ದೇನೆ. ನನ್ನ ರಾಜಕೀಯ ಜೀವನ ಆರಂಭವಾಗಿದ್ದು ಇದೇ ದೇವಸ್ಥಾನದಿಂದ. ಈಗ ಅದು ಇಲ್ಲೇ ಅಂತ್ಯವಾಗುತ್ತೋ ಗೊತ್ತಿಲ್ಲ. ಎಲ್ಲವೂ ಕೃಷ್ಣನ ಆಶೀರ್ವಾದದ ಮೇಲೆ ನಿರ್ಧರಿಸಿದೆ' ಎಂದರು.

'ಒಳ್ಳೆತನ, ಒಳ್ಳೆಯ ವಿಚಾರಗಳಿಗೆ ಮುಂದೆ ಇಟ್ಟ ಹೆಜ್ಜೆ ಹಿಂದೆ ಇಡಬೇಡ. ಅದಕ್ಕೆ ನೀನು ಬಲಿಯಾದರೂ ಪರವಾಗಿಲ್ಲ ಎಂದು ದೇವರು ವಿಶ್ವಾಸ ತುಂಬಿದ್ದಾನೆ. ನನಗೆ ಯಾರ ರಕ್ಷಣೆ ಇಲ್ಲದಿದ್ದರೂ ಕೃಷ್ಣನ ಆಶೀರ್ವಾದ ಇದೆ. ಮಹಾಭಾರತದಲ್ಲಿ ಅರ್ಜುನನಿಗೆ ಕೃಷ್ಣನ ಶ್ರೀರಕ್ಷೆ ಇರಲಿಲ್ಲವೇ? ಆತ ನನ್ನ ಬೆನ್ನ ಹಿಂದೆಯೂ ನಿಲ್ಲುತ್ತಾನೆ ಎಂಬ ಭರವಸೆ ಇದೆ. ಯಾರಿಂದ ರಕ್ಷಣೆ ಸಿಗಬಹುದು ಅಂತ ನಾನು ಅತಿಯಾಗಿ ಭಾವಿಸಿದ್ದೆನೊ ಅದನ್ನು ಈಗ ಕಳೆದುಕೊಂಡಿದ್ದೇನೆ. ಅವರ ಮೇಲೆ ವಿಶ್ವಾಸ ಇಲ್ಲ' ಎಂದರು.

'ನನಗೆ ನಮ್ಮ ನಾಯಕರು, ಪಕ್ಷದ ಮೇಲೆ ವಿಶ್ವಾಸ ಇದೆ. ಆದರೆ, ಅವರಿಗೆ ನನ್ನ ಮೇಲೆ ವಿಶ್ವಾಸವಿದೆಯೇ ಎಂಬ ಅನುಮಾನ ಬರುತ್ತಿದೆ. ರಾಜಕೀಯದಲ್ಲಿದ್ದು ದುಡ್ಡು ಮಾಡುವುದು, ಕೊಳ್ಳೆ ಹೊಡೆಯುವುದಕ್ಕೆ ಬಂದಿಲ್ಲ. ಎಲ್ಲ ರಾಜಕಾರಣಿಗಳು ಕೆಟ್ಟವರಲ್ಲ. ನಾನು ಯಾವ ಗುಂಪಿನಲ್ಲಿ ಸೇರುತ್ತೇನೆ ಎನ್ನುವುದು ಜನ ಹೇಳಬೇಕು. ನಾನೇ ನನ್ನ ಬಗ್ಗೆ ಸರ್ಟಿಫಿಕೇಟ್ ಕೊಡುವುದು ಸೂಕ್ತವಲ್ಲ' ಎಂದರು.

### ನನಗೆ ಯಾವುದೇ ಅಸಮಾಧಾನ ಇಲ್ಲ: ಎಂಟಿಬಿ ನಾಗರಾಜ್

'ಆತ್ಮತೃಪ್ತಿಯಿಂದಲೇ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ಮಾಡಿದ್ದೇನೆ. ಕೈಗಾರಿಕೆಗಳ ಸ್ಥಿತಿಗತಿ ಕುರಿತು ಚರ್ಚಿಸಿದ್ದೇವೆ. ನನಗೆ ಯಾವುದೇ ಅಸಮಾಧಾನ ಇಲ್ಲ' ಎಂದು ಸಣ್ಣ ಕೈಗಾರಿಕೆಗಳ ಸಚಿವ ಎಂಟಿಬಿ ನಾಗರಾಜ್ ಹೇಳಿದರು.

'ಮುಖ್ಯಮಂತ್ರಿ ಬಳಿ ನನ್ನ ಅಭಿಪ್ರಾಯ ಹೇಳಿದ್ದೇನೆ. ಅವರು ಕೆಲಸ ಮಾಡುತ್ತಿರಿ ಎಂದಿದ್ದಾರೆ. ಬದಲಾವಣೆ ಬಗ್ಗೆ ಕೇಳಿದ್ದೇನೆ' ಎಂದರು.

# ಕೆಪಿಎಸ್‌ಸಿ ಅಧ್ಯಕ್ಷ 'ಅನರ್ಹ' ?

ಒಂದನೇ ಪುಟದಿಂದ...

ಭಾರತೀಯ ರಾಷ್ಟ್ರೀಯ ಸಹಕಾರಿ ಸಂಘ (ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ) ಗುಲ್ಬರ್ಗದಲ್ಲಿ (ಕಲಬುರ್ಗಿ) ಶಿಕ್ಷಣ ಫೀಲ್ಡ್ ಪ್ರಾಜೆಕ್ಟ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಅವರು ಕೆಲಸ ಮಾಡಿದ್ದರು. ಕೆಲಸ ನಿರ್ವಹಣೆ ತೃಪ್ತಿಕರವಲ್ಲ ಮತ್ತು ಸಮಯಪಾಲನೆ ಮಾಡಿಲ್ಲ ಎಂಬ ಕಾರಣಕ್ಕೆ ಅವರ ಗುತ್ತಿಗೆ ಅವಧಿಯನ್ನು ಮುಂದುವರಿಸದಂತೆ 2010ರ ಮಾರ್ಚ್ 18ರಂದು ಸಂಘದ ಮುಖ್ಯ ಕಾರ್ಯನಿರ್ವಾಹಕರು ಕಚೇರಿ ಆದೇಶ ಹೊರಡಿಸಿದ್ದರು. ಅಲ್ಲದೆ, ತಾನು ಕರ್ತವ್ಯದಲ್ಲಿದ್ದ ಅವಧಿಯ ಸೌಲಭ್ಯಗಳ ಸೆಟ್ಲ್‌ಮೆಂಟ್‌ಗಳಿಗಾಗಿ 2015ರ ಡಿ. 21ರಂದು ಶಿವಶಂಕರಪ್ಪ ಬರೆದ ಪತ್ರಕ್ಕೆ 2016ರ ಜೂನ್ 1ರಂದು ಉತ್ತರಿಸಿದ್ದ ಸಂಘದ ನಿರ್ದೇಶಕರು (ಪ್ರಾಜೆಕ್ಟ್), 'ನೀವು ನಿರ್ವಹಿಸಿದ್ದ ಹುದ್ದೆಯ ಅಧಿಕಾರವನ್ನು ಗುಲ್ಬರ್ಗದ ಪ್ರಾಜೆಕ್ಟ್ ಅಧಿಕಾರಿಗೆ ತಕ್ಷಣ ನೀಡಿ ನಿರಾಕ್ಷೇಪಣಾ ಪತ್ರ ಪಡೆಯಬೇಕು. ಬಳಿಕ ನಿಮಗಿರುವ ಸೌಲಭ್ಯಗಳನ್ನು ನೀಡಲಾಗುವುದು' ಎಂದಿದ್ದರು. 2018ರ ಏ. 23ರಂದು ನಿರ್ದೇಶಕರು (ಪ್ರಾಜೆಕ್ಟ್) ಪತ್ರ ಬರೆದು, ಗ್ರ್ಯಾಚ್ಯುಯಿಟಿ ಮತ್ತು ರಜೆ ನಗದೀಕರಣದ ಹಣ ಪಾವತಿಗೆ ದೆಹಲಿಯ ರಾಜ್ಯ ಕೋ–ಆಪರೇಟಿವ್ ಬ್ಯಾಂಕಿನ ಎರಡು ಚೆಕ್‌ಗಳನ್ನು (₹ 63,125 ಮತ್ತು ₹ 46,760) ಕಳುಹಿಸಿದ್ದರು.

'ಸಹಕಾರಿ ಸಂಘದಲ್ಲಿ ಗುತ್ತಿಗೆ ಆಧಾರದಲ್ಲಿ ಶಿವಶಂಕರಪ್ಪ ಕೆಲಸ ಮಾಡಿದ್ದರೆ, ಸಹಕಾರಿ ಸಂಘದ ಕೆಲಸ 'ಸರ್ಕಾರಿ ಉದ್ಯೋಗ' ಎಂದು ಪರಿಗಣಿಸಲಾಗುವುದಿಲ್ಲ. ಅಲ್ಲದೆ, ಅವರ ಕೆಲಸ ತೃಪ್ತಿಕರ ಅಲ್ಲವೆಂದು ಗುತ್ತಿಗೆ ಅವಧಿಯನ್ನೂ ಮುಂದುವರಿಸಿಲ್ಲ. ಈ ಎಲ್ಲ ಕಾರಣಕ್ಕೆ ಸಂವಿಧಾನದ 316ರ ಸೆಕ್ಷನ್ 1ರ ಪ್ರಕಾರ ಅಫಿಶಿಯಲ್ ಕೆಟಗರಿಯಲ್ಲಿ ಕೆಪಿಎಸ್‌ಸಿ ಸದಸ್ಯರಾಗಿ ನೇಮಿಸಲು ಅವಕಾಶ ಇಲ್ಲ. ಕೇಂದ್ರ, ರಾಜ್ಯ ಸರ್ಕಾರದಲ್ಲಿ ಕಾಯಂ ನೌಕರ ಅಲ್ಲದ ವ್ಯಕ್ತಿಯನ್ನು ಈ ಕೆಟಗರಿಯಲ್ಲಿ ನೇಮಿಸಿರುವುದು ಕಾನೂನುಬಾಹಿರ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಅಧಿಕಾರಿಯೊಬ್ಬರು ಹೇಳಿದರು.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 121 | 8,007 | 5,523 |
| ಹಾರಂಗಿ | 2,859 | 2,855.49 | 4,220 | 4,470 |
| ಕಬಿನಿ | 2,284 | 2,282.10 | 4,419 | 700 |
| ಹೇಮಾವತಿ | 2,922 | 2,920.44 | 4,164 | 4,105 |
| ಲಿಂಗನಮಕ್ಕಿ | 1,819 | 1,811.85 | 9,977 | - |
| ಸೂಪಾ (ಮೀ) | 564 | 554.45 | 5,142 | 431 |
| ಮಾಣಿ | 594.36 | 584.72 | 1,500 | - |
| ತುಂಗಭದ್ರಾ | 1,633 | 1,632.21 | 36,679 | 21,431 |
| ಮಲಪ್ರಭಾ | 2,079.50 | 2,077 | 1,544 | 1,544 |
| ಘಟಪ್ರಭಾ | 2,175 | 2,173.40 | 3,500 | 1,587 |
| ಭದ್ರಾ | 186 | 184.60 | 8,327 | 8,929 |
| ಆಲಮಟ್ಟಿ (ಮೀ) | 519.60 | 519.22 | 39,559 | 22,511 |
| ನಾರಾಯಣಪುರ (ಮೀ) | 492.25 | 491.81 | 10,000 | - |

* ನೆಲಮಟ್ಟದಿಂದ

### ಧಾರವಾಡ ಪ್ರವೇಶಿಸದಂತೆ ಸೂಚಿಸಿದ 'ಸುಪ್ರೀಂ'

# ವಿನಯ್ ಕುಲಕರ್ಣಿಗೆ ಷರತ್ತುಬದ್ಧ ಜಾಮೀನು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಸಿಬಿಐನಿಂದ ಬಂಧನಕ್ಕೆ ಒಳಗಾಗಿದ್ದ ಮಾಜಿ ಸಚಿವ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ಷರತ್ತುಬದ್ಧ ಜಾಮೀನು ನೀಡಿದೆ.

ಧಾರವಾಡ ನಗರ ಪ್ರವೇಶಿಸಕೂಡದು ಎಂಬ ಷರತ್ತಿನೊಂದಿಗೆ ಜಾಮೀನು ಮಂಜೂರು ಮಾಡಿರುವ ನ್ಯಾಯಮೂರ್ತಿಗಳಾದ ಯು.ಯು. ಲಲಿತ್ ಹಾಗೂ ಅಜಯ್ ರಸ್ತೋಗಿ ನೇತೃತ್ವದ ಪೀಠ, ಸಿಬಿಐ ಅಧಿಕಾರಿಗಳ ವಿಚಾರಣೆಗೆ ಸಹಕರಿಸಬೇಕು. ಪ್ರಕರಣದ ತನಿಖಾ ಪ್ರಕ್ರಿಯೆಗೆ ಅಡ್ಡಿಪಡಿಸಕೂಡದು ಎಂಬ ಷರತ್ತು ವಿಧಿಸಿ ಆದೇಶ ಹೊರಡಿಸಿದೆ.



ವಿನಯ ಕುಲಕರ್ಣಿ

ಮೂರು ದಿನಗಳೊಳಗೆ ಆರೋಪಿಯನ್ನು ಅಧೀನ ನ್ಯಾಯಾಲಯ ಎದುರು ಹಾಜರುಪಡಿಸಬೇಕು ಎಂದೂ ಪೀಠ ಸೂಚಿಸಿದೆ.

ಜಾಮೀನಿಗೆ ಅಗತ್ಯವಿರುವ ಇತರ ಷರತ್ತುಗಳನ್ನು ವಿಧಿಸಿ ಆದೇಶ ಹೊರಡಿಸುವಂತೆಯೂ ಪೀಠ ಅಧೀನ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ.

ಪ್ರಕರಣದ ತನಿಖೆ ಆರಂಭಿಸಿದ್ದ ಧಾರವಾಡದ ಪೊಲೀಸರು ಮಾಡಿರುವ ಆರೋಪಗಳಿಗೂ, ಸಿಬಿಐ ಮಾಡಿರುವ ಆರೋಪಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಸಿಬಿಐನ ಆರೋಪಗಳಲ್ಲಿ ಹುರುಳಿಲ್ಲ ಎಂದು ವಿನಯ್ ಕುಲಕರ್ಣಿ ಪರ ಹಿರಿಯ ವಕೀಲ ಮುಕುಲ್ ರೋಹಟ್ಗಿ ವಾದ ಮಂಡಿಸಿದರು.

2016ರ ಜೂನ್ 15ರಂದು ಧಾರವಾಡದ ಸಪ್ತಾಪುರದಲ್ಲಿರುವ ಜಿಮ್ ಎದುರು ಯೋಗೀಶಗೌಡ ಕೊಲೆ ನಡೆದಿತ್ತು. 2019ರ ಸೆಪ್ಟೆಂಬರ್ 6ರಂದು ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಆದೇಶಿಸಿತ್ತು.

ಸಿಬಿಐ ತನಿಖೆಯನ್ನು ಅಮಾನತಿನಲ್ಲಿ ಇರಿಸಿ ರಾಜ್ಯ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ 2020ರ ಫೆಬ್ರುವರಿ 21ರಂದು ತಡೆ ನೀಡಿದ್ದರಿಂದ ತನಿಖೆ ಮುಂದುವರಿಸಿದ್ದ ಸಿಬಿಐ, 2020ರ ನವೆಂಬರ್ 5ರಂದು ವಿನಯ್ ಕುಲಕರ್ಣಿ ಅವರನ್ನು ಬಂಧಿಸಿತ್ತು.

### ಮೇಕೆದಾಟು: ಪರಿಶೀಲನಾ ಸಮಿತಿ ರದ್ದುಪಡಿಸಿದ್ದ ಎನ್‌ಜಿಟಿ ಆದೇಶ


# 'ಸುಪ್ರೀಂ'ಗೆ ತಮಿಳುನಾಡು ಮೇಲ್ಮನವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮೇಕೆದಾಟು ಯೋಜನಾ ಸ್ಥಳದ ಪರಿಶೀಲನೆಗಾಗಿ ಸಮಿತಿ ರಚಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಯ ದಕ್ಷಿಣ (ಚೆನ್ನೈ)ದ ಪೀಠ ನೀಡಿದ್ದ ಆದೇಶ ರದ್ದುಪಡಿಸಿದ್ದ ಪ್ರಧಾನ ಪೀಠದ ತೀರ್ಪನ್ನು ಪ್ರಶ್ನಿಸಿ ತಮಿಳುನಾಡು ಬುಧವಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಎನ್‌ಜಿಟಿಯ ದಕ್ಷಿಣ ಪೀಠ ನೀಡಿದ್ದ ಆದೇಶ ಪರಿಶೀಲನೆ ಕೋರಿ ಕರ್ನಾಟಕ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಜೂನ್ 17ರಂದು ಪೂರ್ಣಗೊಳಿಸಿದ್ದ ಪ್ರಧಾನ ಪೀಠ, ಜೂನ್ 18ರಂದು ತೀರ್ಪು ನೀಡಿತ್ತು.

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ಸಲ್ಲಿಸಿರುವ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಇನ್ನಷ್ಟೇ ಆರಂಭಿಸಬೇಕಿದೆ. ಈ ಸಂಬಂಧ ಅಗತ್ಯ ಪರಿಸರ ಅನುಮತಿ ಕೋರಿ ಕರ್ನಾಟಕ ಸಲ್ಲಿಸಿರುವ ಅರ್ಜಿಯೂ ಕೇಂದ್ರ ಸರ್ಕಾರದ ಎದುರು ಬಾಕಿ ಇದೆ. ಈ ಹಂತದಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿ, ವಿಚಾರಣೆ ನಡೆಸುವಂತಿಲ್ಲ ಎಂದು ತಿಳಿಸಿದ್ದ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಪ್ರಧಾನ ಪೀಠ, ಪ್ರಕರಣವನ್ನು ಇತ್ಯರ್ಥಪಡಿಸಿತ್ತು.



ಮೇಕೆದಾಟು ಪ್ರದೇಶ

ವನ್ಯಜೀವಿ ಅಭಯಾರಣ್ಯ ಹಾಗೂ ಮೀಸಲು ಅರಣ್ಯ ಒಳಗೊಂಡ ಪ್ರದೇಶದಲ್ಲಿ ಯೋಜನೆ ಆರಂಭಿಸಿದಲ್ಲಿ ಉಂಟಾಗುವ ಪರಿಸರ ಹಾನಿಯ ಪ್ರಮಾಣವನ್ನು ಅರಿಯಲು ನ್ಯಾಯಮಂಡಳಿ ವಿಫಲವಾಗಿದೆ ಎಂದು ತಮಿಳುನಾಡು ಅರ್ಜಿಯಲ್ಲಿ ತಿಳಿಸಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ಬಾಕಿ ಇರುವುದರಿಂದ ಈ ಪ್ರಕರಣದ ಕುರಿತು ಆದೇಶ ಹೊರಡಿಸುವುದು ಸರಿಯಲ್ಲ ಎಂದು ಎನ್‌ಜಿಟಿ ತಪ್ಪಾಗಿ ಅರ್ಥೈಸಿಕೊಂಡಿದೆ ಎಂದೂ ಅದು ಹೇಳಿದೆ.

ಎನ್‌ಜಿಟಿಯ ಈ ಆದೇಶದಿಂದಾಗಿ ಕರ್ನಾಟಕ ಸರ್ಕಾರ ಯಾವುದೇ ಅನುಮತಿ ಪಡೆಯದೆಯೇ ಮೀಸಲು ಅರಣ್ಯ ಪ್ರದೇಶದಲ್ಲಿ ಕಾಮಗಾರಿ ಆರಂಭಿಸಲು ಉತ್ತೇಜಿಸಿದಂತಾಗಿದೆ ಎಂದೂ ಅರ್ಜಿಯಲ್ಲಿ ಆರೋಪಿಸಲಾಗಿದೆ.

ಅಲ್ಲದೆ, ಎನ್‌ಜಿಟಿಯ ದಕ್ಷಿಣ ಪೀಠದ ಎದುರೇ ಈ ಕುರಿತು ಮೇಲ್ಮನವಿ ಸಲ್ಲಿಸುವಂತೆ ಸೂಚಿಸುವ ಬದಲಿಗೆ, ಕರ್ನಾಟಕದ ಪರಿಶೀಲನಾ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡಿದ್ದ ಪ್ರಧಾನ ಪೀಠ ಪ್ರಮಾದ ಎಸಗಿದೆ ಎಂದೂ ದೂರಲಾಗಿದೆ.

## ಅಹಮದಾಬಾದ್: ಅ. 2ರಂದು ಕುರುಬರ ಸಮಾವೇಶ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕುರುಬ ಸಮುದಾಯಕ್ಕೆ ಸೇರಿದವರು ದೇಶದಾದ್ಯಂತ ಹಂಚಿ ಹೋಗಿದ್ದು, ಎಲ್ಲರನ್ನೂ ಒಂದೇ ಹೆಸರಿನಲ್ಲಿ ಗುರುತಿಸುವ ಉದ್ದೇಶದೊಂದಿಗೆ ಅಕ್ಟೋಬರ್ 2ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಕುರುಬರ ಸಮಾವೇಶ ಏರ್ಪಡಿಸಲಾಗಿದೆ ಎಂದು ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥೆಯ ಸದಸ್ಯ, ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ ತಿಳಿಸಿದರು.

ಪತ್ರಿಕಾಗೋಷ್ಠಿಲ್ಲಿ ಬುಧವಾರ ಮಾತನಾಡಿ, ಕುರುಬ ಸಮುದಾಯವನ್ನು ಸಂಘಟಿಸುವ ನಿಟ್ಟಿನಲ್ಲಿ ಅದೇ ದಿನ ಸಂಸ್ಥೆಯ ಸಂಸ್ಥಾಪನಾ ದಿನವನ್ನೂ ಆಯೋಜಿಸಲಾಗಿದೆ ಎಂದರು.

'ಕುರುಬರು' ಎನ್ನುವುದು ಒಂದು ಜಾತಿಯಲ್ಲ. ಬದಲಿಗೆ, ಅದೊಂದು ಸಮುದಾಯ ಎಂಬ ಸತ್ಯ ಕುರುಬ ಜನಾಂಗಕ್ಕೆ ಅರ್ಥವಾಗಿದೆ. ದೇಶದಾದ್ಯಂತ ಧನಗರ್, ಕುರುಮನ್, ಗಡಾರಿಯಾ, ಪಾಲಕ್ಷತ್ರೀಯ, ಗದ್ದಿ, ದಿವಾಸಿ ಹಾಗೂ ಇತರ ಹೆಸರುಗಳಿಂದ ಗುರುತಿಸಿಕೊಂಡಿರುವ ಕುರುಬ ಸಮುದಾಯವನ್ನು ಒಂದೇ ಹೆಸರಿನಡಿ ತರಲು ಪ್ರಯತ್ನ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು.

ತಮಿಳುನಾಡಿನಲ್ಲಿ ಕುರುಬರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಯತ್ನಗಳು ನಡೆದಿವೆ. ರಾಜಸ್ತಾನದಲ್ಲಿ ವಿಭಿನ್ನ ಹೆಸರಿನಿಂದ ಗುರುತಿಸಿಕೊಂಡಿರುವ ಕುರುಬ ಸಮುದಾಯದವರು ಈಗಾಗಲೇ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಕರ್ನಾಟಕದಲ್ಲಿ ಜೇನುಕುರುಬರು, ಕಾಡುಕುರುಬರು, ಗೊಂಡಾ ಮತ್ತು ರಾಜಗೊಂಡಾ ಎಂಬ ಹೆಸರಿನಲ್ಲಿ ಗುರುತಿಸಿಕೊಂಡಿರುವ ಕುರುಬರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆ. ಎಲ್ಲ ಕುರುಬರನ್ನೂ ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಲೂ ನಿರ್ಧರಿಸಲಾಗಿದೆ ಎಂದು ಸಂಸ್ಥೆಯ ಸದಸ್ಯ ಎಚ್.ಎಂ. ರೇವಣ್ಣ ವಿವರಿಸಿದರು.

ಕಾಡಿನ ನಡುವೆ ನದಿಯಷ್ಟು ಅಗಲಕ್ಕೆ ಬಾಯ್ತೆರೆದ ಭೂಮಿ; ಗ್ರಾಮದ ಜನರಲ್ಲಿ ಹೆಚ್ಚಿದ ಆತಂಕ

# ಕೊಂಕಿಕೋಟೆ ದಟ್ಟಾರಣ್ಯದಲ್ಲಿ ಭೂಕುಸಿತ

• ಗಣಪತಿ ಹೆಗಡೆ

ಶಿರಸಿ: ಜು.22, 23 ರಂದು ಸುರಿದ ವರ್ಷಧಾರೆ ತಾಲ್ಲೂಕಿನ ಕೊಂಕಿಕೋಟೆ ಸಮೀಪದ ದಟ್ಟ ಅಡವಿಯಲ್ಲಿ ಭಾರಿ ಪ್ರಮಾಣದ ಭೂಕುಸಿತಕ್ಕೆ ಕಾರಣವಾಗಿದೆ.

ಹುಲೇಕಲ್ ಅರಣ್ಯ ವಲಯ ವ್ಯಾಪ್ತಿಗೊಳಪಡುವ ಈ ಕಾಡಿನ ನಡುವೆ ಚಿಕ್ಕ ಝರಿಯ ಅಕ್ಕಪಕ್ಕ ಸುಮಾರು 100 ಮೀಟರ್ ನಷ್ಟು ಅಗಲಕ್ಕೆ ಭೂಮಿ ಬಾಯ್ತೆರೆದುಕೊಂಡಿದೆ. ಒಂದು ಕಿ.ಮೀ.ಗೂ ಹೆಚ್ಚು ಉದ್ದದವರೆಗೆ ಮಣ್ಣು ಕೊಚ್ಚಿಕೊಂಡು ಹೋಗಿದೆ. ಇದು ಐದು ದಿನಗಳ ಹಿಂದೆ ಸ್ಥಳಕ್ಕೆ ಭೇಟಿ ನೀಡಿದ್ದ ಗ್ರಾಮಸ್ಥರ ಗಮನಕ್ಕೆ ಬಂದಿದೆ.

ಕಾಡಿಗೆ ಹತ್ತಿರದ ಗದ್ದೆಹಳ್ಳಿ, ಬಾಳಗಿಮನೆ, ಸಮ್ರಳ್ಳಿ, ಕೊಂಕಿಕೋಟೆ ಗ್ರಾಮದ ಜನರಲ್ಲಿ ಆತಂಕ ಸೃಷ್ಟಿಸಿದೆ.

> ಕಾಡು ಹೆಚ್ಚಿನ ಪ್ರಮಾಣದ ನೀರು ಇಂಗಿಸಿಕೊಳ್ಳುತ್ತದೆ. ಸತತ ಇಂಗುವಿಕೆಯಿಂದ ನೆಲದ ತಳ ಪದರ ಸಡಿಲಗೊಂಡು ಕುಸಿತವಾಗಿರುವ ಸಾಧ್ಯತೆಯೂ ಇರುತ್ತದೆ.
> **ಶಿವಾನಂದ ಕಳವೆ,** ಪರಿಸರ ಬರಹಗಾರ

‘ಒಂದೆರಡು ಅಡಿಯಷ್ಟು ಅಗಲದ ಹಳ್ಳ ಕಾಡಿನ ನಡುವೆ ಹರಿದಿತ್ತು. ಈಗ ಅದು ನದಿಯ ಗಾತ್ರಕ್ಕೆ ಹಿಗ್ಗಿದೆ. ತೇಗ, ಸಾಗವಾನಿ ಸೇರಿ ನೂರಾರು ದೊಡ್ಡಗಾತ್ರದ ಮರಗಳು ಬುಡಸಮೇತ ಬಿದ್ದಿರುವುದು ಕುಸಿತದ ಭೀಕರತೆ ತೋರಿಸುತ್ತದೆ. ಬೆಳಕು ಕಾಣದ ದಟ್ಟ ಕಾಡಿನಲ್ಲಿ ಎಕರೆಗಟ್ಟಲೆ ಪ್ರದೇಶ ಬಯಲಾಗಿ ಮಾರ್ಪಟ್ಟಿದೆ’ ಎನ್ನುತ್ತಾರೆ ಗದ್ದೆಹಳ್ಳಿಯ ಲಕ್ಷ್ಮೀಕಾಂತ ಹೆಗಡೆ.

ಪ್ರಜಾವಾಣಿ ವಿಶೇಷ

## ಹಸಿರಿನ ನಡುವೆ ಕೆಸರು

ಯಲ್ಲಾಪುರ ತಾಲ್ಲೂಕಿನ ಜೇನುಕಲ್ಲು ಗುಡ್ಡದಿಂದ ಕೆಳಭಾಗದಲ್ಲಿರುವ ಹಚ್ಚಹಸಿರಿನ ಕೊಂಕಿಕೋಟೆ ಕಾಡಿನ ಪ್ರದೇಶವನ್ನು ಪ್ರವಾಸಿಗರು ಕಣ್ತುಂಬಿಕೊಳ್ಳುತ್ತಾರೆ. ಈಗ ಭೂಕುಸಿತ ಉಂಟಾಗಿರುವ ಜಾಗವೂ ಅಲ್ಲಿಂದ ಕಾಣುತ್ತಿದೆ. ಹಚ್ಚ ಹಸಿರಿನ ಅರಣ್ಯದ ಮಧ್ಯೆ ಕೆಂಪು ಬಣ್ಣದ ಮಣ್ಣಿನ ರಾಶಿ ಕಾಣಸಿಗುತ್ತಿದೆ.

‘ಇಲ್ಲಿಂದ ಎರಡು ಕಿ.ಮೀ ದೂರದ ಒಂದು ಭಾಗದಲ್ಲಿ ಗಂಗಾವಳಿ ನದಿ ಹರಿಯುತ್ತಿದೆ. ಇನ್ನೊಂದು ಭಾಗದಲ್ಲಿ ಅಲ್ಲಲ್ಲಿ ಮನೆಗಳಿರುವ ನಾಲ್ಕಾರು ಗ್ರಾಮಗಳಿವೆ. ಗಣಿಗಾರಿಕೆಯಂತಹ ಪರಿಸರಕ್ಕೆ ಧಕ್ಕೆ ತರಬಹುದಾದ ಚಟುವಟಿಕೆಯಿಂದ ದೂರವಿದ್ದ ಪ್ರದೇಶದಲ್ಲಿ ಕುಸಿತ ಸಂಭವಿಸಿರುವುದು ಅಚ್ಚರಿ ಮೂಡಿಸುತ್ತದೆ. ಘಟನೆ ಮರುಕಳಿಸಿದರೆ ಗ್ರಾಮದ ಭೌಗೋಳಿಕ ಸನ್ನಿವೇಶವೇ ಬದಲಾಗಬಹುದು’ ಎಂದು ಆತಂಕ ವ್ಯಕ್ತಪಡಿಸಿದರು.

‘ದುರ್ಗಮ ದಟ್ಟಾರಣ್ಯದಲ್ಲಿ ಕುಸಿತ ಉಂಟಾಗಿದ್ದು ಗಮನಕ್ಕೆ ಬಂದಿದೆ. ಸ್ಥಳಕ್ಕೆ ಭೇಟಿ ನೀಡಿ ಹಾನಿ ಉಂಟಾಗಿರುವುದನ್ನು ಪರಿಶೀಲಿಸಿದ ಬಳಿಕ ಮುಂದಿನ ಕ್ರಮದ ಬಗ್ಗೆ ನಿರ್ಣಯಿಸಲಾಗುವುದು’ ಎಂದು ಹುಲೇಕಲ್ ಆರ್.ಎಫ್.ಒ. ಮಂಜುನಾಥ ಹೆಬ್ಬಾರ ಪ್ರತಿಕ್ರಿಯಿಸಿದ್ದಾರೆ.



ಶಿರಸಿ ತಾಲ್ಲೂಕಿನ ಕೊಂಕಿಕೋಟೆ ಅರಣ್ಯ ಪ್ರದೇಶದಲ್ಲಿ ಭೂಕುಸಿತ ಸಂಭವಿಸಿರುವುದು.

## ಸುದ್ದಿ 2 ನಿಮಿಷ

### ಬಕ್ರೀದ್ ವೇಳೆ 6 ಸಾವಿರ ಹಸುಗಳ ರಕ್ಷಣೆ: ಸಚಿವ ಪ್ರಭು ಚವಾಣ್

ಮೈಸೂರು: ‘ಈ ಬಾರಿಯ ಬಕ್ರೀದ್ ಅವಧಿಯಲ್ಲಿ ರಾಜ್ಯದಾದ್ಯಂತ ಸುಮಾರು ಆರು ಸಾವಿರ ಹಸುಗಳನ್ನು ರಕ್ಷಿಸಲಾಗಿದೆ’ ಎಂದು ಪಶುಸಂಗೋಪನಾ ಸಚಿವ ಪ್ರಭು ಚವಾಣ್ ತಿಳಿಸಿದರು.

ನಗರದ ಸುತ್ತೂರು ಶಾಖಾ ಮಠಕ್ಕೆ ಬುಧವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ‘ಗೋಹತ್ಯೆ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ. ಬಕ್ರೀದ್ ಅವಧಿಯಲ್ಲಿ ಗೋಹತ್ಯೆ ತಡೆಯುವಂತೆ ಎಲ್ಲ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು. ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರ ಜತೆ, ಇಲಾಖೆಯ ಪಶು ವೈದ್ಯರನ್ನೂ ನಿಯೋಜಿಸಿದ್ದರಿಂದ ಸಾವಿರಾರು ಹಸುಗಳ ರಕ್ಷಣೆ ಆಗಿದೆ. ಗೋಮಾತೆ ಕಸಾಯಿಖಾನೆಗೆ ಸೇರಬಾರದು ಎಂಬುದೇ ಪ್ರಮುಖ ಉದ್ದೇಶ’ ಎಂದರು.



‘ಪ್ರಾಣಿ ಕಲ್ಯಾಣ ಸಹಾಯವಾಣಿಯನ್ನು ದೇಶದಲ್ಲೇ ಮೊದಲ ಬಾರಿ ಜಾರಿಗೆ ತರಲಾಗಿದೆ. ಈ ಸಹಾಯವಾಣಿಗೆ ಒಂದು ತಿಂಗಳಲ್ಲಿ 10 ಸಾವಿರ ಕರೆಗಳು ಬಂದಿದ್ದು, ಅವುಗಳಲ್ಲಿ ಶೇ 85ರಷ್ಟು ಸಮಸ್ಯೆಗಳನ್ನು ಬಗೆಹರಿಸಿದ್ದೇವೆ’ ಎಂದು ಹೇಳಿದರು.

### ಸೂಪರಿಂಟೆಂಡೆಂಟ್ ನಿವಾಸದ ಮೇಲೆ ಎಸಿಬಿ ದಾಳಿ

ಬೆಳಗಾವಿ: ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್ ಕೃಷ್ಣಕುಮಾರ್ ನಿವಾಸದ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬೆಂಗಳೂರಿನ ಅಧಿಕಾರಿಗಳ ತಂಡ ಬುಧವಾರ ದಾಳಿ ನಡೆಸಿ, ಮಾಹಿತಿ ಕಲೆ ಹಾಕಿತು.

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ದಿ.ಜಯಲಲಿತಾ ಅವರ ಆಪ್ತೆ ಶಶಿಕಲಾ ನಟರಾಜನ್ ಅವರಿಗೆ ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ರಾಜಾತಿಥ್ಯ ನೀಡಿದ್ದ ಆರೋಪದ ಹಿನ್ನೆಲೆಯಲ್ಲಿ ದಾಳಿ ನಡೆದಿದೆ ಎಂದು ತಿಳಿದುಬಂದಿದೆ.

ಕಾರಾಗೃಹದ ಪಕ್ಕದಲ್ಲಿರುವ ಸರ್ಕಾರಿ ನಿವಾಸದ ಮೇಲೆ ಐವರು ಅಧಿಕಾರಿಗಳು ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ. ಅವರಿಗೆ ಇಲ್ಲಿನ ಎಸಿಬಿ ಅಧಿಕಾರಿಗಳು ನೆರವು ನೀಡಿದರು.

ಕೃಷ್ಣಕುಮಾರ್ ಅವರು ಇಲ್ಲಿಗೆ ಬರುವುದಕ್ಕೆ ಮುನ್ನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಕಾರ್ಯನಿರ್ವಹಿಸಿದ್ದರು. ಎಸಿಬಿಯವರು ಅವರನ್ನು ವಿಚಾರಣೆ ನಡೆಸಿ ಮಾಹಿತಿ ಕಲೆ ಹಾಕಿ ತೆರಳಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.


## ಶಾಸಕರ ವಿರುದ್ಧದ ಪ್ರಕರಣ ವಾಪಸ್: ಆದೇಶ ಮಂಡನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಮತ್ತು ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು 2020ರ ಸೆಪ್ಟೆಂಬರ್ 16ರ ಬಳಿಕ ಹೊರಡಿಸಿರುವ ಆದೇಶಗಳನ್ನು ಮಂಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಹೈಕೋರ್ಟ್ ಅನುಮತಿ ಇಲ್ಲದೆ ಯಾವುದೇ ಶಾಸಕ ಅಥವಾ ಸಂಸದರ ವಿರುದ್ಧದ ಪ್ರಕರಣ ವಾಪಸ್ ಪಡೆಯಬಾರದು ಎಂಬ ಸುಪ್ರೀಂ ಕೋರ್ಟ್ ಆದೇಶ ಗಮನದಲ್ಲಿಟ್ಟುಕೊಂಡು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ನಿರ್ದೇಶನ ನೀಡಿತು.

ಚುನಾಯಿತ ಪ್ರತಿನಿಧಿಗಳ ವಿರುದ್ಧದ ಪ್ರಕರಣ ಸೇರಿ 61 ಪ್ರಕರಣಗಳ ವಿಚಾರಣೆಯನ್ನು ಸರ್ಕಾರ 2020 ಆಗಸ್ಟ್ 31ರಂದು ಹಿಂದಕ್ಕೆ ಪಡೆದಿದ್ದ



ಆದೇಶವನ್ನು ಪ್ರಶ್ನಿಸಿ ಪೀಪಲ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಲ್ಲಿಸಿದ್ದ ಅರ್ಜಿ ಪರಿಶೀಲನೆ ನಡೆಸಿದ ಪೀಠ, ‘ಹಾಲಿ, ಮಾಜಿ ಶಾಸಕರ ಅಥವಾ ಸಂಸದರ ವಿರುದ್ಧದ ಪ್ರಕರಣ ವಾಪಸ್ ಪಡೆಯುವಾಗ ಸುಪ್ರೀಂ ಕೋರ್ಟ್ ಆದೇಶವನ್ನು ಸರ್ಕಾರ ಕಟ್ಟುನಿಟ್ಟಾಗಿ ಪಾಲಿಸಬೇಕು’ ಎಂದು ತಿಳಿಸಿತು.

ಜನಪ್ರತಿನಿಧಿಗಳ ವಿರುದ್ಧದ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಆದೇಶ ಪಾಲನೆ ಬಗ್ಗೆ ಮೇಲ್ವಿಚಾರಣೆ ನಡೆಸಲು ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನೂ ಪೀಠ ನಡೆಸುತ್ತಿದೆ. ಬಾಕಿ ಪ್ರಕರಣಗಳ ವಿಚಾರಣೆಗೆ ವಿಶೇಷ ಪೀಠವನ್ನೂ ರಚಿಸಿದೆ.


ಸಿಐಐ ವಾರ್ಷಿಕ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

## ರಾಜ್ಯದಲ್ಲಿ ಉದ್ಯಮ ವಿಸ್ತರಣೆ ನಮ್ಮ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಾದ್ಯಂತ ಉದ್ಯಮ ಸ್ಥಾಪನೆ ಮತ್ತು ವಿಸ್ತರಣೆ ಸರ್ಕಾರದ ಗುರಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ವಾರ್ಷಿಕ ಸಭೆ "ಇಂಡಿಯಾ @75"ನಲ್ಲಿ ಗೃಹ ಕಚೇರಿ ಕೃಷ್ಣಾದಿಂದ ವರ್ಚುವಲ್ ಆಗಿ ಭಾಗವಹಿಸಿ ಮಾತನಾಡಿದ ಅವರು, ‘ಕರ್ನಾಟಕ ಕೈಗಾರಿಕಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ. ಸ್ವಾತಂತ್ರ್ಯಾನಂತರದಲ್ಲಿ ಕೌಶಲ, ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ವಿದೇಶಿ ಸಹಯೋಗಕ್ಕೆ ಅತ್ಯಂತ ಭದ್ರ ಬುನಾದಿ ಹಾಕಲಾಗಿದೆ.



ಬಸವರಾಜ ಬೊಮ್ಮಾಯಿ

ಇಡೀ ರಾಜ್ಯದಲ್ಲಿ ಉದ್ಯಮಶೀಲತೆ ವಿಸ್ತರಿಸುವುದು ನಮ್ಮ ಆದ್ಯತೆ’ ಎಂದರು.

‘ರಾಜ್ಯವನ್ನು ಬೆಳವಣಿಗೆಯತ್ತ ಕೊಂಡೊಯ್ಯಲು ಸಂಪನ್ಮೂಲಗಳನ್ನು ಶಕ್ತಿಯನ್ನಾಗಿ ಪರಿವರ್ತಿಸಲಾಗುವುದು. ವ್ಯವಸ್ಥೆಗಿಂತ ರಾಜ್ಯದ ಜನರು ಶ್ರೀಮಂತವಾಗಿರಬೇಕು ಎನ್ನುವುದು ನನ್ನ ಆಶಯ. ಮಾನವ ಸಂಪನ್ಮೂಲವನ್ನು ಸಶಕ್ತಗೊಳಿಸುವ ಜೊತೆಗೆ, ಪ್ರಾದೇಶಿಕ ಅಸಮಾನತೆಯ ನಿವಾರಣೆಗೂ ಒತ್ತು ನೀಡಲಾಗುವುದು’ ಎಂದು ಬೊಮ್ಮಾಯಿ ತಿಳಿಸಿದರು.

‘ರಫ್ತು ಕ್ಷೇತ್ರದಲ್ಲಿ ಇಡೀ ದೇಶದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿರಬೇಕು. ಅದಕ್ಕಾಗಿ ಉತ್ತಮ ಗುಣಮಟ್ಟದ ರಫ್ತು ಕೇಂದ್ರಿತ ಕಂಪನಿಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಮುಂದಾಗಬೇಕು. ನೂತನ ಕೈಗಾರಿಕಾ ನೀತಿ, ಕಾಯ್ದೆಗಳನ್ನು ಸರಳೀಕರಿಸುವ ಮೂಲಕ ರಾಜ್ಯದಲ್ಲಿ ಹೂಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಕೋವಿಡ್ ಹೊರತಾಗಿಯೂ ರಾಜ್ಯದ ಆರ್ಥಿಕ ಸ್ಥಿತಿ ಸ್ಥಿರವಾಗಿದೆ’ ಎಂದ ಅವರು, ಕೈಗಾರಿಕೆ ಮತ್ತು ಸೇವಾ ವಲಯದಲ್ಲಿ ಹೂಡಿಕೆ ಮಾಡುವಂತೆ ವಿವಿಧ ಕಂಪನಿಗಳಿಗೆ ಆಹ್ವಾನ ನೀಡಿದರು.

ಸಿಐಐ ನಿರ್ದೇಶಕ ಚಂದ್ರಜಿತ್ ಬ್ಯಾನರ್ಜಿ, ಉದ್ಯಮಿಗಳಾದ ಅಜೀಂ ಪ್ರೇಮ್ ಜಿ, ಕಿರಣ್ ಮಜುಂದಾರ್ ಷಾ ಇದ್ದರು.

ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್‌ನಿಂದ ಅಧ್ಯಯನ

## ಲಸಿಕೆ ಮಿಶ್ರಣದ ಅಧ್ಯಯನಕ್ಕೆ ಡಿಸಿಜಿಐ ಅಸ್ತು

ನವದೆಹಲಿ(ಪಿಟಿಐ): ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆ ಡೋಸ್‌ಗಳ ಮಿಶ್ರಣ ಕುರಿತ ಅಧ್ಯಯನಕ್ಕೆ ಭಾರತೀಯ ಪ್ರಧಾನ ಔಷಧ ನಿಯಂತ್ರಕರ (ಡಿಸಿಜಿಐ) ಅನುಮೋದನೆ ದೊರೆತಿದೆ.

‘ತಮಿಳುನಾಡಿನ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್ (ಸಿಎಂಸಿ) ಈ ಬಗ್ಗೆ ಅಧ್ಯಯನ ನಡೆಸಲಿದೆ.

ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣಾ ಸಂಸ್ಥೆಯ(ಸಿಡಿಎಸ್‌ಸಿಒ) ತಜ್ಞರ ಸಮಿತಿ ಜುಲೈ 29ರಂದು ಲಸಿಕೆಗಳ ಮಿಶ್ರಣದ ಕುರಿತು ಅಧ್ಯಯನ ನಡೆಸಲು ಅನುಮತಿ ನೀಡುವಂತೆ ಶಿಫಾರಸು ಮಾಡಿತ್ತು. 300 ಸ್ವಯಂ ಸೇವಕರ ಮೇಲೆ ಈ ಪ್ರಯೋಗ ನಡೆಯಲಿದೆ.

‘ಒಬ್ಬ ವ್ಯಕ್ತಿಗೆ ಎರಡು ವಿಭಿನ್ನ ಲಸಿಕೆಯ ಒಂದೊಂದು ಡೋಸ್ ನೀಡುವ ಕಾರ್ಯಸಾಧ್ಯತೆ ಮತ್ತು ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

### ಲಸಿಕೆ ಮಿಶ್ರಣ ಪ್ರಯೋಗ: ಚೀನಾ ಒಪ್ಪಿಗೆ

ಬೀಜಿಂಗ್: ಲಸಿಕೆ ಮಿಶ್ರಣ ಕುರಿತ ಪ್ರಯೋಗಕ್ಕೆ ಚೀನಾದ ಔಷಧ ನಿಯಂತ್ರಣ ಪ್ರಾಧಿಕಾರ ಬುಧವಾರ ಅನುಮೋದನೆ ನೀಡಿದೆ.

ಚೀನಾದ ‘ಸಿನೋವ್ಯಾಕ್’ ಮತ್ತು ಅಮೆರಿಕದ ಫಾರ್ಮಾಸ್ಯೂಟಿಕಲ್ ಕಂಪನಿ ಅಭಿವೃದ್ಧಿಪಡಿಸಿರುವ ‘ಇನೊವಿಯೊ’ ಲಸಿಕೆಯ ಮಿಶ್ರಣಗಳ ಸಾಮರ್ಥ್ಯದ ಬಗ್ಗೆ ಪ್ರಯೋಗ ನಡೆಯಲಿದೆ.

ಕ್ಲಿನಿಕಲ್ ಪ್ರಯೋಗಕ್ಕೆ ಮುನ್ನ ನಡೆದ ಪ್ರಾಥಮಿಕ ಅಧ್ಯಯನ ಪ್ರಕಾರ ಎರಡು ವಿಭಿನ್ನ ಲಸಿಕೆಗಳನ್ನು ನೀಡುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚಾಗಿರುವುದು ಕಂಡು ಬಂದಿದೆ. ಈ ಬಗ್ಗೆ ಸಮಗ್ರವಾದ ಅಧ್ಯಯನ ಅಗತ್ಯವಿದೆ ಎಂದು 'ಇವೊನಿಯೊ' ಲಸಿಕೆ ತಯಾರಿಕೆಯಲ್ಲಿ ಚೀನಾದ ಜತೆ ಸಹಭಾಗಿತ್ವ ಹೊಂದಿರುವ ಅಡ್ವಾಕ್ಸಿನ್ ಬಯೋಫಾರ್ಮಾಸ್ಯೂಟಿಕಲ್ ಸುಝೋಯು ಅಧ್ಯಕ್ಷ ವಾಂಗ್ ಬಿನ್ ತಿಳಿಸಿದ್ದಾರೆ.

ಎರಡು ವಿಭಿನ್ನ ಲಸಿಕೆಗಳ ಬಳಕೆ ಸುರಕ್ಷಿತ ಅಥವಾ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ ಎನ್ನುವ ಬಗ್ಗೆ ಹೆಚ್ಚಿನ ಅಧ್ಯಯನ, ಪ್ರಯೋಗಗಳು ನಡೆಯಬೇಕಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಪ್ರತ್ಯೇಕವಾಗಿ ಇತ್ತೀಚೆಗೆ 98 ಮಂದಿಯ





ಮೇಲೆ ಅಧ್ಯಯನ ನಡೆಸಿತ್ತು. ಇವರಲ್ಲಿ ಉತ್ತರ ಪ್ರದೇಶದ ಸಿದ್ಧಾರ್ಥನಗರದ 18 ಜನರು ಸೇರಿದ್ದರು. ಈ 18 ಮಂದಿಗೆ ಅಚಾತುರ್ಯದ ಕಾರಣ ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್‌ನ ಒಂದೊಂದು ಡೋಸ್ ನೀಡಲಾಗಿತ್ತು. ಕೋವಿಡ್–19ನ ಎರಡು ಲಸಿಕೆಗಳನ್ನು ಮಿಶ್ರಣ ಮಾಡುವುದರಿಂದ ಉತ್ತಮ ರೋಗನಿರೋಧಕ ಶಕ್ತಿ ಹೆಚ್ಚಾಗಿತ್ತು. ಯಾವುದೇ ರೀತಿ ಅಡ್ಡಪರಿಣಾಮಗಳು ಬೀರಿರಲಿಲ್ಲ.

## ಚಿತ್ರಮಂದಿರ: ಶೇ 100ರಷ್ಟು ಪ್ರೇಕ್ಷಕರಿಗೆ ಸದ್ಯಕ್ಕಿಲ್ಲ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಲನಚಿತ್ರ ಮಂದಿರಗಳಲ್ಲಿ ತಕ್ಷಣಕ್ಕೆ ಶೇ 100 ರಷ್ಟು ಪ್ರೇಕ್ಷಕರಿಗೆ ಅವಕಾಶ ನೀಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈಗ ಶೇ 50 ರಷ್ಟು ಪ್ರೇಕ್ಷಕರಿಗೆ ಸಿನಿಮಾ ವೀಕ್ಷಣೆಗೆ ಅವಕಾಶ ನೀಡಲಾಗಿದ್ದು, ಅದನ್ನು ಮುಂದುವರಿಸಲಾಗುವುದು. ಶೇ 100 ರಷ್ಟು ಅವಕಾಶ ನೀಡಬೇಕೆಂಬ ಬೇಡಿಕೆಯ ಬಗ್ಗೆ ತಜ್ಞರ ಸಮಿತಿ ನಿರ್ಧರಿಸಬೇಕಾಗುತ್ತದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಪ್ರತಿನಿಧಿಗಳು ತಮ್ಮ ಭೇಟಿಯ ವೇಳೆ ಶೇ 100 ರಷ್ಟು ಪ್ರೇಕ್ಷಕರಿಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದ್ದರು.

ಚಲನಚಿತ್ರ ಚಿತ್ರೀಕರಣ ವೇಳೆ ಅವಘಡಗಳನ್ನು ತಡೆಗಟ್ಟಲು ಕಟ್ಟುನಿಟ್ಟಾದ ಹೊಸ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು ಎಂದೂ ಬೊಮ್ಮಾಯಿ ತಿಳಿಸಿದರು.

2011 ರಲ್ಲಿ ಈ ಸಂಬಂಧ ಕಾನೂನು ಮಾಡಲಾಗಿತ್ತು. ಅದರ ಪಾಲನೆ ಸರಿಯಾಗಿ ಆಗುತ್ತಿಲ್ಲ. ಅದನ್ನು ಪಾಲಿಸಲು ಇನ್ನಷ್ಟು ಬಿಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದೂ ಅವರು ಹೇಳಿದರು.



ಭೂಕುಸಿತದ ಅವಶೇಷಗಳ ಅಡಿ ಸಿಲುಕಿ ನುಜ್ಜುಗುಜ್ಜಾಗಿರುವ ಕಾರು

ಪಿಟಿಐ ಚಿತ್ರ

## ಭೂಕುಸಿತ: 10 ಸಾವು, 30 ಜನ ನಾಪತ್ತೆ

ಒಂದನೇ ಪುಟದಿಂದ...

ರಾತ್ರಿ 8ರ ವೇಳೆಗೆ 10 ಜನರ ಮೃತದೇಹಗಳನ್ನು ಅವಶೇಷಗಳ ಅಡಿಯಿಂದ ಹೊರಗೆ ತೆಗೆಯಲಾಗಿತ್ತು. 13 ಜನರನ್ನು ರಕ್ಷಿಸಲಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಣ್ಣಿನಡಿ ಸಿಲುಕಿರುವವರನ್ನು ರಕ್ಷಿಸಲು ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಐಟಿಬಿಪಿ ಮಾಹಿತಿ ನೀಡಿದೆ.

ರಕ್ಷಣಾ ಕಾರ್ಯಾಚರಣೆಗೆ ರಾಷ್ಟ್ರೀಯ ವಿಕೋಪ ನಿರ್ವಹಣಾ ಪಡೆಯನ್ನು ಕರೆಯಲಾಗಿದೆ. ರಕ್ಷಣಾ ಕಾರ್ಯಾಚರಣೆ ರಾತ್ರಿಯಿಡೀ ನಡೆಯುವ ಸಾಧ್ಯತೆ ಇದೆ ಎಂದು ಮುಖ್ಯಮಂತ್ರಿ ಜೈ ರಾಮ್ ಠಾಕೂರ್ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕರೆ ಮಾಡಿ ಜೈ ರಾಮ್ ಅವರ ಜತೆ ಮಾತುಕತೆ ನಡೆಸಿದ್ದಾರೆ. ಅಗತ್ಯ ನೆರವಿನ ಭರವಸೆ ನೀಡಿದ್ದಾರೆ.

ಕಿನ್ನೌರ್ ಜಿಲ್ಲೆಯ ಮತ್ತೊಂದೆಡೆ ಬೆಟ್ಟದಿಂದ ಉರುಳಿಬಂದ ಭಾರಿ ಗಾತ್ರದ ಬಂಡೆಗಳಿಗೆ ಸಿಲುಕಿ ಒಂಬತ್ತು ಪ್ರವಾಸಿಗರು ಇತ್ತೀಚೆಗೆ ಮೃತಪಟ್ಟಿದ್ದರು. ಹಲವು ಕಟ್ಟಡಗಳು ಮತ್ತು ಒಂದು ಸೇತುವೆ ಧ್ವಂಸವಾಗಿತ್ತು. ಈ ಮಳೆಗಾಲದಲ್ಲಿ ಕಿನ್ನೌರ್‌ನ ಹಲವೆಡೆ ಭೂಕುಸಿತ ಸಂಭವಿಸುತ್ತಲೇ ಇದೆ.

## ಕೋವಿಡ್: 10 ದಿನಗಳಲ್ಲಿ ಗರಿಷ್ಠ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,826 ಮಂದಿ ಕೊರೊನಾ ಸೋಂಕಿತರಾಗಿರುವುದು ಬುಧವಾರ ದೃಢಪಟ್ಟಿದೆ. ಕಳೆದ 10 ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.22 ಲಕ್ಷ ದಾಟಿದೆ. ಒಂದು ದಿನದಲ್ಲಿ 1.67 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.09ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ರಾಜ್ಯದ 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಗದಗ ಹಾಗೂ ಬೀದರ್‌ನಲ್ಲಿ ಹೊಸದಾಗಿ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ದಕ್ಷಿಣ ಕನ್ನಡದಲ್ಲಿ 422, ಮೈಸೂರಿನಲ್ಲಿ 118 ಹಾಗೂ ಕೊಡಗಿನಲ್ಲಿ 71 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 377, ಹಾಸನದಲ್ಲಿ 175 ಹಾಗೂ ಉಡುಪಿಯಲ್ಲಿ 130 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ.

ಕೋವಿಡ್ ಪೀಡಿತರಲ್ಲಿ 33 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 13 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 5, ಮೈಸೂರು, ಕೋಲಾರ, ಹಾಸನ ಹಾಗೂ ಬೆಳಗಾವಿಯಲ್ಲಿ ತಲಾ 3, ಉತ್ತರ ಕನ್ನಡ, ಮಂಡ್ಯ, ಕೊಡಗು ಹಾಗೂ ಚಿತ್ರದುರ್ಗದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಶಿವಮೊಗ್ಗ ಸೇರಿದಂತೆ ಮೂರು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.80 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,881ಕ್ಕೆ ಏರಿಕೆಯಾಗಿದೆ. ಕೊರೊನಾ ಸೋಂಕಿತರಲ್ಲಿ 1,618 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.63 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 22,851ಕ್ಕೆ ಇಳಿಕೆಯಾಗಿದೆ.

### ರಾಜ್ಯ ಕೋವಿಡ್ ಅಂಕಿ–ಅಂಶ

**29,22,875** ▲ ಒಟ್ಟು ಸೋಂಕಿತರು (29,21,049 ನಿನ್ನೆಯ ವಿವರ)

**22,851** ▲ ಸಕ್ರಿಯ ಪ್ರಕರಣಗಳು

**28,63,117** ▲ ಗುಣಮುಖರಾದವರು

**36,881** ಒಟ್ಟು ಸಾವು ▲

| ದಿನದ ಏರಿಕೆ | | |
|---|---|---|
| ಹೊಸ ಪ್ರಕರಣ | 1,826 | ▲ |
| ಗುಣಮುಖ | 1,618 | ▼ |
| ಸಾವು | 33 | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

## ಚಿನ್ನ ಕಳ್ಳಸಾಗಣೆ ಪ್ರಕರಣ: ತನಿಖಾ ಆಯೋಗಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಕೊಚ್ಚಿ/ ತಿರುವನಂತಪುರ: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಸಿಲುಕಿಸಲು ಜಾರಿ ನಿರ್ದೇಶನಾಲಯ (ಇಡಿ) ಪ್ರಯತ್ನಿಸುತ್ತಿದೆ ಎಂದು ಆರೋಪಿಸಿ, ಈ ಪ್ರಕರಣ ಕುರಿತ ನ್ಯಾಯಾಂಗ ತನಿಖೆಗೆ ಕೇರಳ ಸರ್ಕಾರ ರಚಿಸಿದ್ದ ತನಿಖಾ ಆಯೋಗಕ್ಕೆ ಹೈಕೋರ್ಟ್ ಬುಧವಾರ ತಡೆ ನೀಡಿದೆ.

ಯುಎಇ ಕಾನ್ಸುಲೇಟ್ ಕಚೇರಿಯ ಅಧಿಕಾರಿಗಳು ಭಾಗಿಯಾಗಿರುವ ಆರೋಪದ ಈ ಪ್ರಕರಣದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ರಾಜ್ಯ ಸರ್ಕಾರಕ್ಕೆ ಮತ್ತೊಮ್ಮೆ ತೀವ್ರ ಹಿನ್ನಡೆ ಉಂಟಾಗಿದೆ.

‘ಇಂತಹ ವಿಷಯಗಳಲ್ಲಿ ಪರ್ಯಾಯ ವಿಚಾರಣೆಗಳನ್ನು ನಡೆಸಿದರೆ, ಅದು ತನಿಖೆಗೆ ಅಡ್ಡಿಯಾಗುತ್ತದೆ, ತನಿಖೆ ಹಳಿ ತಪ್ಪುತ್ತದೆ. ಅಲ್ಲದೆ, ಅದು ಆರೋಪಿಗಳಿಗೆ ಪ್ರಯೋಜನವಾಗುತ್ತದೆ’ ಎಂದು ಹೈಕೋರ್ಟ್ ಹೇಳಿದೆ.

ಚಿನ್ನ ಕಳ್ಳಸಾಗಣೆ ಆರೋಪಿ ಮತ್ತು ಯುಎಇ ಕಾನ್ಸುಲೇಟ್ ಕಚೇರಿಯ ಮಾಜಿ ಉದ್ಯೋಗಿ ಸ್ವಪ್ನಾ ಸುರೇಶ್, ಜಾರಿ ನಿರ್ದೇಶನಾಲಯದ ಅಧಿಕಾರಿಗಳು ವಿಚಾರಣೆ ವೇಳೆ ಮುಖ್ಯಮಂತ್ರಿ ಸೂಚನೆಯಂತೆ ಚಿನ್ನ ಹಾಗೂ ಡಾಲರ್ ಕಳ್ಳಸಾಗಣೆ ಮಾಡಿರುವುದಾಗಿ ಬಲವಂತದ ಹೇಳಿಕೆ ಕೊಡಿಸಿದ್ದಾರೆ ಎಂದು ನೀಡಿದ ಹೇಳಿಕೆ ಸಂಬಂಧ ನ್ಯಾಯಾಂಗ ತನಿಖೆಗೆ ಕೇರಳ ಸರ್ಕಾರ ತನಿಖಾ ಆಯೋಗ ರಚಿಸಿತ್ತು. ಈ ಸಂಬಂಧ ಮೇ 7ರಂದು ಹೊರಡಿಸಿದ್ದ ಅಧಿಸೂಚನೆಗೆ ತಡೆ ನೀಡುವಂತೆ ಕೋರಿ ಜಾರಿ ನಿರ್ದೇಶನಾಲಯ ಅರ್ಜಿ ಸಲ್ಲಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಬಿ. ಸುರೇಶ್ ಕುಮಾರ್, ಸರ್ಕಾರದ ಅಧಿಸೂಚನೆಗೆ ತಡೆ ನೀಡಿ, ಮಧ್ಯಂತರ ಆದೇಶ ಹೊರಡಿಸಿದರು.

ಜಾರಿ ನಿರ್ದೇಶನಾಲಯ ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ‘ಸಂವಿಧಾನದ ಏಳನೇ ಪರಿಚ್ಛೇದದ ಅನ್ವಯ ಇದು ಕೇಂದ್ರ ಪಟ್ಟಿಯಲ್ಲಿ ಬರುವ ವಿಷಯ. ಇದನ್ನು ರಾಜ್ಯ ಸರ್ಕಾರ ತನಿಖೆ ನಡೆಸುವುದು ಸಮರ್ಥನೀಯವಲ್ಲ’ ಎಂದು ವಾದಿಸಿದರು.

ಚಿನ್ನ ಕಳ್ಳ ಸಾಗಣೆ ಪ್ರಕರಣದಲ್ಲಿ ಪಿಣರಾಯಿ ವಿಜಯನ್ ಮತ್ತು ಇತರರ ವಿರುದ್ಧ ಹೇಳಿಕೆ ನೀಡುವಂತೆ ಬಲವಂತಪಡಿಸಿದ ಆರೋಪದ ಮೇಲೆ ಇ.ಡಿ ಅಧಿಕಾರಿಗಳ ವಿರುದ್ಧ ರಾಜ್ಯ ಪೊಲೀಸರು ದಾಖಲಿಸಿದ್ದ ಎರಡು ಎಫ್‌ಐಆರ್‌ಗಳನ್ನು ಕೇರಳ ಹೈಕೋರ್ಟ್ ಈ ಮೊದಲು ರದ್ದುಪಡಿಸಿತ್ತು.

ರಾಜ್ಯದ 29 ಜಿಲ್ಲೆಗಳಲ್ಲೂ ಭೂ ಸರ್ವೇಕ್ಷಣೆ

## ಭೂ ಸಂಪನ್ಮೂಲ ಕಾರ್ಡ್: ರಾಜ್ಯಕ್ಕೆ ವಿಸ್ತರಣೆ

• ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ಬರಗಾಲವನ್ನು ಸಮರ್ಥವಾಗಿ ಎದುರಿಸಲು ‘ಸುಜಲ–3’ ಯೋಜನೆಯ ಮಾದರಿಯಲ್ಲೇ ರಾಜ್ಯದ 29 ಜಿಲ್ಲೆಗಳಲ್ಲೂ ಭೂ ಸರ್ವೇಕ್ಷಣೆ ಕೈಗೊಂಡು, ಭೂ ಸಂಪನ್ಮೂಲ ಕಾರ್ಡ್ ವಿತರಿಸಲು ಸರ್ಕಾರ ಮುಂದಾಗಿದೆ.

ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು, ತೋಟಗಾರಿಕೆ ವಿಶ್ವವಿದ್ಯಾಲಯ ಹಾಗೂ ಭೂ ಸರ್ವೇಕ್ಷಣೆ ಮತ್ತು ಭೂ ಬಳಕೆ ಯೋಜನೆ ಸಂಸ್ಥೆಯ ಪ್ರಾದೇಶಿಕ ಕೇಂದ್ರದ ಆಶ್ರಯದಲ್ಲಿ ರಾಜ್ಯದ ಕಿರು ಜಲಾನಯನ ಪ್ರದೇಶದಲ್ಲಿ ಈ ಸಮೀಕ್ಷೆ ನಡೆಯಲಿದೆ. ಹಿಂದೆ ವಿಶ್ವಬ್ಯಾಂಕ್ ನೆರವಿನಲ್ಲಿ ಪ್ರಾಯೋಗಿಕವಾಗಿ ರಾಜ್ಯದ 11 ಜಿಲ್ಲೆಗಳಲ್ಲಿ ಈ ಯೋಜನೆ ಕೈಗೊಳ್ಳಲಾಗಿತ್ತು. ಇದರಲ್ಲಿ ಸುಮಾರು 2,500 ಜಲಾನಯನ ಪ್ರದೇಶದಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಅದನ್ನೂ ಒಳಗೊಂಡು ರಾಜ್ಯದ ಉಳಿದ ಭಾಗಗಳಿಗೆ ಈ ಯೋಜನೆಯನ್ನು ಈಗ ವಿಸ್ತರಿಸಲಾಗಿದೆ.

ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ ರಾಜ್ಯದ ಇತರ ಜಿಲ್ಲೆಗಳ 4.76ಲಕ್ಷ ಹೆಕ್ಟೇರ್ ಕೃಷಿ ಜಮೀನಿನ ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

‘ಮುಂಗಾರು ಹಂಗಾಮಿನಲ್ಲಿ ಪ್ರತಿ ಕಿರು ಜಲಾನಯನ ಪ್ರದೇಶಗಳಲ್ಲಿ ಪ್ರತಿ 310 ಮೀಟರ್ ಅಂತರದಲ್ಲಿ ಮೇಲ್ಮೈ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ,

**ಮುಖ್ಯಾಂಶಗಳು**

- ಯೋಜನೆಗಾಗಿ ₹20.71ಕೋಟಿ ಮಂಜೂರು
- 100 ಬರಪೀಡಿತ ತಾಲ್ಲೂಕುಗಳಲ್ಲಿಯೂ ಸಮೀಕ್ಷೆ

> ಧಾರವಾಡ ಕೃಷಿ ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಲ್ಲಿ 88 ಸಾವಿರ ಹೆಕ್ಟೇರ್ ಜಮೀನಿನಲ್ಲಿ ಸಮೀಕ್ಷೆ ಕೈಗೊಳ್ಳಲು ₹3.68 ಕೋಟಿ ಅನುದಾನ ಮಂಜೂರಾಗಿದೆ –
> **ಡಾ. ಪಿ.ಎಲ್.ಪಾಟೀಲ,** ಧಾರವಾಡ ಕೃಷಿ ವಿಶ್ವವಿದ್ಯಾಲಯದ ಯೋಜನಾ ನಿರ್ದೇಶಕ

ಪ್ರಯೋಗಾಲಯದಲ್ಲಿ ಅಧ್ಯಯನ ನಡೆಸಲಾಗುವುದು. ಮಣ್ಣಿನ ರಸಸಾರ, ಲವಣಾಂಶ, ಸಾವಯವ ಅಂಶ ಮತ್ತು ಪೋಷಕಾಂಶಗಳ ನಕ್ಷೆಗಳನ್ನು ತಯಾರಿಸಲಾಗುವುದು. ಇದರಿಂದ ಮಣ್ಣಿನ ಗುಣಲಕ್ಷಣ ಮತ್ತು ನೀರಿನ ಗುಣಧರ್ಮಗಳಿಗೆ ಅನುಗುಣವಾಗಿ ಅಲ್ಲಿ ಬೆಳೆಯಬಹುದಾದ ಬೆಳೆಗಳ ಕುರಿತೂ ಸಲಹೆ ನೀಡಲಾಗುವುದು. ಕೃಷಿಗೆ ಯೋಗ್ಯವಲ್ಲದ ಜಮೀನುಗಳ ಪಟ್ಟಿಯನ್ನೂ ಸಿದ್ಧಪಡಿಸಿ ವರದಿ ಸಲ್ಲಿಸಲಾಗುವುದು’ ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಯೋಜನಾ ನಿರ್ದೇಶಕ ಡಾ. ಪಿ.ಎಲ್.ಪಾಟೀಲ ವಿವರಿಸಿದರು.

‘ಪ್ರತಿ ಕೃಷಿ ಜಮೀನಿನ ನಕ್ಷೆಯನ್ನು ತಯಾರು ಮಾಡಲಾಗುವುದು. ಕೃಷಿ ವಿಶ್ವವಿದ್ಯಾಲಯಗಳು ತಮ್ಮ ವ್ಯಾಪ್ತಿಯಲ್ಲಿ ಈ ಸಮೀಕ್ಷೆ ನಡೆಸಲಿವೆ. ಒಂದು ವರ್ಷ ಅವಧಿಯಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಿದೆ’ ಎಂದು ತಿಳಿಸಿದರು.



ಸಾಂದರ್ಭಿಕ ಚಿತ್ರ

### ಭೂ ಸಂಪನ್ಮೂಲ ಕಾರ್ಡ್ ಯೋಜನೆ...

ಯೋಜನೆಯಲ್ಲಿ ಪ್ರತಿ 500ರಿಂದ ಒಂದು ಸಾವಿರ ಹೆಕ್ಟೇರ್ ಪ್ರದೇಶದಲ್ಲಿರುವ ಕಿರು ಜಲಾನಯನ ಪ್ರದೇಶದಲ್ಲಿನ ಮಣ್ಣಿನ ಆಳ, ಜಾಗದಲ್ಲಿರುವ ಇಳಿಜಾರು, ಮಣ್ಣಿನ ಕೊಚ್ಚಿಕೊಂಡು ಹೋಗುವ ಪ್ರಮಾಣ, ಗಡಸುತನ ಹಾಗೂ ಮಣ್ಣಿನಲ್ಲಿನ ಪೋಷಕಾಂಶಗಳನ್ನು ಸಮೀಕ್ಷೆ ವೇಳೆ ಪತ್ತೆ ಮಾಡಿ ಭೂ ಸಂಪನ್ಮೂಲ ಮಾಹಿತಿ ಕಾರ್ಡ್ ಅನ್ನು ರೈತರಿಗೆ ವಿತರಿಸುವುದು ಈ ಯೋಜನೆಯ ಭಾಗ.

ಈ ಯೋಜನೆಗೆ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವೂ ನೆರವಾಗಲಿದೆ.

## ಉಪಗ್ರಹ ಉಡ್ಡಯನಕ್ಕೆ ಕ್ಷಣಗಣನೆ

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ತನ್ನ ಭೂ ಸರ್ವೇಕ್ಷಣೆ ಉಪಗ್ರಹ-03 (ಇಒಎಸ್-03) ಉಡ್ಡಯನಕ್ಕೆ ಬುಧವಾರ ಕ್ಷಣಗಣನೆ ಆರಂಭಿಸಿದೆ. ಇಲ್ಲಿನ ಸತೀಶ ಧವನ್ ಬಾಹ್ಯಾಕಾಶ ಕೇಂದ್ರದಿಂದ ಜಿಎಸ್‌ಎಲ್‌ವಿ-ಎಫ್10 ನೌಕೆಯ ಮೂಲಕ ಇಒಎಸ್-03 ಉಪಗ್ರಹವನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಗುತ್ತದೆ.

ಈ ಉಪಗ್ರಹವು ಹೆಚ್ಚಿನ ಸಾಮರ್ಥ್ಯ ಹೊಂದಿದೆ. ಪ್ರಕೃತಿ ವಿಕೋಪ ನಿರ್ವಹಣೆ ಸಂದರ್ಭದಲ್ಲಿ ಮತ್ತು ದೇಶದ ಗಡಿ ಕಣ್ಗಾವಲಿನಲ್ಲಿ ತತ್ಕಾಲದ ಚಿತ್ರಗಳನ್ನು ಪಡೆದುಕೊಳ್ಳಲು ಈ ಉಪಗ್ರಹವನ್ನು ಬಳಸಿಕೊಳ್ಳಲಾಗುತ್ತದೆ.

ಬುಧವಾರ ಬೆಳಗಿನ ಜಾವ 3.43ರಲ್ಲಿ ಕ್ಷಣಗಣನೆ ಆರಂಭವಾಗಿದೆ. 26 ಗಂಟೆಗಳ ನಂತರ ಗುರುವಾರ ಬೆಳಿಗ್ಗೆ 5.43ರಲ್ಲಿ ಜಿಎಸ್‌ಎಲ್‌ವಿ-ಎಫ್10 ನೌಕೆಯು ನಭದತ್ತ ಜಿಗಿಯಲಿದೆ. ನಂತರದ 19 ನಿಮಿಷಗಳ ಪಯಣದ ನಂತರ ಇಒಎಸ್-03 ಉಪಗ್ರಹವನ್ನು ನಕ್ಷೆಗೆ ಸೇರಿಸಲಿದೆ.

ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದ: ಪ್ರಧಾನಿಗೆ ಪತ್ರ ಬರೆದ ಮಹಾರಾಷ್ಟ್ರ ಡಿಸಿಎಂ

## ಪ್ರಧಾನಿ ಮಧ್ಯಪ್ರವೇಶಕ್ಕೆ ಅಜಿತ್ ಪವಾರ್ ಆಗ್ರಹ

ಮುಂಬೈ (ಪಿಟಿಐ): ‘ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ದೀರ್ಘಕಾಲದಿಂದ ಇರುವ ಗಡಿವಿವಾದವನ್ನು ಇತ್ಯರ್ಥಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯ ಪ್ರವೇಶಿಸಬೇಕು’ ಎಂದು ಎನ್‌ಸಿಪಿ ನಾಯಕ ಹಾಗೂ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಒತ್ತಾಯಿಸಿದ್ದಾರೆ.

ಈ ಕುರಿತು ಆಗಸ್ಟ್ 9ರಂದು ಪ್ರಧಾನಿ ಅವರಿಗೆ ಪವಾರ್ ಪತ್ರ ಬರೆದಿದ್ದು, ‘ಮರಾಠಿ ಮಾತನಾಡುವ ಜನರ ಮೇಲಿನ ಕರ್ನಾಟಕ ಸರ್ಕಾರದ ‘ದೌರ್ಜನ್ಯ’ವನ್ನು ನಿಲ್ಲಿಸಬೇಕು ಹಾಗೂ ಕರ್ನಾಟಕದ ವಿವಾದಿತ ಪ್ರದೇಶಗಳನ್ನು ರಾಜ್ಯಕ್ಕೆ ಸೇರಿಸಬೇಕು’ ಎಂದೂ ಮನವಿ ಮಾಡಿದ್ದಾರೆ.



ಅಜಿತ್ ಪವಾರ್

‘ಮಹಾರಾಷ್ಟ್ರ ರಾಜ್ಯ ರಚನೆಯಾಗಿ, ಮುಂಬೈ ಅದರ ರಾಜಧಾನಿಯಾಗಿ 60 ವರ್ಷಗಳಾಗಿವೆ. ಆದರೆ, ಬೆಳಗಾವಿ, ಕಾರವಾರ, ಬೀದರ್, ಭಾಲ್ಕಿ, ನಿಪ್ಪಾಣಿ ಸೇರಿದಂತೆ ಕರ್ನಾಟಕದಲ್ಲಿ ಮರಾಠಿ ಮಾತನಾಡುವ ಜನರಿರುವ ಪ್ರದೇಶಗಳು ಇನ್ನೂ ಮಹಾರಾಷ್ಟ್ರಕ್ಕೆ ಸೇರಿಲ್ಲ. ಮಹಾರಾಷ್ಟ್ರದ ಜನರು ಇರುವ ಹಾಗೂ ಗಡಿ ಕರ್ನಾಟಕದ ಮರಾಠಿ ಮಾತನಾಡುವ ಪ್ರದೇಶಗಳಲ್ಲಿ ವಾಸಿಸುವವರ ಸಮಸ್ಯೆ ಇನ್ನೂ ಬಗೆಹರಿದಿಲ್ಲ’ ಎಂದು ಪತ್ರದಲ್ಲಿ ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

‘ಗಡಿಯುದ್ದಕ್ಕೂ ಮರಾಠಿ ಮಾತನಾಡುವ ಪ್ರದೇಶಗಳು ಸೇರಿದಂತೆ ‘ಸಂಯುಕ್ತ ಮಹಾರಾಷ್ಟ್ರ’ದ ಕನಸು ನನಸಾಗುವವರೆಗೂ ಮಹಾರಾಷ್ಟ್ರ ವಿಶ್ರಾಂತಿ ಪಡೆಯುವುದಿಲ್ಲ. ನೀವು (ಮೋದಿ) ಮಹಾರಾಷ್ಟ್ರದ ಜನರ ಆಶಯಗಳನ್ನು ಅರಿತು ನ್ಯಾಯ ಕೊಡಿಸಬೇಕೆಂದು ನಾವು ಕೋರುತ್ತೇವೆ’ ಎಂದು ಪವಾರ್ ಕೋರಿದ್ದಾರೆ.

‘ಪ್ರಸ್ತುತ ಗಡಿವಿವಾದವು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದ್ದು, ಈ ನಿಟ್ಟಿನಲ್ಲಿ ಕಾನೂನು ಹೋರಾಟ ನಡೆಯುತ್ತಿದೆ. ಮಹಾರಾಷ್ಟ್ರಕ್ಕೆ ನ್ಯಾಯ ಸಿಗುತ್ತದೆ’ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಅಜಿತ್ ಪವಾರ್ ಅವರು, ‘ಕರ್ನಾಟಕದ ಗಡಿ ಪ್ರದೇಶಗಳಿಂದ ಮರಾಠಿ ಜನರಿಗೆ ನ್ಯಾಯ ಒದಗಿಸುವುದಕ್ಕಾಗಿ ನಾವು ನಿಮ್ಮ ಸಹಾಯ ಕೋರುತ್ತಿದ್ದೇವೆ. ನೀವು ಅದನ್ನು ಮಾಡುತ್ತೀರಿ ಎಂದು ನನಗೆ ಖಾತ್ರಿಯಿದೆ’ ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಕರ್ನಾಟಕದ ಬೆಳಗಾವಿ, ಕಾರವಾರ ಮತ್ತು ನಿಪ್ಪಾಣಿ ಸೇರಿದಂತೆ ಕೆಲವು ಪ್ರದೇಶಗಳನ್ನು ಮಹಾರಾಷ್ಟ್ರ ತನಗೆ ಸೇರಿದ್ದು ಎಂದು ಹೇಳಿಕೊಂಡಿದೆ. ಈ ಪ್ರದೇಶಗಳಲ್ಲಿ ಹೆಚ್ಚಿನ ಜನರು ಮರಾಠಿ ಮಾತನಾಡುವವರಾಗಿದ್ದಾರೆ. ಬೆಳಗಾವಿ ಮತ್ತು ಇತರ ಗಡಿ ಪ್ರದೇಶಗಳ ಕುರಿತು ಉಭಯ ರಾಜ್ಯಗಳ ನಡುವಿನ ವಿವಾದವು ಹಲವು ವರ್ಷಗಳಿಂದ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ.

ನಮ್ಮ ಮೆಟ್ರೊ: ಮೈಸೂರು ರಸ್ತೆ–ಕೆಂಗೇರಿವರೆಗಿನ ಮಾರ್ಗದ ತಪಾಸಣೆ ನಡೆಸಿದ ಮೆಟ್ರೊ ರೈಲು ಸುರಕ್ಷತಾ ಆಯುಕ್ತ

# ರೀಚ್ 2 ವಿಸ್ತರಿತ ಮಾರ್ಗದ ಸುರಕ್ಷತೆ ತಪಾಸಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಮೈಸೂರು ರಸ್ತೆಯಿಂದ ಕೆಂಗೇರಿ ಮೆಟ್ರೊ ನಿಲ್ದಾಣದವರೆಗೆ ನಿರ್ಮಾಣಗೊಂಡಿರುವ ಎತ್ತರಿಸಿದ ಮಾರ್ಗ ಕಾರ್ಯಾಚರಣೆಗೆ ಸನ್ನದ್ಧವಾಗಿದೆ. ಈ ಮಾರ್ಗದ ಹಳಿಗಳ ಹಾಗೂ ನಿಲ್ದಾಣಗಳ ಸುರಕ್ಷತಾ ಅಂಶಗಳನ್ನು ಮೆಟ್ರೊ ರೈಲು ಸುರಕ್ಷತಾ ಆಯುಕ್ತ ಅಭಯ್ ಕುಮಾರ್ ರೈ ಬುಧವಾರ ತಪಾಸಣೆ ನಡೆಸಿದರು.

ಈ ಮಾರ್ಗದ ನಾಯಂಡಹಳ್ಳಿ, ಆರ್.ಆರ್.ನಗರ, ಜ್ಞಾನಭಾರತಿ, ಪಟ್ಟಣಗೆರೆ ಮೆಟ್ರೊ ನಿಲ್ದಾಣಗಳಿಗೆ ಭೇಟಿ ನೀಡಿದ ಅಭಯ್ ಕುಮಾರ್ ರೈ ಅಲ್ಲಿ ಪ್ರಯಾಣಿಕರ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳು, ಹಳಿಗಳ ಸಾಮರ್ಥ್ಯ, ಪ್ಲ್ಯಾಟ್‌ಫಾರ್ಮ್‌ನಲ್ಲಿ ಕಲ್ಪಿಸಿರುವ ವ್ಯವಸ್ಥೆ, ಬೆಂಕಿ ಅನಾಹುತ ತಡೆಯಲು ಇರುವ ಸೌಕರ್ಯಗಳು, ಮೆಟ್ಟಿಲುಗಳ ಅಗಲ, ಟಿಕೆಟಿಂಗ್ ವ್ಯವಸ್ಥೆ, ಪ್ಲ್ಯಾಟ್‌ಫಾರ್ಮ್ ತಲುಪಲು ಒದಗಿಸಿರುವ ಸೌಕರ್ಯಗಳನ್ನು ತಪಾಸಣೆ ನಡೆಸಿದರು. ತುರ್ತು ಸಂದರ್ಭದಲ್ಲಿ ಪ್ರಯಾಣಿಕರ ರಕ್ಷಣೆಯ ಕಾರ್ಯತಂತ್ರಗಳ ಕುರಿತು ಅಧಿಕಾರಿಗಳಿಂದ ವಿವರ ಪಡೆದರು.




ಮೆಟ್ರೊ ರೈಲು ಸುರಕ್ಷತಾ ಆಯುಕ್ತ ಅಭಯ್ ಕುಮಾರ್ ರೈ ಅವರು ನಮ್ಮ ಮೆಟ್ರೊ ರೀಚ್ 2 ವಿಸ್ತರಿತ ಮಾರ್ಗದ ಹಳಿಗಳ ಸುರಕ್ಷತಾ ತಪಾಸಣೆಯನ್ನು ಬುಧವಾರ ಕೈಗೊಂಡರು. ಬಿಎಂಆರ್‌ಸಿಎಲ್ ನಿರ್ದೇಶಕ (ಪ್ರಾಜೆಕ್ಟ್ ಮತ್ತು ಪ್ಲ್ಯಾನಿಂಗ್) ರಾಧಾಕೃಷ್ಣ ರೆಡ್ಡಿ ಇದ್ದಾರೆ

ಬಿಎಂಆರ್‌ಸಿಎಲ್ ನಿರ್ದೇಶಕ (ರೋಲಿಂಗ್ ಸ್ಟಾಕ್, ಸಿಗ್ನಲಿಂಗ್, ಎಲೆಕ್ಟ್ರಿಕಲ್) ಎನ್.ಎಂ.ಧೋಕೆ, ನಿರ್ದೇಶಕ (ಪ್ರಾಜೆಕ್ಟ್ ಮತ್ತು ಯೋಜನೆ) ಡಿ.ರಾಧಾಕೃಷ್ಣ ರೆಡ್ಡಿ ಹಾಗೂ ಇತರ ಅಧಿಕಾರಿಗಳು ಇಲ್ಲಿನ ಸೌಕರ್ಯಗಳ ಬಗ್ಗೆ ಮಾಹಿತಿ ಒದಗಿಸಿದರು.

ಕೆಂಗೇರಿ ನಿಲ್ದಾಣ ಹಾಗೂ ಕೆಂಗೇರಿ ಬಸ್ ಟರ್ಮಿನಲ್ ನಿಲ್ದಾಣಗಳ ಪರೀಕ್ಷೆಯನ್ನು ಮೆಟ್ರೊ ರೈಲು ಸುರಕ್ಷತಾ ಆಯುಕ್ತರು ಗುರುವಾರ ಕೈಗೊಳ್ಳಲಿದ್ದಾರೆ. ಮೆಟ್ರೊ ರೈಲಿನ ವೇಗ ಪರೀಕ್ಷೆ, ಸಿಗ್ನಲಿಂಗ್ ವ್ಯವಸ್ಥೆಗಳ ಪರೀಕ್ಷೆಗಳೂ ಗುರುವಾರ ನಡೆಯಲಿವೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಮೂಲಗಳು ತಿಳಿಸಿವೆ.

'ಹೊಸ ಮಾರ್ಗದ ಸುರಕ್ಷತಾ ತಪಾಸಣೆ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಗುರುವಾರವೂ ಆಯುಕ್ತರು ತಪಾಸಣಾ ಕಾರ್ಯ ಮುಂದುವರಿಸಲಿದ್ದಾರೆ. ಈ ಮಾರ್ಗದ ಸುರಕ್ಷತಾ ಪ್ರಮಾಣಪತ್ರ ಕೈಸೇರಿದ ಬಳಿಕ ಶೀಘ್ರವೇ ಈ ಮಾರ್ಗದಲ್ಲೂ ವಾಣಿಜ್ಯ ಕಾರ್ಯಾಚರಣೆ ಆರಂಭಿಸಲು ಕ್ರಮ ಕೈಗೊಳ್ಳಲಿದ್ದೇವೆ. ಪ್ರಮುಖರ ಜೊತೆ ಚರ್ಚಿಸಿ ಈ ಮಾರ್ಗದ ಉದ್ಘಾಟನೆಗೆ ದಿನಾಂಕ ನಿಗದಿಪಡಿಸಲಿದ್ದೇವೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

ರೀಚ್-2 ಮಾರ್ಗದ ವಿಸ್ತರಣಾ ಕಾರ್ಯವನ್ನು ಬಿಎಂಆರ್‌ಸಿಎಲ್ ಎರಡು ಹಂತಗಳಲ್ಲಿ ಕೈಗೊಂಡಿದೆ. ಮೈಸೂರು ರಸ್ತೆಯಿಂದ ಪಟ್ಟಣಗೆರೆವರೆಗೆ ಕಾಮಗಾರಿಯನ್ನು ರೀಚ್- 2ಎ ಹಾಗೂ ಪಟ್ಟಣಗೆರೆಯಿಂದ ಚಲ್ಲಘಟ್ಟ ಡಿಪೊವರೆಗಿನ ಕಾಮಗಾರಿಯನ್ನು ರೀಚ್ 2ಬಿ ಎಂದು ಗುರುತಿಸಲಾಗಿದೆ. ಚಲ್ಲಘಟ್ಟ ಡಿಪೊ ಕಾಮಗಾರಿ ಪ್ರಗತಿಯಲ್ಲಿದೆ. ಸದ್ಯಕ್ಕೆ ಈ ಮಾರ್ಗದಲ್ಲಿ ಕೆಂಗೇರಿವರೆಗಿನ ನಿಲ್ದಾಣಗಳು ಕಾರ್ಯಾಚರಣೆಗೆ ಸನ್ನದ್ಧವಾಗಿವೆ.

### ಮಾರ್ಗ ವಿಸ್ತರಣೆಗೆ ಬಹಳ ಮಹತ್ವ

ನಮ್ಮ ಮೆಟ್ರೊ ಯೋಜನೆಯ ಎರಡನೇ ಹಂತದ ವಿಸ್ತರಣೆಯಲ್ಲಿ ರೀಚ್ 2 ಮಾರ್ಗದ ವಿಸ್ತರಣೆ ಅತ್ಯಂತ ಮಹತ್ವದ್ದಾಗಿದೆ. ಈ ಮಾರ್ಗವು ಪಶ್ಚಿಮದ ಕೆಂಗೇರಿಯಿಂದ ಪೂರ್ವದ ಬೈಯಪ್ಪನಹಳ್ಳಿವರೆಗೂ ನಿರಂತರವಾಗಿ ಮೆಟ್ರೊ ಸಂಪರ್ಕ ಕಲ್ಪಿಸಲಿದೆ. ನಗರದ ಮೈಸೂರು ರಸ್ತೆ, ಮೆಜೆಸ್ಟಿಕ್, ಎಂ.ಜಿ.ರಸ್ತೆ, ಬೈಯಪ್ಪನಹಳ್ಳಿ ಮುಂತಾದ ಪ್ರಮುಖ ಪ್ರದೇಶಗಳನ್ನು ಸಂಪರ್ಕಿಸಲಿದೆ. ರೀಚ್-1 ಮಾರ್ಗವು ವೈಟ್‌ಫೀಲ್ಡ್‌ವರೆಗೂ ವಿಸ್ತರಣೆಯಾದರೆ ಕೆಂಗೇರಿಯಿಂದ ಅಲ್ಲಿವರೆಗೂ ನಿರಂತರ ಮೆಟ್ರೊ ಸಂಪರ್ಕ ಸಿಗಲಿದೆ. ನಗರದ ಅನೇಕ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆಗೊಳಿಸುವಲ್ಲಿ ಈ ಮೆಟ್ರೊ ಮಾರ್ಗ ಮಹತ್ತರ ಪಾತ್ರ ವಹಿಸಲಿದೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಇದೇ ಆಗಸ್ಟ್ ಅಂತ್ಯದೊಳಗೆ ಕೆಂಗೇರಿವರೆಗೆ ಪ್ರಯಾಣಿಕ ರೈಲು ಸಂಚಾರ ಸಾಧ್ಯವಾಗಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

## 'ಜೀವ ವೈವಿಧ್ಯ ರಕ್ಷಣೆ ಎಲ್ಲರ ಹೊಣೆ'



ಪರಿಸರವಾದಿ ಸಿದ್ದು ಬಂಡಿ, ಜಲ ವೈವಿಧ್ಯ ಸಂರಕ್ಷಕ ಕ್ಯಾಪ್ಟನ್ ಸಂತೋಷ್ ಚಂದಾಪುರ, ಪರಿಸರವಾದಿ ಮೋಹನದಾಸ್ ಹೆಬ್ಬಾರ್ ಅವರನ್ನು ಸನ್ಮಾನಿಸಲಾಯಿತು. ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ನೋಮೇಶ್ ಕುಮಾರ್, ಮುಖ್ಯ ಲೆಕ್ಕಾಧಿಕಾರಿ ಕೆ. ಲಲಿತಾ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸಂಗಪ್ಪ, ಸುರೇಶ್ ಹಾಗೂ ಅಮರಪ್ಪ ಇದ್ದರು

**ಬೆಂಗಳೂರು:** 'ಜಾಗತಿಕ ತಾಪಮಾನ ಏರಿಕೆಯಾಗುತ್ತಿರುವ ಕಾರಣ ಜೀವ ಸಂಕುಲವೇ ಅಪಾಯದಲ್ಲಿದೆ. ಜೀವ ವೈವಿಧ್ಯದ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ' ಎಂದು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅನಿತಾ ಅರೇಕಲ್ ಹೇಳಿದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿ, ಜಿಲ್ಲಾಡಳಿತ, ಜಿ.ಪಂ. ಹಾಗೂ ನಗರ ಸಾಮಾಜಿಕ ಅರಣ್ಯ ವಿಭಾಗದಿಂದ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಜೀವ ವೈವಿಧ್ಯ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

'ಜನರ ಆರೋಗ್ಯದ ಜತೆಗೆ ಜೀವ ವೈವಿಧ್ಯ ಕಾಪಾಡುವಂತಹ ಜೀವ ಸಂಕುಲವನ್ನು ರಕ್ಷಣೆ ಮಾಡಬೇಕು. ಸಾವಯವ ಪದ್ಧತಿಯ ಮೂಲಕ ಪಾರಂಪರಿಕ ಕೃಷಿಗೆ ಒತ್ತು ನೀಡಿದರೆ ಪೋಷಕಾಂಶದ ಜತೆಗೆ ಜೀವವೈವಿಧ್ಯದ ರಕ್ಷಣೆಯೂ ಸಾಧ್ಯ' ಎಂದು ಪ್ರತಿಪಾದಿಸಿದರು.

'ಇದಕ್ಕಾಗಿ ಗ್ರಾಮ ಮಟ್ಟದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸುವ ಮೂಲಕವೂ ಜಾಗೃತಿ ಮೂಡಿಸುವ ಕೆಲಸವಾಗಬೇಕು' ಎಂದರು.



## ಪೂರ್ವಾಭ್ಯಾಸ

ಸ್ವಾತಂತ್ರ್ಯ ದಿನಾಚರಣೆಗಾಗಿ ಬಿಎಸ್‌ಎಫ್, ಸಿಆರ್‌ಪಿಎಫ್, ಶ್ವಾನದಳ ಹಾಗೂ ಪೊಲೀಸ್ ಬೆಟಾಲಿಯನ್ ತಂಡಗಳು ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಬುಧವಾರ ಪೂರ್ವಾಭ್ಯಾಸ ನಡೆಸಿದವು

ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳೊಂದಿಗೆ ಉದ್ಯೋಗಾಕಾಂಕ್ಷಿಗಳಿಗೂ ತೊಂದರೆ; ನೇಮಕಾತಿಗೆ ಆಗ್ರಹ

# ಸರ್ಕಾರಿ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಕೊರತೆ

• ಗೋವರ್ಧನ ಎಸ್.ಎನ್.

**ಹುಬ್ಬಳ್ಳಿ:** ರಾಜ್ಯದ 39,308 ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಿಲ್ಲ. ಇದರಿಂದ ದೈಹಿಕ ಶಿಕ್ಷಣದ ಅರಿವು, ಆಟೋಟಗಳಿಂದ ಬಹುತೇಕ ವಿದ್ಯಾರ್ಥಿಗಳ ವಂಚಿತರಾಗಿದ್ದರೆ, ವಯೋಮಿತಿ ಮೀರಿದ ಹಲವು ಉದ್ಯೋಗಾಕಾಂಕ್ಷಿಗಳೂ ಕೆಲಸದಿಂದ ವಂಚಿತರಾಗಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಮಾಹಿತಿಯಂತೆ, ರಾಜ್ಯದಲ್ಲಿ ಒಟ್ಟು 43,492 ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, 4,752 ದೈಹಿಕ ಶಿಕ್ಷಣ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. 4,696 ಸರ್ಕಾರಿ ಪ್ರೌಢಶಾಲೆಗಳಿದ್ದು, 4,128 ದೈಹಿಕ ಶಿಕ್ಷಣ ಶಿಕ್ಷಕರು ಇದ್ದಾರೆ.

ಪ್ರಾಥಮಿಕ ಶಾಲೆಗಳಲ್ಲಿ 38,740 ಹಾಗೂ ಪ್ರೌಢ ಶಾಲೆಗಳಲ್ಲಿ 568 ದೈಹಿಕ ಶಿಕ್ಷಣ ಶಿಕ್ಷಕರ ಕೊರತೆಯಿದೆ. 2007ರಲ್ಲಿ ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಶಿಕ್ಷರ ನೇಮಕವಾಗಿದ್ದು ಬಿಟ್ಟರೆ, ಆ ಬಳಿಕ ನೇಮಕಾತಿ ನಡೆದಿಲ್ಲ. 2016-17ರಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ವೇಳೆ 250 ದೈಹಿಕ ಶಿಕ್ಷಣ ಶಿಕ್ಷಕರನ್ನು ಮಾತ್ರ ನೇಮಕ ಮಾಡಿಕೊಳ್ಳಲಾಯಿತು.

'6ರಿಂದ 10ನೇ ತರಗತಿವರೆಗೆ ದೈಹಿಕ ಶಿಕ್ಷಣದ ಪಠ್ಯಕ್ರಮವಿದ್ದು, ಬೋಧನೆ, ಪರೀಕ್ಷೆಗೆ ಅವಕಾಶವಿದೆ. ಈ ವಿಷಯದಲ್ಲೂ ಉತ್ತೀರ್ಣರಾಗಬೇಕಿರುವುದು ಕಡ್ಡಾಯ ಎಂದು ಸರ್ಕಾರ ಆದೇಶಿಸಿದೆ.

ಆದರೆ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಠ 200 ಮಕ್ಕಳು ಇರಬೇಕು, ಇಲ್ಲವೇ 7 ಸಹ ಶಿಕ್ಷಕರಿದ್ದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರೂ ಇರಬೇಕೆಂಬ ನಿಯಮವಿದೆ. ಹಲವು ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇರುವ ಕಾರಣ, ದೈಹಿಕ ಶಿಕ್ಷಕರ ನೇಮಕಾತಿ ನಡೆದಿಲ್ಲ' ಎಂದು ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚೌಡಪ್ಪ ಎಸ್. ತಿಳಿಸಿದರು.

'ಶಿಕ್ಷಕರ ನಿವೃತ್ತಿ, ತಾಲ್ಲೂಕು ವಿಷಯ ಪರಿವೀಕ್ಷಕರಾಗಿ ಬಡ್ತಿ ಹೊಂದಿದ ಕಾರಣ ಸುಮಾರು 2,000 ಪ್ರೌಢಶಾಲೆಗಳಲ್ಲೂ ದೈಹಿಕ ಶಿಕ್ಷಣ ಶಿಕ್ಷಕರಿಲ್ಲ. ಪ್ರಧಾನಿ ಮೋದಿ ಅವರು ಖೇಲೋ ಇಂಡಿಯಾ, ಫಿಟ್ ಇಂಡಿಯಾಗೆ ಕರೆ ನೀಡಿದ್ದು, ಶಾಲಾ ಹಂತದಲ್ಲಿ ಮಕ್ಕಳಿಗೆ ಈ ಬಗ್ಗೆ ಅರಿವು ಮೂಡಿಸುವ ಶಿಕ್ಷಕರ ಸಂಖ್ಯೆ ತೀರಾ ಕಡಿಮೆಯಿದೆ' ಎಂದು ಬೇಸರ ವ್ಯಕ್ತಪಡಿಸಿದರು.

> **ರಾಜ್ಯದ ಸಿಪಿಎಡ್, ಬಿಪಿಎಡ್ ಕಾಲೇಜುಗಳಿಂದ ವರ್ಷಕ್ಕೆ ಸಾವಿರಾರು ವಿದ್ಯಾರ್ಥಿಗಳು ಹೊರಬರುತ್ತಾರೆ. ಅವರ ನೇಮಕಾತಿಗೆ ಸರ್ಕಾರ ಮುಂದಾಗಬೇಕಿದೆ**
> **ಪ್ರಮೋದ ರೋಣದ್,** ಉಪಾಧ್ಯಕ್ಷ, ದೈಹಿಕ ಶಿಕ್ಷಣ ಶಿಕ್ಷಕರ ಸಂಘ

> **ಬಿಪಿಎಡ್ ತರಬೇತಿ ಪಡೆದು, ಸದ್ಯ ಖಾಸಗಿ ಶಾಲೆಯಲ್ಲಿ ಕಡಿಮೆ ಸಂಬಳಕ್ಕೆ ದುಡಿಯಬೇಕಾದ ಪರಿಸ್ಥಿತಿಯಿದೆ. ನೇಮಕಾತಿಗಾಗಿ ಎದುರು ನೋಡುತ್ತಿರುವೆ**
> **ದೇವರಾಜ,** ಉದ್ಯೋಗಾಕಾಂಕ್ಷಿ

> **ಶಿಕ್ಷಕರ ನೇಮಕಾತಿ ಸಂಬಂಧ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವ ಸಲ್ಲಿಸಲಾಗಿದೆ. ಆದೇಶ ಬಂದ ತಕ್ಷಣ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು**
> **ಅನ್ಬುಕುಮಾರ್ ವಿ.,** ಆಯುಕ್ತ, ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರಜಾವಾಣಿ ವಿಶೇಷ

ಕೆಪಿಸಿಸಿಯಿಂದ ದೂರು ದಾಖಲು, ಪ್ರತಿಭಟನೆ

# ಸಚಿವ ಕೆ.ಎಸ್. ಈಶ್ವರಪ್ಪ ಬಂಧನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಾಂಗ್ರೆಸ್ ನಾಯಕರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಬಂಧಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ವತಿಯಿಂದ ಹೈಗ್ರೌಂಡ್ಸ್ ಠಾಣೆ ಎದುರು ಬುಧವಾರ ಪ್ರತಿಭಟನೆ ನಡೆಯಿತು.

ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಭಾಗವಹಿಸಿದ್ದರು.

'ಈಶ್ವರಪ್ಪ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸುವಾಗ ಕಾಂಗ್ರೆಸ್ ನಾಯಕರ ಬಗ್ಗೆ ಕೀಳುಮಟ್ಟದ ಪದಬಳಕೆ ಮಾಡಿದ್ದಾರೆ. ಕಾನೂನು ಸುವ್ಯವಸ್ಥೆಗೆ ಸವಾಲು ಹಾಕಿ ಬೆದರಿಸುವ ಹೇಳಿಕೆಗಳನ್ನು ನೀಡಿದ್ದಾರೆ' ಎಂದು ಪ್ರತಿಭಟನಕಾರರು ದೂರಿದರು.




ಕೆಪಿಸಿಸಿ ವತಿಯಿಂದ ಹೈಗ್ರೌಂಡ್ಸ್ ಠಾಣೆಯ ಎದುರು ಪ್ರತಿಭಟನೆ ನಡೆಸಲಾಯಿತು. ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ಕಾಂಗ್ರೆಸ್ ಮುಖಂಡರು ಇದ್ದರು.

'ಈಶ್ವರಪ್ಪ ಅವರ ಹೇಳಿಕೆ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಹಾಗೂ ಕೋಮುವಾದ ಸೃಷ್ಟಿಸುವಂತಿದೆ. ಇವು, ಹಿಂದುತ್ವದ ಸಂಘಟನೆಗಳಿಗೆ ಉತ್ತೇಜಿಸುವ ಪ್ರಚೋದನಕಾರಿ ಹೇಳಿಕೆಗಳಾಗಿವೆ. ಹಾಗಾಗಿ, ಈಶ್ವರಪ್ಪ ಅವರನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಕೆಪಿಸಿಸಿ ಪ್ರಚಾರ ಸಮಿತಿಯ ಬೆಂಗಳೂರು ಉತ್ತರ ವಿಭಾಗದ ಪ್ರಧಾನ ಕಾರ್ಯದರ್ಶಿ ಕೆ.ಟಿ.ನವೀನ್ ಚಂದ್ರ ಅವರು ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಎಸ್.ಮನೋಹರ್, ಜಿ.ಕೃಷ್ಣಪ್ಪ, ಜಿ.ಶೇಖರ್, ಬಿ.ಟಿ. ಶ್ರೀನಿವಾಸ ಮೂರ್ತಿ, ಸಲೀಂ, ಜನಾರ್ದನ್, ಎ.ಆನಂದ್, ಎಲ್. ಜಯಸಿಂಹ, ಪುಟ್ಟರಾಜು ಸೇರಿದಂತೆ ಹಲವರು ಭಾಗವಹಿಸಿದ್ದರು.

## 'ನಮ್ಮವರ ಮೇಲಿನ ಸುಳ್ಳು ಕೇಸ್ ವಾಪಸ್'

ಪ್ರಜಾವಾಣಿ ವಾರ್ತೆ

**ಬೆಳಗಾವಿ:** 'ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲೆ ಹಾಕಿರುವ ಸುಳ್ಳು ಪ್ರಕರಣಗಳನ್ನು ವಾಪಸ್ ಪಡೆದೇ ತೀರುತ್ತೇವೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ನಮ್ಮವರ ಮೇಲೆ ಹಲವೆಡೆ ಸುಳ್ಳು ಪ್ರಕರಣಗಳನ್ನು ಹಾಕಲಾಗಿದೆ. ಈಗ ನಮಗೂ ಶಕ್ತಿ ಇದೆ. ವಾಪಸ್ ತಗೊತೀವಿ' ಎಂದರು.

'ಬಿಜೆಪಿ ಅಧಿಕಾರಕ್ಕೆ ಬಂದ್ರೆ ಮೀಸಲಾತಿ ತೆಗೆಯುತ್ತಾರೆ, ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸ್ತಾರೆ ಎಂದೆಲ್ಲಾ ಕಾಂಗ್ರೆಸ್‌ನವರು ವದಂತಿ ಹಬ್ಬಿಸಿದ್ದರು. ಎಷ್ಟು ಜನ ಮುಸ್ಲಿಮರು ಪಾಕಿಸ್ತಾನಕ್ಕೆ ಹೋದರು? ಮೀಸಲಾತಿ ಕಿತ್ತುಕೊಂಡಿದ್ದೇವೆಯೇ? ವೈದ್ಯಕೀಯ ಶಿಕ್ಷಣದಲ್ಲಿ ಇತರ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕೊಟ್ಟಿದ್ದೇವೆ. ಹಿಂದುಳಿದ ವರ್ಗದವರು ಹಾಗೂ ಪರಿಶಿಷ್ಟರಿಗೆ ಸಚಿವ ಸಂಪುಟದಲ್ಲಿ ಆದ್ಯತೆ ಸಿಕ್ಕಿದೆ ರಾಜಕಾರಣಕ್ಕಾಗಿ ಬಿಜೆಪಿಯವರು ಮೀಸಲಾತಿ ವಿರೋಧಿಗಳು ಎನ್ನುವುದು ಸರಿಯೇ?' ಎಂದು ಕೇಳಿದರು.

'ಸ್ವಾತಂತ್ರ್ಯ ಬಂದಾಗಿನಿಂದ ಆಡಳಿತ ನಡೆಸಿದ ಕಾಂಗ್ರೆಸ್‌ನವರು ಎಷ್ಟು ಜನ ದಲಿತರನ್ನು ಮುಖ್ಯಮಂತ್ರಿ ಮಾಡಿದರು? ನಾವು ಈಗ ಕಣ್ಣು ಬಿಡುತ್ತಿದ್ದೇವೆ. ಪೂರ್ಣ ಬಹುಮತವನ್ನು ಜನರು ಕೊಟ್ಟಿಲ್ಲ. ಅವರಿವರನ್ನು ತಗೊಂಡು ಸರ್ಕಾರ ರಚಿಸಿದ್ದೇವೆ. ಅವಕಾಶ ಬಂದಾಗ ದಲಿತ ಮುಖ್ಯಮಂತ್ರಿ ಮಾಡುತ್ತೇವೆ' ಎಂದರು.

'ದಲಿತರು ನಿಮ್ಮನ್ನು (ಕಾಂಗ್ರೆಸ್‌ನವರನ್ನು) ಬಹಳ ವರ್ಷದಿಂದಲೂ ನಂಬಿ ಮತ ಕೊಟ್ಟರು. ಅವರೀಗ ನಿಮ್ಮಿಂದ ದೂರಾಗುತ್ತಿದ್ದಾರೆ. ಸ್ವಲ್ಪ ಮುಸ್ಲಿಮರು ಕಾಂಗ್ರೆಸ್‌ನವರನ್ನು ಅಂಟಿಕೊಂಡಿದ್ದಾರೆ. ಅವರೂ ಬಿಡುತ್ತಾರೆ. ಮುಂಚೆ ನಮ್ಮದು ಬ್ರಾಹ್ಮಣರ ಪಕ್ಷ ಎಂದು ಕರೆಯುತ್ತಿದ್ದರು. ಈಗ ಇಡೀ ಹಿಂದೂ ಸಮಾಜ ನಮ್ಮ ಜೊತೆಗಿದೆ' ಎಂದರು.

'ಕೊಲೆ ಮಾಡಿದ್ದರೂ ವಿಚಾರಣೆ ನಂತರವೇ ಶಿಕ್ಷೆ ಕೊಡಲಾಗುತ್ತದೆ. ಸಚಿವೆ ಶಶಿಕಲಾ ಜೊಲ್ಲೆ ಅವರ ವಿರುದ್ಧ ಭ್ರಷ್ಟಾಚಾರದ ಕಪ್ಪು ಚುಕ್ಕೆ ಇಲ್ಲ. ಹೀಗಾಗಿ, ಅವರ ವಿರುದ್ಧ ತನಿಖೆ ಅಗತ್ಯವಿಲ್ಲ' ಎಂದು ಸಮರ್ಥಿಸಿಕೊಂಡರು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮಾಹಿತಿ

# ಜಲಶಕ್ತಿ ಅಭಿಯಾನ: ರಾಜ್ಯ ಮೊದಲು

ಪ್ರಜಾವಾಣಿ ವಾರ್ತೆ



ಕೆ.ಎಸ್. ಈಶ್ವರಪ್ಪ

**ಬೆಳಗಾವಿ:** 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೈಗೊಂಡಿರುವ ಜಲಶಕ್ತಿ ಅಭಿಯಾನದ ಅನುಷ್ಠಾನದಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ ದೊರೆತಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಇದಾಗಿದೆ. ಉದ್ಯೋಗ ಖಾತ್ರಿ ಯೋಜನೆಯ ವೆಚ್ಚದಲ್ಲಿ ಶೇ 65ರಷ್ಟನ್ನು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳಿಗೆ ಮೀಸಲಿಡುವುದು ಕಡ್ಡಾಯ' ಎಂದರು.

'ಜಲಶಕ್ತಿ ಅಭಿಯಾನ (ಕ್ಯಾಚ್ ದಿ ರೇನ್) ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 22ರಂದು ಚಾಲನೆ ನೀಡಿದ್ದರು. 2021-22ನೇ ಸಾಲಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಕ್ರಿಯಾಯೋಜನೆಯಲ್ಲಿ ಪ್ರತ್ಯೇಕವಾಗಿ 'ಅಂತರ್ಜಲ ಚೇತನ' ಶೀರ್ಷಿಕೆಯಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳನ್ನು ಅಳವಡಿಸಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

'ಅಭಿಯಾನದಲ್ಲಿ ಈವರೆಗೆ ಜಲ ಸಂರಕ್ಷಣೆಗೆ ಸಂಬಂಧಿಸಿದ 4.87 ಲಕ್ಷ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಅದರಲ್ಲಿ 2.38 ಲಕ್ಷ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಯೋಜನೆಯಡಿ ಈವರೆಗೆ ₹ 2,394.32 ಕೋಟಿ ವೆಚ್ಚ ಮಾಡಲಾಗಿದ್ದು, ಅದರಲ್ಲಿ ಶೇ 82ರಷ್ಟು ಅಂದರೆ ₹ 2,408.50 ಕೋಟಿಯನ್ನು ಜಲಶಕ್ತಿ ಅಭಿಯಾನಕ್ಕೇ ಬಳಸಲಾಗಿದೆ. ಕೇಂದ್ರವು ಆ.10ರಂದು ನೀಡಿರುವ ಪಟ್ಟಿ ಪ್ರಕಾರ, ಪಶ್ಚಿಮ ಬಂಗಾಳ 2ನೇ ಹಾಗೂ ಉತ್ತರ ಪ್ರದೇಶ 3ನೇ ಸ್ಥಾನ ಪಡೆದಿದೆ' ಎಂದು ಹೇಳಿದರು.

'ಉದ್ಯೋಗ ಚೀಟಿ ಪಡೆದಿರುವ 40 ಲಕ್ಷ ಮಂದಿಯು ಸೈನಿಕರಂತೆ ಕೆಲಸ ಮಾಡಿದ್ದರಿಂದ ಸಾಧನೆ ಸಾಧ್ಯವಾಗಿದೆ. ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳೂ ಶ್ರಮಿಸಿದ್ದಾರೆ' ಎಂದು ಶ್ಲಾಘಿಸಿದರು.

'ರಾಜ್ಯದ ಎಲ್ಲ ಕೆರೆಗಳ ಅಭಿವೃದ್ಧಿ ಗುರಿ ಇದೆ. ಬೆಳಗಾವಿ ಜಿಲ್ಲೆಯೊಂದರಲ್ಲೇ 240 ಹೊಸ ಕೆರೆಗಳ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ. ಕಲಬುರ್ಗಿ, ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿ ನೂರಾರು ಕಲ್ಯಾಣಿಗಳ ಕಾಯಕಲ್ಪಕ್ಕೆ ಆದ್ಯತೆ ಕೊಡಲಾಗಿದೆ. ಬೆಳಗಾವಿ, ಗದಗ, ಕಲಬುರ್ಗಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ರೈತರ ಜಮೀನುಗಳಲ್ಲಿ ಬದು ಮತ್ತು ಕೃಷಿ ಹೊಂಡಗಳನ್ನು ಮಾಡಲಾಗಿದೆ. ರಾಯಚೂರಲ್ಲಿ 150 ಗೋಕಟ್ಟೆಗಳನ್ನು ನಿರ್ಮಿಸಲಾಗಿದೆ. ಕರಾವಳಿ ಮತ್ತು ಮಲೆನಾಡಲ್ಲಿ ತೆರೆದಬಾವಿಗಳು ಹಾಗೂ ಬಯಲು ಸೀಮೆಯಲ್ಲಿ ಸಮಗ್ರ ಕೆರೆ ಅಭಿವೃದ್ಧಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ರಾಮನಗರದಲ್ಲಿ ಅರಣ್ಯೀಕರಣಕ್ಕೆ ಒತ್ತು ಕೊಡಲಾಗಿದೆ' ಎಂದು ವಿವರಿಸಿದರು.

**ಕೈಗೊಂಡಿರುವ ಕಾಮಗಾರಿಗಳ ವಿವರ**

| | | | |
|---|---|---|---|
| 72,411 ಕೃಷಿ ಹೊಂಡ | 90,946 ಬದು | 1,37,648 ಮರುಪೂರಣ | 286 ಕಲ್ಯಾಣಿ ಪುನಶ್ಚೇತನ |
| 4,082 ತೆರೆದಬಾವಿ | 55,184 ಸಮಗ್ರ ಕೆರೆ ಅಭಿವೃದ್ಧಿ | 1,12,182 ಅರಣ್ಯೀಕರಣ | 704 ಮಳೆ ನೀರು ಕೊಯ್ಲು |
| 1,262 ನೀರು ಇಂಗಿಸಲು ಕಂದಕಗಳ ನಿರ್ಮಾಣ | | 464 ಚೆಕ್ ಡ್ಯಾಂ | |

**ರಾಜ್ಯದ ಟಾಪ್ 5 ಜಿಲ್ಲೆಗಳು**

| ಜಿಲ್ಲೆ | ಕಾಮಗಾರಿ |
|---|---|
| ತುಮಕೂರು | 29,452 |
| ರಾಮನಗರ | 28,770 |
| ಕಲಬುರ್ಗಿ | 27,126 |
| ರಾಯಚೂರು | 25,826 |
| ಬೆಳಗಾವಿ | 25,422 |

## ಸ್ವ ಸಹಾಯ ಸಂಘಗಳ ಸದಸ್ಯರೊಂದಿಗೆ ಇಂದು ಮೋದಿ ಸಂವಾದ



**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು 'ಆತ್ಮನಿರ್ಭರ ನಾರಿಶಕ್ತಿ ಸೆ ಸಂವಾದ್' ಕಾರ್ಯಕ್ರಮದಲ್ಲಿ ಗುರುವಾರ ಭಾಗಿಯಾಗಲಿದ್ದಾರೆ ಎಂದು ಪ್ರಧಾನ ಮಂತ್ರಿ ಕಚೇರಿಯು ಹೇಳಿದೆ.


ದೀನದಯಾಳ್ ಅಂತ್ಯೋದಯ ಯೋಜನೆ- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್‌ನಡಿಯಲ್ಲಿ- (ಡಿಎವೈ-ಎನ್‌ಆರ್‌ಎಲ್‌ಎಂ) ಬರುವ ಮಹಿಳಾ ಸ್ವ ಸಹಾಯ ಸಂಘಗಳ (ಎಸ್‌ಎಚ್‌ಜಿ) ಸದಸ್ಯರೊಂದಿಗೆ ಪ್ರಧಾನಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತುಕತೆ ನಡೆಸಲಿದ್ದಾರೆ.

ದೇಶದ ಸ್ವಸಹಾಯ ಗುಂಪಿನ ಮಹಿಳೆಯರ ಯಶೋಗಾಥೆಗಳ ಸಂಗ್ರಹವನ್ನು ಬಿಡುಗಡೆಗೊಳಿಸಲಿದ್ದಾರೆ' ಎಂದು ಪ್ರಧಾನಿ ಕಚೇರಿಯು ತಿಳಿಸಿದೆ.

ಅಲ್ಲದೆ 4 ಲಕ್ಷ ಸ್ವಸಹಾಯ ಸಂಘಗಳಿಗೆ ₹1,625 ಕೋಟಿವರೆಗೆ ಬಂಡವಾಳ ಬೆಂಬಲ ನಿಧಿಯನ್ನು ಬಿಡುಗಡೆ ಮಾಡಲಿದ್ದಾರೆ ಎಂದು ಪ್ರಧಾನಿ ಕಚೇರಿ ಪ್ರಕಟಣೆ ಹೇಳಿದೆ.

**ನಿಧನ ವಾರ್ತೆ**

## ಕೂರಾಡಿ ಸದಾಶಿವ ಕಲ್ಕೂರ ನಿಧನ



**ಉಡುಪಿ:** ತಾಳಮದ್ದಲೆ ಅರ್ಥದಾರಿ ಹಾಗೂ ಚಿಂತಕ ಕೂರಾಡಿ ಸದಾಶಿವ ಕಲ್ಕೂರ (86) ಮಂಗಳವಾರ ರಾತ್ರಿ ಅಲೆವೂರಿನಲ್ಲಿ ನಿಧನರಾದರು.

ಮೃತರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಯಕ್ಷಗಾನ ಹಾಗೂ ಸಾಮಾಜಿಕ ಸ್ಥಿತಿ-ಗತಿಗಳ ಕುರಿತು 'ಬಿತ್ತಿದಂತೆ ಬೆಳೆ' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಶಿವರಾಮ ಕಾರಂತ, ಬೈಕಾಡಿ ವೆಂಕಟಕೃಷ್ಣ ರಾವ್, ಗೋಪಾಲಕೃಷ್ಣ ಅಡಿಗರು ಸೇರಿದಂತೆ ಹಲವು ಸಾಹಿತಿಗಳೊಂದಿಗೆ ಸದಾಶಿವ ಕಲ್ಕೂರ ಒಡನಾಟ ಹೊಂದಿದ್ದರು.

ಕೂರಾಡಿಯಲ್ಲಿ 'ಸಂಸ್ಕೃತಿ ಸಂಘ' ಕಟ್ಟಿ ಗ್ರಾಮೀಣ ಭಾಗಕ್ಕೆ ನಾಡಿನ ಶ್ರೇಷ್ಠ ಸಾಹಿತಿಗಳನ್ನು ಕರೆಸಿ ಅವರ ವಿಚಾರಧಾರೆಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಿದ್ದರು. ತಾಳಮದ್ದಲೆಯ ಅರ್ಥಧಾರಿಯಾಗಿ ಕಲಾ ಸೇವೆ ಮಾಡಿದ ಸದಾಶಿವ ಕಲ್ಕೂರ ಅವರನ್ನು ಯಕ್ಷಗಾನ ಕಲಾರಂಗ, ಅಂಬಲಪಾಡಿ ಯಕ್ಷಗಾನ ಸಂಘ ಸೇರಿದಂತೆ ಹಲವಾರು ಸಂಸ್ಥೆಗಳು ಗೌರವಿಸಿದ್ದವು.

# ಕೊರೊನಾ ಸಂಕಷ್ಟದಲ್ಲಿ ಕೈ ಹಿಡಿದ ನುಗ್ಗೆಪುಡಿ

• ಸಿ.ಎಸ್.ನಿರ್ವಾಣ ಸಿದ್ದಯ್ಯ

**ಹೆಸರಘಟ್ಟ:** ಕೊರೊನಾ ಸಂಕಷ್ಟದಲ್ಲಿ ಬೆಳೆದ ಬೆಳೆಗೆ ಮಾರುಕಟ್ಟೆ ಇಲ್ಲದೇ ರೈತರು ಬವಣೆಪಡುತ್ತಿರುವಾಗ ಬ್ಯಾತ ಗ್ರಾಮದ ರೈತ ಬಸವರಾಜು ಅವರು ನುಗ್ಗೆ ಮರಗಳನ್ನು ಬೆಳೆಸಿ ಸಂಕಷ್ಟವನ್ನು ದಿಟ್ಟವಾಗಿ ಎದುರಿಸಿದ್ದಾರೆ.

ಹಲ ಕೃಷಿ ಮೇಳದಲ್ಲಿ ಭಾಗವಹಿಸಿ ಕೃಷಿಯ ಬಗ್ಗೆ ತಿಳಿವಳಿಕೆ ಸಂಪಾದಿಸಿರುವ ಅವರು ತಮ್ಮ ಜಮೀನಿನಲ್ಲಿ ಸಾವಯವ ಕೃಷಿಯ ಮೂಲಕ ಲಾಭದಾಯಕ ಬೆಳೆ ತಮ್ಮದಾಗಿಸಿಕೊಂಡಿದ್ದಾರೆ. ರಾಸಾಯನಿಕ ಗೊಬ್ಬರಗಳನ್ನು ಬಳಸದೇ ಜೀವಾಮೃತದ ಮೂಲಕ ಉತ್ತಮ ಫಸಲನ್ನು ಪಡೆದ ಹೆಗ್ಗಳಿಕೆ ಇವರದ್ದು.

'ದಾಕ್ಷಿ ಮತ್ತು ತೊಂಡೆ ಹಣ್ಣನ್ನು ಬೆಳೆದಿದ್ದೆ. ಎರಡು ಬೆಳೆಗಳಿಗೆ ಲಾಕ್‌ಡೌನ್ ಸಮಯದಲ್ಲಿ ಮಾರುಕಟ್ಟೆ ಸಿಗದೇ ತತ್ತರಿಸಿ ಹೋದೆ. ಒಂದೇ ಒಂದು ಕೆ.ಜಿ. ಮಾರಾಟವಾಗುತ್ತಿರಲಿಲ್ಲ. ಹಣ್ಣುಗಳು ಕೊಳೆತು ಹೋಗುತ್ತಿದ್ದವು. ಹಣ್ಣು ಹಾಳಾಗುವುದು ಬೇಡ ಎಂದು ರಸ್ತೆ ಬದಿಯಲ್ಲಿ ನಿಂತು ಉಚಿತವಾಗಿ ಹಂಚುತ್ತಿದ್ದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಕಷ್ಟವಾಗುತ್ತದೆ ಎಂದು ಪರ್ಯಾಯ ಮಾರ್ಗ ಹುಡುಕುತ್ತಿದ್ದೆ. ಆಗ ನೆರವಿಗೆ ಬಂದಿದ್ದೆ ನುಗ್ಗೆಪುಡಿಯ ಆಲೋಚನೆ' ಎನ್ನುತ್ತಾರೆ ಬಸವರಾಜು.



> **ಕೃಷಿಯಿಂದ ಯಾವ ರೈತನೂ ಹಾಳಾಗಲಾರ. ಕೃಷಿ ನಂಬಿ ಯಾರೂ ಕೆಡುವುದಿಲ್ಲ. ಆಧುನಿಕ ಜಗತ್ತಿನ ಜೊತೆ ಹೆಜ್ಜೆ ಹಾಕಿ ಕೃಷಿಯನ್ನು ಬಳಸಿಕೊಂಡರೆ ಕೈ ತುಂಬಾ ಸಂಪಾದನೆ ಮಾಡಬಹುದು**
> **ಬಸವರಾಜು,** ಬ್ಯಾತ ಗ್ರಾಮದ ರೈತ

'ನುಗ್ಗೆ ಸೊಪ್ಪಿನಲ್ಲಿ ಹೇರಳ ವಿಟಮಿನ್ ಇರುತ್ತದೆ ಎಂದು ಅನೇಕ ಆಯುರ್ವೇದ ವೈದ್ಯರು ಹೇಳಿದ್ದರು. ನುಗ್ಗೆ ಸೊಪ್ಪಿನ ಪುಡಿಯನ್ನು ಟೀ-ಕಾಫಿಯಂತೆ ದಿನಾ ಖಾಲಿ ಹೊಟ್ಟೆಗೆ ಕುಡಿಯುವುದರಿಂದ ದೇಹದಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ. ಕೊರೊನಾದ ಸಮಯದಲ್ಲಿ ನುಗ್ಗೆಪುಡಿಯನ್ನು ಜನರಿಗೆ ನೀಡಿದರೆ ಒಳಿತಾಗುತ್ತದೆ ಎಂದು ಆಲೋಚನೆ ಮಾಡಿ ನುಗ್ಗೆ ಮರಗಳನ್ನು ಬೆಳೆಸಲು ತೀರ್ಮಾನಿಸಿದೆ. ಒಂದು ಎಕರೆ ಪ್ರದೇಶದಲ್ಲಿ ನುಗ್ಗೆ ಮರಗಳನ್ನು ಹಾಕಿದೆ. ಜೀವಾಮೃತವನ್ನು ತಯಾರಿಸಿ ಗಿಡಗಳಿಗೆ ನೀಡಿದೆ. ಸಾವಯವ ಕೃಷಿಯ ಮೂಲಕ ನುಗ್ಗೆ ಗಿಡಗಳನ್ನು ಸಮೃದ್ಧವಾಗಿ ಬೆಳೆದೆ. ನುಗ್ಗೆ ಎಲೆಗಳನ್ನು ಕಿತ್ತು ಒಣಗಿಸಿ ಯಂತ್ರದಿಂದ ಪುಡಿ ಮಾಡಿ ಕೊಡಲು ಪ್ರಾರಂಭಿಸಿದೆ. ಸಾಕಷ್ಟು ಜನರು ಬಂದು ತೆಗೆದುಕೊಳ್ಳಲು ಪ್ರಾರಂಭಿಸಿದರು. ಅನೇಕ ಆಯುರ್ವೇದ ಕಂಪನಿಗಳು ತಾವೇ ಮುಂದೆ ಬಂದು ನುಗ್ಗೆಪುಡಿಯನ್ನು ಖರೀದಿ ಮಾಡಿದವು' ಎಂದರು.



ನುಗ್ಗೆ ಪುಡಿ

'ಈಗ ವಾರಕ್ಕೆ 500 ಕೆ.ಜಿ.ಯಷ್ಟು ನುಗ್ಗೆಪುಡಿಯನ್ನು ಮಾರಾಟ ಮಾಡುತ್ತಿದ್ದೇನೆ. ಕೊರೊನಾ ಸಮಯದಲ್ಲಿ ನಷ್ಟವಾಗಿದ್ದ ಎಲ್ಲವನ್ನೂ ಇದರಿಂದ ತುಂಬಿಕೊಂಡಿದ್ದೇನೆ' ಎನ್ನುವುದು ಅವರ ವಿಶ್ವಾಸದ ಮಾತು.

'ಬಸವರಾಜು ಅವರು ಓದಿದ್ದು ತುಂಬಾ ಕಡಿಮೆ. ಆದರೆ, ಕೃಷಿ ಮೇಳಗಳ ಮೂಲಕ ಅವರು ಕೃಷಿ ಬಗ್ಗೆ ತುಂಬಾ ಕಲಿತು ಕೊಂಡಿದ್ದಾರೆ. ಹಾಗಾಗಿ ಅವರು ಸದಾ ಪ್ರಯೋಗಶೀಲತೆ ಇರುವ ನಮ್ಮ ಗ್ರಾಮದ ರೈತ' ಎನ್ನುತ್ತಾರೆ ಗ್ರಾಮದ ನಿವಾಸಿ ಜಯಸಿಂಹ.

ಪ್ರಜಾವಾಣಿ ವಿಶೇಷ

ವಿಟಿಯು: ಮುಖ್ಯ ಪದವಿ ಜೊತೆ 'ಉಪ ಪದವಿ'

# ಎಂಜಿನಿಯರಿಂಗ್ ಜೊತೆ ಸಂಗೀತ, ಯೋಗ

• ಎಂ. ಮಹೇಶ

**ಬೆಳಗಾವಿ:** ಎಂಜಿನಿಯರಿಂಗ್‌ನ ಮುಖ್ಯ ಪದವಿಯೊಂದಿಗೆ 'ಉಪ ಪದವಿ' (ಮೈನರ್ ಡಿಗ್ರಿ) ಕೋರ್ಸ್‌ಗಳನ್ನು ಪರಿಚಯಿಸಲು ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಯೋಜಿಸಿದೆ.

ಎಂಜಿನಿಯರಿಂಗ್ (ಬಿಇ) ಕೋರ್ಸ್‌ಗಳ ಜೊತೆಗೆ ಸಂಗೀತ, ಯೋಗ, ಲಲಿತಕಲೆ, ಭೂಗೋಳ ವಿಜ್ಞಾನ, ಕನ್ನಡ ಸಾಹಿತ್ಯ, ಬೌದ್ಧಿಕ ಆಸ್ತಿ ಹಕ್ಕು, ಸಮಾಜವಿಜ್ಞಾನ, ಇತಿಹಾಸ, ರಾಜಕೀಯ ವಿಜ್ಞಾನ, ಕೃತಕ ಬುದ್ಧಿಮತ್ತೆ, ರೊಬೊಟಿಕ್ಸ್, ಸಾಮಾಜಿಕ ಎಂಜಿನಿಯರಿಂಗ್, ಸೈಬರ್ ಕ್ರೈಂ ಮೊದಲಾದ ಕೋರ್ಸ್‌ಗಳಲ್ಲಿ ಹೆಚ್ಚುವರಿಯಾಗಿ ಪದವಿ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ.

ಬಿ.ಇ 4ನೇ ಸೆಮಿಸ್ಟರ್ ಮುಗಿಸಿ ವಿಶ್ವವಿದ್ಯಾಲಯದಿಂದ ನಿರ್ದಿಷ್ಟ ಅಂಕಗಳನ್ನು ಗಳಿಸಿದವರಿಗೆ ಉಪ ಪದವಿಯ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ ವಿಷಯ ತೆಗೆದುಕೊಳ್ಳಬಹುದು. ಆಯಾ ಕಾಲೇಜಿನಲ್ಲಿ ಸೌಲಭ್ಯವಿದ್ದರೆ ಅಲ್ಲೇ ಪರೀಕ್ಷೆ ಎದುರಿಸಬಹುದು ಅಥವಾ ಆನ್‌ಲೈನ್‌ನಲ್ಲಿ ತೆಗೆದುಕೊಳ್ಳಬಹುದು. ಈ ಸಂಬಂಧ ಪ್ರಸ್ತಾವ ಸಿದ್ಧಪಡಿಸಲಾಗಿದ್ದು, ಅನುಮೋದನೆಗಾಗಿ ರಾಜ್ಯ ಉನ್ನತ ಶಿಕ್ಷಣ ಸಂಶೋಧನಾ ಪರಿಷತ್‌ಗೆ ಕಳುಹಿಸಲಾಗಿದೆ. ಮುಂದಿನ ಶೈಕ್ಷಣಿಕ ಸಾಲಿನಿಂದ ಪರಿಚಯಿಸುವ ಉದ್ದೇಶ ವಿಶ್ವವಿದ್ಯಾಲಯದ್ದಾಗಿದೆ.

**ಮುಖ್ಯಾಂಶಗಳು**

- ವಿವಿಧ ವಿಷಯ ಆಯ್ಕೆಗೆ ಅವಕಾಶ
- ಬಹುಶಿಸ್ತೀಯ ಸಂಪನ್ಮೂಲ ಪದವೀಧರರ ತಯಾರಿ ಉದ್ದೇಶ



> **ಕೈಗಾರಿಕೆ ಹಾಗೂ ಔದ್ಯೋಗಿಕ ಜಗತ್ತಿನ ಬೇಡಿಕೆಗೆ ತಕ್ಕಂತೆ ವಿದ್ಯಾರ್ಥಿಗಳನ್ನು ರೂಪಿಸುವ ಉದ್ದೇಶ ಈ ಕ್ರಮದ್ದಾಗಿದೆ. ಆನ್‌ಲೈನ್ ವೇದಿಕೆಯ ಅವಕಾಶವನ್ನೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುವುದು**
> **ಡಾ.ಕರಿಸಿದ್ದಪ್ಪ,** ಕುಲಪತಿ, ವಿಟಿಯು




ಬೆಳಗಾವಿಯಲ್ಲಿರುವ ವಿಟಿಯು 'ಜ್ಞಾನಸಂಗಮ' ಕ್ಯಾಂಪಸ್

ನಾಲ್ಕು ಸೆಮಿಸ್ಟರ್ ಮುಗಿಸಿದವರು ತಮ್ಮ ಮುಖ್ಯ ಪದವಿಯ ವಿಷಯಗಳೊಂದಿಗೆ, ತಮ್ಮ ಆಸಕ್ತಿಯ ಇತರ ವಿಷಯದ ಆರು ಪತ್ರಿಕೆಗಳಲ್ಲಿ ಉತ್ತೀರ್ಣರಾಗಬೇಕಾಗುತ್ತದೆ. ಇದರೊಂದಿಗೆ ಏಕಕಾಲದಲ್ಲಿ ಎರಡು ಪದವಿ ಪಡೆಯಬಹುದಾಗಿದೆ.

'ಪ್ರತಿ ಬ್ರಾಂಚ್‌ನಲ್ಲೂ ಅವಕಾಶ ಇರುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ, ಕೌಶಲ ಹೊಂದಿದ 'ಬಹುಶಿಸ್ತೀಯ ಅಧ್ಯಯನ ಸಂಪನ್ಮೂಲ ಪದವೀಧರ'ರನ್ನು ತಯಾರಿಸಬೇಕು ಎನ್ನುವ ಉದ್ದೇಶ ಹೊಂದಲಾಗಿದೆ. ಇದಕ್ಕೆ ಪೂರಕವಾಗಿ ಹೆಚ್ಚುವರಿ ವಿಷಯಗಳ ಕಲಿಕೆಗೆ ಅನುವು ಮಾಡಿಕೊಡಲಾಗುತ್ತಿದೆ' ಎಂದು ಕುಲಪತಿ ಡಾ. ಕರಿಸಿದ್ದಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ತೇರ್ಗಡೆಯಾದವರಿಗೆ ಹೆಚ್ಚುವರಿಯಾಗಿ ಅಭ್ಯಸಿಸಿದ ಪದವಿಯನ್ನೂ ನೀಡಲಾಗುವುದು. ಸಾಮಾನ್ಯ ಪದವಿಯೊಂದಿಗೆ ಹೆಚ್ಚುವರಿ ವಿಷಯ ಜ್ಞಾನ ಇದ್ದವರಿಗೆ ಔದ್ಯೋಗಿಕ ಜಗತ್ತಿನಲ್ಲಿ ಹೆಚ್ಚಿನ ಮೌಲ್ಯವಿರುತ್ತದೆ. ಸಂಬಂಧಿಸಿದ ವೃತ್ತಿಯಲ್ಲಿ ಹೆಚ್ಚುವರಿ ತರಬೇತಿ ಪಡೆಯುವ ಅವಶ್ಯಕತೆ ಇರುವುದಿಲ್ಲ. ಕೌಶಲ ಉಳ್ಳವರಿಗೆ ಅಥವಾ ಬಹುಶಿಸ್ತೀಯ ಜ್ಞಾನ ಇರುವವರಿಗೆ ಕೈಗಾರಿಕೆಗಳು ಹೆಚ್ಚಿನ ಒತ್ತು ಕೊಡುತ್ತವೆ. ಉತ್ತಮ ಅವಕಾಶಗಳಿಗೂ ನೆರವಾಗಲಿದೆ' ಎನ್ನುತ್ತಾರೆ ಅವರು.

ಗಡುವಿಗೆ ಎರಡು ದಿನ ಮೊದಲೇ ಸಂಸತ್ತಿನ ಮುಂಗಾರು ಅಧಿವೇಶನ ಮೊಟಕು

# ಕೋಲಾಹಲ, ಗದ್ದಲದ ಸಂಸತ್ ಕಲಾಪ ಅಂತ್ಯ

ನವದೆಹಲಿ: ಗದ್ದಲ–ಕೋಲಾಹಲವನ್ನೇ ಹೆಚ್ಚು ಕಂಡ ಸಂಸತ್ತಿನ ಮುಂಗಾರು ಅಧಿವೇಶನವು ನಿಗದಿತ ಅವಧಿಗೆ ಎರಡು ದಿನ ಮುಂಚೆಯೇ ಬುಧವಾರ ಕೊನೆಗೊಂಡಿತು. ಪೆಗಾಸಸ್ ಕುತಂತ್ರಾಂಶ ಬಳಸಿ ನಡೆದಿದೆ ಎನ್ನಲಾದ ಬೇಹುಗಾರಿಕೆ ಮತ್ತು ಇತರ ವಿಚಾರಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಭಾರಿ ಪ್ರತಿಭಟನೆಯನ್ನು ಮುಂಗಾರು ಅಧಿವೇಶನದಲ್ಲಿ ನಡೆಸಿದ್ದರು.

ರಾಜ್ಯಸಭೆಯಲ್ಲಿ ಮಂಗಳವಾರವೂ ಗದ್ದಲದ ವಾತಾವರಣ ಇತ್ತು. ವಿರೋಧ ಪಕ್ಷಗಳ ಸದಸ್ಯರು ವರದಿಗಾರರ ಮೇಜಿನ ಮೇಲೆ ಹತ್ತಿದ್ದರು. ಕಾಂಗ್ರೆಸ್ ಸದಸ್ಯ ಪ್ರತಾಪ್ ಸಿಂಗ್ ಬಾಜ್ವಾ ಅವರು ಹಾಳೆಗಳನ್ನು ಇದ್ದ ಕಡತವನ್ನು ಸಭಾಪತಿ ಪೀಠಕ್ಕೆ ಎಸೆದಿದ್ದರು. ಆಗ ಸಭಾಪತಿಯವರು ಪೀಠದಲ್ಲಿ ಇರಲಿಲ್ಲ.

ಲೋಕಸಭೆಯ ಕಾರ್ಯಕ್ಷಮತೆಯು ಶೇ 22ರಷ್ಟು ಮಾತ್ರ ಎಂದು ಸ್ಪೀಕರ್ ಓಂ ಬಿರ್ಲಾ ಅವರು ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಮುನ್ನ ಹೇಳಿದ್ದರು.

ಲೋಕಸಭೆಯಲ್ಲಿ 21 ಗಂಟೆ 14 ನಿಮಿಷದ ಕಲಾಪ ಮಾತ್ರ ನಡೆದಿದೆ. 74 ಗಂಟೆ 46 ನಿಮಿಷವು ವ್ಯರ್ಥವಾಗಿತ್ತು. ರಾಜ್ಯಸಭೆಯ 104 ಗಂಟೆಗಳ ಕಲಾಪದಲ್ಲಿ ಕೆಲಸ ಆಗಿದ್ದು 28 ಗಂಟೆ 21 ನಿಮಿಷ ಮಾತ್ರ.

17ನೇ ಲೋಕಸಭೆಯಲ್ಲಿ ಅತಿ ಹೆಚ್ಚು ಗದ್ದಲ ನಡೆದ ಅಧಿವೇಶನ ಇದು ಎಂದು ಲೋಕಸಭೆಯ ಕಾರ್ಯಾಲಯ ಹೇಳಿದೆ. 13 ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ. 127ನೇ ಸಂವಿಧಾನ ತಿದ್ದುಪಡಿ ಮಸೂದೆ ಸೇರಿ ಹಲವು ಮಸೂದೆಗಳು ಅಂಗೀಕಾರ ಆಗಿವೆ. ರಾಜ್ಯಸಭೆ ಕೂಡ ಈ ಬಾರಿ ಭಾರಿ ಗದ್ದಲಕ್ಕೆ ಸಾಕ್ಷಿಯಾಗಿದೆ.

## ವಿಮಾ ಮಸೂದೆ: ಮತ್ತೆ ಸಂಘರ್ಷ

ನವದೆಹಲಿ: ಒಬಿಸಿ ಮಸೂದೆ ಬಗ್ಗೆ ಬುಧವಾರ ಸುಮಾರು 6 ಗಂಟೆಗಳ ಕಾಲ ಶಾಂತಿಯುತ ಚರ್ಚೆ ನಡೆಸಿದ ರಾಜ್ಯಸಭೆ ಇದ್ದಕ್ಕಿದ್ದಂತೆ ಕೋಲಾಹಲಕ್ಕೆ ಸಾಕ್ಷಿಯಾಯಿತು. ವಿಮಾ ವಲಯದ ವಿವಾದಾತ್ಮಕ ಮಸೂದೆಯನ್ನು ಕೈಗೆತ್ತಿಕೊಂಡಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಪ್ರತಿಪಕ್ಷಗಳ ಸದಸ್ಯರು ಮೇಜು ಹತ್ತಿದರು. ಮಾರ್ಷಲ್‌ಗಳು ಅವರನ್ನು ಕೆಳಗಿಳಿಸಲು ಯತ್ನಿಸಿದರು.

ಸದನದ ಒಳಗೆ ಪ್ರತಿಭಟನೆ ನಡೆಸುತ್ತಿದ್ದಾಗ ಮಹಿಳಾ ಸದಸ್ಯರ ಜತೆ ಮಾರ್ಷಲ್‌ಗಳು ಗೌರವಯುತವಾಗಿ ನಡೆದುಕೊಂಡಿಲ್ಲ ಎಂದು ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಆರೋಪಿಸಿದರು. ಈ ಆರೋಪವನ್ನು ಸದನ ನಾಯಕ ಪೀಯೂಷ್ ಗೋಯಲ್ ನಿರಾಕರಿಸಿದರು. ವಿರೋಧ ಪಕ್ಷಗಳ ಸಂಸದರ ವರ್ತನೆ ಬಗ್ಗೆ ಸರಿಯಾದ ತನಿಖೆ ನಡೆಯಬೇಕು ಎಂದು ಅವರು ಒತ್ತಾಯಿಸಿದರು.

‘ಜಿಐಸಿಯನ್ನು ಖಾಸಗೀಕರಣಗೊಳಿಸುವ ವಿಮಾ ತಿದ್ದುಪಡಿ ಮಸೂದೆಯನ್ನು ರಾಜ್ಯಸಭೆಯಲ್ಲಿ ದೊಡ್ಡ ಸಂಖ್ಯೆಯ ಭದ್ರತಾ ಸಿಬ್ಬಂದಿ ನಿಯೋಜಿಸಿ ಅಂಗೀಕರಿಸಲಾಯಿತು. ಮಸೂದೆಯನ್ನು ಆಯ್ಕೆ ಸಮಿತಿಗೆ ಕಳುಹಿಸುವಂತೆ ಬಿಜೆಪಿಗೆ ಆಪ್ತವಾಗಿರುವ ಪಕ್ಷಗಳೂ ಸೇರಿದಂತೆ ಪ್ರತಿಪಕ್ಷಗಳು ಇಟ್ಟಿದ್ದ ಬೇಡಿಕೆಯನ್ನು ಸರ್ಕಾರ ತಿರಸ್ಕರಿಸಿತು. ಈ ದಿನ ನಡೆದ ಘಟನೆಯು ದೌರ್ಜನ್ಯವನ್ನು ಮೀರಿದ್ದು’ ಎಂದು ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

‘ಮಹಿಳಾ ಸಂಸದರ ಮೇಲೆ ಇಂದು ರಾಜ್ಯಸಭೆಯಲ್ಲಿ ನಡೆದ ದಾಳಿ ಘಟನೆಯನ್ನು ನನ್ನ 55 ವರ್ಷಗಳ ಸಂಸದೀಯ ವೃತ್ತಿಜೀವನದಲ್ಲಿ ನೋಡಿಲ್ಲ. ಹೊರಗಿನಿಂದ 40ಕ್ಕೂ ಹೆಚ್ಚು ಪುರುಷರು ಮತ್ತು ಮಹಿಳೆಯರನ್ನು ಸದನಕ್ಕೆ ಕರೆತರಲಾಯಿತು. ಇದು ನೋವಿನ ಸಂಗತಿಯಾಗಿದ್ದು, ಇದು ಪ್ರಜಾಪ್ರಭುತ್ವದ ಮೇಲಿನ ದಾಳಿ’ ಎಂದು ಎನ್‌ಸಿಪಿ ನಾಯಕ ಶರದ್ ಪವಾರ್ ಅವರು ಸದನದ ಹೊರಗೆ ಹೇಳಿದರು.



ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಸ್ಪೀಕರ್ ಓಂ ಬಿರ್ಲಾ ಅವರನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಇತರರು ಭೇಟಿಯಾದರು ಪಿಟಿಐ ಚಿತ್ರ

## ಮಸೂದೆಗೆ ಸಂಸತ್ ಒಪ್ಪಿಗೆ

ನವದೆಹಲಿ: ಇತರ ಹಿಂದುಳಿದ ವರ್ಗಗಳನ್ನು (ಒಬಿಸಿ) ಗುರುತಿಸುವ ಅಧಿಕಾರವನ್ನು ರಾಜ್ಯಗಳಿಗೆ ಕೊಡುವುದಕ್ಕೆ ಬೇಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮಸೂದೆಯು ಸಂಸತ್ತಿನ ಅಂಗೀಕಾರ ಪಡೆದುಕೊಂಡಿದೆ.

ರಾಜ್ಯಸಭೆಯು ಮಸೂದೆಗೆ ಅವಿರೋಧವಾಗಿ ಬುಧವಾರ ಅನುಮೋದನೆ ನೀಡಿದೆ. ಲೋಕಸಭೆಯಲ್ಲಿ ಈ ಮಸೂದೆಯು ಮಂಗಳವಾರವೇ 187–0 ಮತಗಳಿಂದ ಅಂಗೀಕಾರ ಆಗಿತ್ತು. ರಾಜ್ಯಸಭೆಯಲ್ಲಿ ಮಸೂದೆಯ ಬಗ್ಗೆ ಸುಮಾರು ಐದೂವರೆ ತಾಸು ಚರ್ಚೆ ನಡೆಯಿತು. ಖಾಸಗಿ ಕ್ಷೇತ್ರವನ್ನೂ ಮೀಸಲಾತಿ ವ್ಯಾಪ್ತಿಗೆ ತರಬೇಕು ಎಂಬ ಒತ್ತಾಯ ಚರ್ಚೆಯಲ್ಲಿ ಕೇಳಿ ಬಂತು.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರ ಕುಮಾರ್ ಅವರು ಚರ್ಚೆಗೆ ಉತ್ತರಿಸುತ್ತಾ, ಸಂಸತ್ತು ಮಸೂದೆಯನ್ನು ಅವಿರೋಧವಾಗಿ ಅನುಮೋದಿಸಿದ ದಿನವು ಚರಿತ್ರಾರ್ಹ ಎಂದು ಹೇಳಿದರು.

ಖಾಸಗಿ ಕ್ಷೇತ್ರದಲ್ಲಿಯೂ ಮೀಸಲಾತಿ ನೀತಿ ಅನ್ವಯ ಆಗಬೇಕು ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು. ಸರ್ಕಾರದ ನೀತಿಗಳಿಂದಾಗಿ ಸಾರ್ವಜನಿಕ ವಲಯದಲ್ಲಿ ಅವಕಾಶಗಳು ಕಡಿಮೆಯಾಗುತ್ತಿವೆ ಎಂದರು. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯ ಮಸೂದೆಯನ್ನು ತನ್ನಿ. ಆ ಮಸೂದೆಯನ್ನೂ ಬೆಂಬಲಿಸುತ್ತೇವೆ ಎಂದು ಖರ್ಗೆ ಭರವಸೆ ಕೊಟ್ಟರು. ಹಿಂದುಳಿದ ವರ್ಗಗಳ ಏಳಿಗೆಗೆ ಕಾಂಗ್ರೆಸ್ ಪಕ್ಷವು ಮಾಡಿದ್ದು ಸಾಲದು ಎಂದು ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ಟೀಕಿಸಿದರು. ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಜನಸಂಘ ಅಥವಾ ಬಿಜೆಪಿ ನೇತೃತ್ವದ ಸರ್ಕಾರಗಳೇ ಕಾರಣ. ನರೇಂದ್ರ ಮೋದಿ ಅವರಲ್ಲದೆ ಬೇರೆ ಯಾರೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ಸಮುದಾಯಗಳ ಪರ ಕೆಲಸ ಮಾಡುವುದಿಲ್ಲ ಎಂದು ಅವರು ಹೇಳಿದರು.

**ದಲಿತರಿಗಾಗಿ ಏನನ್ನಾದರೂ ಮಾಡಲು ನಿಜವಾಗಿಯೂ ಬಯಸಿದ್ದರೆ, ಮೀಸಲಾತಿ ಮಿತಿ ತೆಗೆದುಹಾಕಿ. ಇದು ಚುನಾವಣೆ ದೃಷ್ಟಿಯ ಕಣ್ಣೊರೆಸುವ ತಂತ್ರ ಆಗಬಾರದು**

**ಸಂಜಯ್ ಸಿಂಗ್,** ಎಎಪಿ ಸಂಸದ

**ದೇಶದಲ್ಲಿ ಜಾತಿ ಗಣತಿಯು ಒಂದು ಕ್ರಾಂತಿಕಾರಿ ಪ್ರಕ್ರಿಯೆಯಾಗಿದೆ. ಹಲವಾರು ರಾಜ್ಯಗಳು ಈಗಾಗಲೇ ಅದರ ಆಧಾರದ ಮೇಲೆ ಮೀಸಲಾತಿ ವಿಸ್ತರಿಸಿವೆ**

**ಧರ್ಮೇಂದ್ರ ಪ್ರಧಾನ್,** ಶಿಕ್ಷಣ ಸಚಿವ

**ಮೀಸಲಾತಿ ಮೇಲಿನ ಶೇ 50ರ ಮಿತಿ ತೆಗೆಯದಿದ್ದರೆ, ವಂಚಿತ ವರ್ಗಗಳಿಗೆ ಪ್ರಯೋಜನ ಒದಗಿಸುವುದು ರಾಜ್ಯಗಳಿಗೆ ದೊಡ್ಡ ಸವಾಲಾಗಲಿದೆ**

**ವಂದನಾ ಚವಾಣ್,** ಎನ್‌ಸಿಪಿ ಸಂಸದ

## ಮೀಸಲಾತಿ ಮಿತಿ ತೆರವು, ಜಾತಿ ಗಣತಿಗೆ ಒತ್ತಾಯ

ನವದೆಹಲಿ (ಪಿಟಿಐ): ಸಂವಿಧಾನವು ನೀಡಿರುವ ಸೌಲಭ್ಯಗಳ ಗರಿಷ್ಠ ಪ್ರಯೋಜನಗಳನ್ನು ಪಡೆಯಲು ಜಾತಿ ಗಣತಿ ನಡೆಸುವುದು ಮತ್ತು ಮೀಸಲಾತಿ ಮೇಲಿನ ಶೇ 50ರ ಮಿತಿಯನ್ನು ತೆಗೆದುಹಾಕುವ ಅಗತ್ಯವಿದೆ ಎಂದು ರಾಜ್ಯಸಭಾ ಸದಸ್ಯರು ಬುಧವಾರ ಹೇಳಿದರು.

ಸಂವಿಧಾನದ 127ನೇ ತಿದ್ದುಪಡಿ ಮಸೂದೆಯು ರಾಜ್ಯಗಳಿಗೆ ತಮ್ಮ ವ್ಯಾಪ್ತಿಯಲ್ಲಿರುವ ಒಬಿಸಿಗಳ ಪಟ್ಟಿಯನ್ನು ತಿದ್ದುಪಡಿ ಮಾಡುವ ಅಧಿಕಾರವನ್ನು ಒದಗಿಸುತ್ತದೆ.

ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಎಸ್‌ಪಿ ನಾಯಕ ರಾಮ್ ಗೋಪಾಲ್ ಯಾದವ್, ‘ಒಬಿಸಿಗಳ ಪಟ್ಟಿಯನ್ನು ತಿದ್ದುಪಡಿ ಮಾಡುವ ಹಕ್ಕನ್ನು ರಾಜ್ಯವು ಪಡೆಯುತ್ತದೆ. ಆದರೆ ಮೀಸಲಾತಿಯ ಮೇಲಿನ ಶೇ 50ರ ಮಿತಿಯನ್ನು ತೆಗೆದುಹಾಕಿದಾಗ ಮಾತ್ರ ಈ ತಿದ್ದುಪಡಿಯ ಗರಿಷ್ಠ ಲಾಭ ಪಡೆಯಲು ಸಾಧ್ಯವಾಗುತ್ತದೆ’ ಎಂದು ಪ್ರತಿಪಾದಿಸಿದರು.

ವಂಚಿತ ವರ್ಗಗಳಿಗೆ ಈ ತಿದ್ದುಪಡಿಯ ಲಾಭ ದೊರೆಯಬೇಕಾದರೆ, ಜಾತಿ– ಆರ್ಥಿಕ ಗಣತಿ ನಡೆಸುವ ಅಗತ್ಯವಿದೆ ಎಂದು ಅವರು ಹೇಳಿದರು. ವಂಚಿತ ಸಮುದಾಯದ ಜನರ ಶಿಕ್ಷಣ, ಮನೆಯ ಸ್ಥಿತಿಗತಿಯು ಗಣತಿಯಿಂದ ಲಭ್ಯವಾಗಲಿದ್ದು, ಅವರಿಗಾಗಿ ಸರ್ಕಾರಿ ನೀತಿಗಳು ಮತ್ತು ಯೋಜನೆಗಳನ್ನು ತಯಾರಿಸಲು ಸಾಧ್ಯವಾಗುತ್ತದೆ ಎಂದರು. ಮಸೂದೆಯನ್ನು ಅಂಗೀಕರಿಸಿದ ನಂತರ, ಉತ್ತರ ಪ್ರದೇಶದ ಒಬಿಸಿಗಳ ಪಟ್ಟಿಯಿಂದ ಯಾದವರು, ಕುರ್ಮಿಗಳು ಮತ್ತು ಗುಜ್ಜಾರ್ ಸಮುದಾಯಗಳನ್ನು ತೆಗೆದುಹಾಕಲಾಗುತ್ತದೆ ಎಂಬ ಭೀತಿ ಇದೆ ಎಂದು ಅವರ ಸದನದ ಗಮನ ಸೆಳೆದರು.

ಆರ್‌ಜೆಡಿಯ ಮನೋಜ್ ಕುಮಾರ್ ಝಾ ಅವರು ಮಸೂದೆಯನ್ನು ಬೆಂಬಲಿಸಿದರು. ಆದರೆ ಜಾತಿ–ಆರ್ಥಿಕ ಗಣತಿಯ ಅಗತ್ಯವಿದೆ ಎಂದು ಒತ್ತಾಯಿಸಿದರು. ಸರ್ಕಾರವು ಈ ಮಸೂದೆಯನ್ನು ಬಲವಂತದಿಂದ ತಂದಿದೆ ಎಂದ ಸಿಪಿಎಂ ನಾಯಕ ಎಲಮರಂ ಕರೀಮ್ ಅವರು, ಮೀಸಲಾತಿಯ ಅಡಿಯಲ್ಲಿ ಕ್ರೈಸ್ತ ದಲಿತರನ್ನು ಒಳಗೊಳ್ಳದಿರುವ ವಿಷಯ ಪ್ರಸ್ತಾಪಿಸಿದರು.

### ಖಾಲಿ ಹುದ್ದೆ ಪ್ರಸ್ತಾಪ

ಎಸ್‌ಪಿ ನಾಯಕ ರಾಮ್ ಗೋಪಾಲ್ ಯಾದವ್ ಅವರು ಶಿಕ್ಷಣ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳ ಕಡೆಗೆ ಗಮನ ಸೆಳೆದರು. 2020ರ ಆಗಸ್ಟ್ 1ರ ಮಾಹಿತಿ ಪ್ರಕಾರ, 40 ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ 313 ಒಬಿಸಿ ಮೀಸಲು ಪ್ರಾಧ್ಯಾಪಕರ ಹುದ್ದೆಗಳ ಪೈಕಿ ಕೇವಲ 9 ಹುದ್ದೆಗಳು ಮಾತ್ರ ಭರ್ತಿಯಾಗಿವೆ ಎಂದರು. ಇದೇ ಅಭಿಪ್ರಾಯಕ್ಕೆ ದನಿಗೂಡಿಸಿದ ಜೆಡಿಯು ಪಕ್ಷದ ರಾಮನಾಥ ಠಾಕೂರ್ ಅವರು, ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಖಾಲಿ ಹುದ್ದೆಗಳ ಬಗ್ಗೆ ಪ್ರಸ್ತಾಪಿಸಿದರು.

ಮಸೂದೆಯನ್ನು ಬೆಂಬಲಿಸಿ ಕಾಂಗ್ರೆಸ್ ಸಂಸದೆ ರಾಜಮಣಿ ಪಟೇಲ್ ಮಾತನಾಡಿ, ದೇಶವು ಶೇ 52ರಷ್ಟು ಒಬಿಸಿ ಜನಸಂಖ್ಯೆ ಹೊಂದಿದ್ದು, ಮೀಸಲಾತಿ ನೀಡುವ ಸರ್ಕಾರದ ಉದ್ದೇಶವನ್ನು ಪ್ರಶ್ನಿಸಿದರು. ಜಾತಿ ಆಧಾರಿತ ಜನಗಣತಿ ಮಾಡುವಂತೆ ಒತ್ತಾಯಿಸಿದರು.

ಶೈಕ್ಷಣಿಕ ಮತ್ತು ಸಾಮಾಜಿಕ ರಚನೆಯಿಂದ ಹಿಂದುಳಿದ ಜನರಿಗೆ ಆಗಿರುವ ಅನ್ಯಾಯಕ್ಕೆ ಪರಿಹಾರ ಒದಗಿಸಲು ಈ ಮಸೂದೆಯು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೆರವಾಗುತ್ತದೆ ಎಂದು ಬಿಜೆಪಿ ನಾಯಕ ಹರನಾಥ್ ಸಿಂಗ್ ಯಾದವ್ ಅವರು ಹೇಳಿದರು.

‘ಸಂಸತ್ತು ಎಲ್ಲರಿಗೂ ಅಧಿಕಾರವನ್ನು ನೀಡಿದೆ. ಈ ಮಸೂದೆಯಲ್ಲಿ ಯಾವುದೇ ಅಸ್ಪಷ್ಟತೆ ಇಲ್ಲ ಮತ್ತು ಸರ್ಕಾರವು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ’ ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹೇಳಿದರು.

‘ತಮಿಳುನಾಡಿನಲ್ಲಿ ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ವರ್ಗದ ಎಲ್ಲ ಸಮುದಾಯಗಳಿಗೆ ಶೇ 69ರಷ್ಟು ಮೀಸಲಾತಿ ನೀಡಲಾಗಿದೆ. ಆದರೆ ಅದನ್ನು ಉಳಿಸಿಕೊಳ್ಳಬೇಕು. ಶೇ 50ರಷ್ಟು ಮೀಸಲಾತಿ ದಾಟಲು ಸಾಧ್ಯವಿಲ್ಲ ಎಂಬ ನಿಯಮವಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು‘ ಎಂದು ಎಐಡಿಎಂಕೆ ಸದಸ್ಯ ಎಂ.ತಂಬಿದೊರೈ ಆಗ್ರಹಿಸಿದರು.

## ಸುದ್ದಿ 2 ನಿಮಿಷ

### ಸಂತ್ರಸ್ತೆಯ ಗುರುತು ಬಹಿರಂಗಪಡಿಸಿದ ಆರೋಪ: ರಾಹುಲ್ ವಿರುದ್ಧ ವಿಚಾರಣೆ

ನವದೆಹಲಿ: ದೆಹಲಿಯಲ್ಲಿ ನಡೆದ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸಿದ ಆರೋಪದಡಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ಸೆಪ್ಟೆಂಬರ್ 27ರಂದು ನಡೆಸುವುದಾಗಿ ದೆಹಲಿ ಹೈಕೋರ್ಟ್ ಬುಧವಾರ ಹೇಳಿದೆ.

ಆಗಸ್ಟ್ 1 ರಂದು ದೆಹಲಿಯ ಓಲ್ಡ್ ನಂಗಲ್ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಬಾಲಕಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಳು. ಬಾಲಕಿಯ ಮೇಲೆ ಅತ್ಯಾಚಾರ ನಡೆದಿದೆ ಎಂದು ಕುಟುಂಬದವರು ದೂರಿದ್ದರು. ಈ ಸಂಬಂಧ ರಾಹುಲ್ ಗಾಂಧಿ ಅವರು ಸಂತ್ರಸ್ತೆಯ ಕುಟುಂಬಸ್ಥರ ಜೊತೆಗಿನ ಫೋಟೊವನ್ನು ಟ್ವೀಟ್ ಮಾಡಿದ್ದರು.

ಈ ಸಂಬಂಧ ಮಕರಂದ್ ಸುರೇಶ್ ಮಡ್ಲೇಕರ್ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

‘ಸಂತ್ರಸ್ತೆಯ ಕುಟುಂಬಸ್ಥರ ಜೊತೆಗಿನ ಫೋಟೊವನ್ನು ಹಂಚಿಕೊಳ್ಳುವ ಮೂಲಕ ರಾಹುಲ್ ಗಾಂಧಿ ಕಾನೂನು ಉಲ್ಲಂಘಿಸಿದ್ದಾರೆ. ಹಾಗಾಗಿ ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗವು ರಾಹುಲ್ ಗಾಂಧಿ ವಿರುದ್ಧ ಕಾನೂನು ಕ್ರಮಕ್ಕೆಗೊಳ್ಳಬೇಕು’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಈ ಬಗ್ಗೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ಎನ್ ಪಟೇಲ್ ಅವರ ಪೀಠವು,‘ಈ ಹಂತದಲ್ಲಿ ನೋಟಿಸ್ ಜಾರಿ ಮಾಡಲು ಸಾಧ್ಯವಿಲ್ಲ. ಮುಂದಿನ ವಿಚಾರಣೆ ವೇಳೆ ಎರಡೂ ಕಡೆಯವರು 1–2ರ ಪುಟಗಳ ವರದಿ ಸಲ್ಲಿಸುವಂತೆ ಸೂಚಿಸಿದೆ.

‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಮಾಡಿದ್ದ ಟ್ವೀಟ್‌ಅನ್ನು ತೆಗೆಯಲಾಗಿದೆ. ಅವರ ಖಾತೆಯನ್ನು ಬ್ಲಾಕ್ ಮಾಡಲಾಗಿದೆ.’ ಎಂದು ಟ್ವಿಟರ್ ಪರ ನ್ಯಾಯಾಲಯದಲ್ಲಿ ಹಾಜರಿದ್ದ ಹಿರಿಯ ವಕೀಲ ಸಾಜನ್ ಪೂವಯ್ಯ ತಿಳಿಸಿದರು.

ಟ್ವಿಟರ್ ನಿಲುವಿಗೆ ವಿರೋಧ ವ್ಯಕ್ತಪಡಿಸಿದ ಅರ್ಜಿದಾರರ ಪರ ವಕೀಲರಾದ ಗೌತಮ್ ಜಾ, ನೋಟಿಸ್ ಜಾರಿ ಮಾಡುವಂತೆ ಒತ್ತಾಯಿಸಿದರು



### ಭಾರತೀಯ ಎನ್‌ಜಿಒಗಳಿಗೆ ₹ 49 ಸಾವಿರ ಕೋಟಿ ವಿದೇಶಿ ದೇಣಿಗೆ

ನವದೆಹಲಿ: ‘ಕಳೆದ ಮೂರು ವರ್ಷಗಳ ಅವಧಿಯಲ್ಲಿ ದೇಶದಲ್ಲಿನ 18 ಸಾವಿರಕ್ಕೂ ಹೆಚ್ಚಿನ ಸರ್ಕಾರೇತರ ಸಂಸ್ಥೆಗಳು (ಎನ್‌ಜಿಒ) ಸುಮಾರು ₹ 49 ಸಾವಿರ ಕೋಟಿಗೂ ಹೆಚ್ಚಿನ ಮೊತ್ತದ ವಿದೇಶಿ ದೇಣಿಗೆಯನ್ನು ಪಡೆದಿವೆ’ ಎಂದು ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಬುಧವಾರ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

‘2017–18ರಲ್ಲಿ ₹ 16,940.58 ಕೋಟಿ, 2018–19ರಲ್ಲಿ ₹ 16,525.73 ಕೋಟಿ ಹಾಗೂ 2019–20ರಲ್ಲಿ ₹ 15,853.94 ಕೋಟಿ ಮೊತ್ತದ ವಿದೇಶಿ ದೇಣಿಗೆಯನ್ನು ಭಾರತದ ಎನ್‌ಜಿಒಗಳು ಪಡೆದಿವೆ’ ಎಂದು ಅವರು ವಿವರಿಸಿದ್ದಾರೆ.

‘ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಕಾಯ್ದೆ 2020ರ ಜಾರಿಗೆ ಮೊದಲು, ಎನ್‌ಜಿಒಗಳು ನಿಗದಿತ ಬ್ಯಾಂಕುಗಳ ಯಾವುದೇ ಶಾಖೆಯಲ್ಲಿ ವಿಶೇಷ ಎಫ್‌ಸಿಆರ್‌ಎ ಬ್ಯಾಂಕ್ ಖಾತೆಗಳನ್ನು ತೆರೆಯಬಹುದಿತ್ತು. ಕಾಯ್ದೆ ಜಾರಿಯಾದ ನಂತರ, ಈಗ ಎನ್‌ಜಿಒಗಳು ವಿದೇಶಿ ದೇಣಿಗೆಯನ್ನು ಪಡೆಯಲು ಮುಂಬೈ ಇಲ್ಲವೇ ನವದೆಹಲಿಯ ಎಸ್‌ಬಿಐನ ಮುಖ್ಯಶಾಖೆಯಲ್ಲಿ ಕಡ್ಡಾಯವಾಗಿ ಎಫ್‌ಸಿಆರ್ ಖಾತೆಗಳನ್ನು ತೆರೆಯಬೇಕು’ ಎಂದು ಅವರು ತಿಳಿಸಿದ್ದಾರೆ.

‘2021ರ ಜುಲೈ 31ರ ವೇಳೆಗೆ ನವದೆಹಲಿಯ ತನ್ನ ಮುಖ್ಯಶಾಖೆಯಲ್ಲಿ ಒಟ್ಟು 18,377 ಎಫ್‌ಸಿಆರ್‌ಎ ಖಾತೆಗಳನ್ನು ತೆರೆಯಲಾಗಿದೆ’ ಎಂದು ಎಸ್‌ಬಿಐ ತಿಳಿಸಿದೆ’ ಎಂದು ನಿತ್ಯಾನಂದ ಅವರು ಮಾಹಿತಿ ನೀಡಿದ್ದಾರೆ.

## ಅಧಿವೇಶನ ಮೊಟಕು: ಪ್ರಜಾಸತ್ತೆಗೆ ಒಳ್ಳೆಯದಲ್ಲ– ಕಾಂಗ್ರೆಸ್

ನವದೆಹಲಿ (ಪಿಟಿಐ): ಸಂಸತ್ತಿನ ಮುಂಗಾರು ಅಧಿವೇಶನದ ಅವಧಿಯನ್ನು ಮೊಟಕುಗೊಳಿಸಿರುವುದಕ್ಕಾಗಿ ಸರ್ಕಾರವನ್ನು ಕಾಂಗ್ರೆಸ್ ಟೀಕಿಸಿದೆ. ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಬಗ್ಗೆ ದನಿ ಎತ್ತಲು ವಿರೋಧ ಪಕ್ಷಗಳ ಸದಸ್ಯರಿಗೆ ಅವಕಾಶವನ್ನೇ ಕೊಡದಿರುವುದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ ಎಂದು ಹೇಳಿದೆ.

‘ಬೆಲೆ ಏರಿಕೆ, ಹೆಚ್ಚುತ್ತಿರುವ ಇಂಧನ ದರ, ಕೃಷಿ ಕಾಯ್ದೆ ವಿರೋಧಿಸಿ ನಡೆಸುತ್ತಿರುವ ರೈತರ ಹೋರಾಟದಂಥ ವಿಷಯಗಳ ಬಗ್ಗೆ ಮಾತನಾಡಲು ಅಧಿವೇಶನ ಆರಂಭವಾದ ದಿನದಿಂದಲೂ ವಿರೋಧ ಪಕ್ಷಗಳ ಸದಸ್ಯರು ಸಜ್ಜಾಗಿದ್ದರು. ಆದರೆ, ಸರ್ಕಾರ ಅವಕಾಶ ಕೊಡಲಿಲ್ಲ. ಯಾರು ಸರಿ–ಯಾರು ತಪ್ಪು? ಅಥವಾ ಯಾವ ಬೇಡಿಕೆ ಸರಿಯಾದುದು, ಯಾವುದು ಅಲ್ಲ ಎಂಬುದನ್ನು ಹೇಳುವುದು ಸರ್ಕಾರದ ಕೆಲಸವಲ್ಲ. ತನ್ನ ಮೂಗಿನ ನೇರಕ್ಕೇ ನಡೆದುಕೊಳ್ಳುವಂತಹ ಸರ್ಕಾರ ದೇಶಕ್ಕೆ ಒಳ್ಳೆಯದಲ್ಲ ಹಾಗೂ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದುದು’ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕ ಅಧಿರ್ ರಂಜನ್ ಚೌಧರಿ ಆರೋಪಿಸಿದರು.

‘ಆಗಸ್ಟ್ 13ರವರೆಗೆ ಅಧಿವೇಶನ ನಡೆಸುವುದಾಗಿ ತಿಳಿಸಿ, ಇಂದು ಏಕಾಏಕಿಯಾಗಿ ಸದನವನ್ನು ನಡೆಸುವ ಅವಶ್ಯಕತೆ ಇಲ್ಲ ಎಂದರೆ ಹೇಗೆ?’ ಎಂದು ಕಿಡಿಕಾರಿದರು.

ಪೆಗಾಸಸ್ ವಿಷಯವಾಗಿ ವಿರೋಧ ಪಕ್ಷಗಳ ಸದಸ್ಯರನ್ನು ಆಹ್ವಾನಿಸಿ ಚರ್ಚಿಸುವ ಪ್ರಯತ್ನಕ್ಕೂ ಸರ್ಕಾರ ಮುಂದಾಗಲಿಲ್ಲ. ಮುಂಗಾರು ಅಧಿವೇಶನದ ಈ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಬುಧವಾರವಷ್ಟೇ ಕಾಣಿಸಿಕೊಂಡರು. ಇದರ ಅರ್ಥ, ಅಧಿವೇಶನವು ಅರ್ಥವತ್ತಾಗಿ ನಡೆಯುವುದು ಸರ್ಕಾರಕ್ಕೆ ಬೇಕಿಲ್ಲ. ತನ್ನ ಮನಬಂದಂತೆ ನಡೆಸಿ, ಚರ್ಚೆ ಇಲ್ಲದೇ ಮಸೂದೆಗಳಿಗೆ ಅಂಗೀಕಾರ ಪಡೆಯುವುದಷ್ಟೇ ಅದಕ್ಕೆ ಬೇಕಾಗಿರುವುದು ಎಂದು ಟೀಕಿಸಿದರು.

‘ಜನರ ಕಾಳಜಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪಿಸುವುದು ನಮ್ಮ ಕೆಲಸ. ಸಂಸತ್ತಿನ ಕಲಾಪವು ಸುಗಮವಾಗಿ ನಡೆಯುವಂತೆ ನಿಭಾಯಿಸುವುದು ಏನಿದ್ದರೂ ಸರ್ಕಾರದ ಕೆಲಸ. ನಮ್ಮ ಕರ್ತವ್ಯವನ್ನು ನಾವು ನಿಭಾಯಿಸಿದ್ದೇವೆ’ ಎಂದು ಚೌಧರಿ ಹೇಳಿದರು.

## ವೆಂಕಯ್ಯ, ಬಿರ್ಲಾ ಅತೃಪ್ತಿ

ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಅತಿಹೆಚ್ಚು ಗದ್ದಲ ಸೃಷ್ಟಿಯಾದುದಕ್ಕೆ ರಾಜ್ಯಸಭೆ ಸಭಾಪತಿ ವೆಂಕಯ್ಯ ನಾಯ್ಡು ಮತ್ತು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ತೀವ್ರ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

‘ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ಘಟನಾವಳಿಗಳ ಕಾರಣ ರಾತ್ರಿ ನನಗೆ ನಿದ್ದೆ ಬರಲಿಲ್ಲ’ ಎಂದು ವೆಂಕಯ್ಯ ನಾಯ್ಡು ಹೇಳಿದ್ದಾರೆ.

ರಾಜ್ಯಸಭಾ ಸದಸ್ಯರು ಸದನದ ನಿಯಮಗಳನ್ನು ಗಾಳಿಗೆ ತೂರಿ ಸದನದ ಬಾವಿಗೆ ಇಳಿದು ಘೋಷಣೆ ಕೂಗಿದರು. ಹಲವು ಸಂಸದರು ಕಚೇರಿ ಪ್ರದೇಶದ ಮೇಜುಗಳ ಮೇಲೆ ಹತ್ತಿ ಘೋಷಣೆಗಳನ್ನು ಕೂಗಿದರು.

‘ಸಂಸತ್ತನ್ನು ಪ್ರಜಾಪ್ರಭುತ್ವದ ದೇವಸ್ಥಾನ ಎಂದು ಕರೆಯಲಾಗುತ್ತದೆ. ಅಧಿಕಾರಿಗಳು, ಸದನದ ವರದಿಗಾರರು, ಪ್ರಧಾನ ಕಾರ್ಯದರ್ಶಿಗಳು ಕುಳಿತುಕೊಳ್ಳುವ ಸ್ಥಳವನ್ನು ಸಂಸತ್ತಿನ ಗರ್ಭಗುಡಿ ಎಂದು ಪರಿಗಣಿಸಲಾಗುತ್ತದೆ. ಅಂತಹ ಸ್ಥಳದಲ್ಲಿ ಸಂಸದರು ಮೇಜುಗಳ ಮೇಲೆ ಹತ್ತಿ, ಕಪ್ಪು ಬಾವುಟ ಹಿಡಿದು ಘೋಷಣೆಗಳನ್ನು ಕೂಗಿ ದೇವಸ್ಥಾನವನ್ನು ಅಪವಿತ್ರಗೊಳಿದರು. ಇದನ್ನೆಲ್ಲಾ ನೋಡಿ ನಾನು ತೀವ್ರವಾಗಿ ಮನನೊಂದಿದ್ದೇನೆ’ ಎಂದರು.

ಮಂಗಳವಾರ ಸದನವು ಇಂಥ ಕೆಟ್ಟ ಪರಿಸ್ಥಿತಿಗೆ ಇಳಿದಿದ ಕಾರಣವನ್ನು ಗುರುತಿಸಲು ಪ್ರಯತ್ನಿಸುತ್ತಿದ್ದೇನೆ ಎಂದರು. ‘ಕಲಾಪಗಳು ಅಡ್ಡಿ ಆತಂಕದಲ್ಲೇ ನಡೆದವು. ಇದರಿಂದ ನನಗೆ ತೀವ್ರ ಹತಾಶೆ ಉಂಟಾಗಿದೆ. ಅದನ್ನು ವ್ಯಕ್ತಪಡಿಸಲು ನನ್ನ ಬಳಿ ಪದಗಳಿಲ್ಲ’ ಎಂದು ಓಂ ಬಿರ್ಲಾ ಅವರು ಅಸಮಾಧಾನ ತೋಡಿಕೊಂಡಿದ್ದಾರೆ.

ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ ಬಳಿಕ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತಿತರ ನಾಯಕರು ಬಿರ್ಲಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

## ಸಂಕ್ಷಿಪ್ತ ಸುದ್ದಿ

### ಜಮ್ಮು–ಕಾಶ್ಮೀರಕ್ಕೆ ರಾಜ್ಯ ಸ್ಥಾನಕ್ಕೆ ಒತ್ತಾಯ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಈ ವರ್ಷದೊಳಗೆ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಘೋಷಿಸಬೇಕು ಎಂದು ಮಾಜಿ ಹಣಕಾಸು ಸಚಿವ ಯಶವಂತ್ ಸಿನ್ಹಾ ನೇತೃತ್ವದ ರಾಷ್ಟ್ರ ಮಂಚ್ ವೇದಿಕೆ ಒತ್ತಾಯಿಸಿದೆ.

ಇದೇ ವೇಳೆ, ಬಿಜೆಪಿಯೇತರ ಪಕ್ಷಗಳು, ಕಣಿವೆ ರಾಜ್ಯದಲ್ಲಿ ಮುಕ್ತ, ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು ಸರ್ಕಾರದ ಮೇಲೆ ಒತ್ತಡ ಹೇರುವಂತೆಯೂ ವೇದಿಕೆ ಆಗ್ರಹ ಪಡಿಸಿದೆ.

### ಅಶ್ವಿನಿ ಉಪಾಧ್ಯಾಯಗೆ ಜಾಮೀನು

ನವದೆಹಲಿ (ಪಿಟಿಐ): ಇಲ್ಲಿನ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಕೋಮು ಭಾವನೆ ಪ್ರಚೋದಿಸುವ ಘೋಷಣೆಗಳನ್ನು ಕೂಗಿದ ಆರೋಪದ ಮೇಲೆ ಬಂಧಿಸಲ್ಪಟ್ಟಿದ್ದ ಬಿಜೆಪಿಯ ಮಾಜಿ ವಕ್ತಾರ ಅಶ್ವಿನಿ ಉಪಾಧ್ಯಾಯ ಅವರಿಗೆ ದೆಹಲಿ ನ್ಯಾಯಾಲಯ ಬುಧವಾರ ಜಾಮೀನು ನೀಡಿದೆ. ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಉದ್ಭವ್ ಕುಮಾರ್ ಜೈನ್ ಅವರು, ವಕೀಲರೂ ಆದ ಬಿಜೆಪಿ ನಾಯಕ ಉಪಾಧ್ಯಾಯ ಅವರಿಗೆ ₹50 ಸಾವಿರದ ಬಾಂಡ್ ಮೇಲೆ ಜಾಮೀನು ಮಂಜೂರು ಮಾಡಿದರು.

## ‘ಊಹೆ ಆಧಾರ: ಪ್ರಿಯಾ ರಮಣಿ ದೋಷಮುಕ್ತ’

ನವದೆಹಲಿ: ಪತ್ರಕರ್ತೆ ಪ್ರಿಯಾ ರಮಣಿ ಅವರ ವಿರುದ್ಧ ಹೂಡಿದ್ದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಕುರಿತು ವಿಚಾರಣಾಧೀನ ನ್ಯಾಯಾಲಯವು ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಪತ್ರಕರ್ತ, ಕೇಂದ್ರದ ಮಾಜಿ ಸಚಿವ ಎಂ.ಜೆ. ಅಕ್ಬರ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ಪ್ರಿಯಾ ರಮಣಿ

‘ವಿಚಾರಣಾಧೀನ ನ್ಯಾಯಾಲಯವು ಪ್ರಿಯಾರಮಣಿ ವಿರುದ್ಧ ನಾನು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಯನ್ನು ನನ್ನ ವಿರುದ್ಧದ ಲೈಂಗಿಕ ಕಿರುಕುಳ ಪ್ರಕರಣವೆಂದು ಪರಿಗಣಿಸಿದೆ’ ಎಂದು ಅಕ್ಬರ್ ಅವರು ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿಯಲ್ಲಿ ತಿಳಿಸಿದ್ದಾರೆ.

‘ಸಾಕ್ಷ್ಯಾಧಾರಗಳನ್ನು ದೃಢಪಡಿಸಿಕೊಳ್ಳದೆಯೇ ಮತ್ತು ಊಹೆಯ ಆಧಾರದ ಮೇಲೆ ವಿಚಾರಣಾಧೀನ ನ್ಯಾಯಾಲಯವು ದೋಷಪೂರಿತ ತೀರ್ಪು ನೀಡಿದೆ. ಹಾಗಾಗಿ, ಪ್ರಿಯಾ ರಮಣಿ ದೋಷಮುಕ್ತರಾಗಿದ್ದಾರೆ’ ಎಂದೂ ಅವರು ಹೇಳಿದ್ದಾರೆ.

ಅಕ್ಬರ್ ಅವರ ಪರ ವಾದಿಸಿದ ಹಿರಿಯ ವಕೀಲರಾದ ರಾಜೀವ್ ನಾಯರ್ ಮತ್ತು ಗೀತಾ ಲೂಥ್ರಾ ಅವರು, ‘ಪ್ರಿಯಾ ರಮಣಿ ಅವರು ಮಾಡಿದ್ದ ಆರೋಪಗಳು ಮಾನಹಾನಿಕರ ಎಂದು ತೀರ್ಮಾನಿಸಿದ್ದರೂ ವಿಚಾರಣಾಧೀನ ನ್ಯಾಯಾಲಯವು ತಪ್ಪಾಗಿ ಪ್ರಿಯಾ ಅವರನ್ನು ಖುಲಾಸೆಗೊಳಿಸಿತು’ ಎಂದು ವಾದಿಸಿದರು.

ಈ ಸಂಬಂಧ ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿ ಮುಕ್ತಾ ಗುಪ್ತಾ ಅವರು ಪ್ರಿಯಾ ರಮಣಿ ಅವರಿಗೆ ನೋಟಿಸ್ ನೀಡಿದ್ದು, ಅಕ್ಬರ್ ಅವರ ಕುರಿತು ತಮ್ಮ ನಿಲುವು ತಿಳಿಸುವಂತೆ ಸೂಚಿಸಿದೆ. ಜನವರಿ 13ರಂದು ಮುಂದಿನ ವಿಚಾರಣೆ ನಡೆಸುವುದಾಗಿ ಹೈಕೋರ್ಟ್ ಹೇಳಿದೆ.

ಶಾಸಕರ ವಿರುದ್ಧ ದೋಷಾರೋಪ ದಾಖಲಿಸಲು ಸೂಚನೆ

## ಮುಖ್ಯ ಕಾರ್ಯದರ್ಶಿ ಮೇಲೆ ಹಲ್ಲೆ ಪ್ರಕರಣ: ಕೇಜ್ರಿವಾಲ್, ಸಿಸೋಡಿಯಾ ದೋಷಮುಕ್ತ

ನವದೆಹಲಿ(ಪಿಟಿಐ): ಮುಖ್ಯ ಕಾರ್ಯದರ್ಶಿ ಮೇಲಿನ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಉಪಮುಖ್ಯಮಂತ್ರಿ ಮನಿಷ್ ಸಿಸೊಡಿಯಾ ಮತ್ತು ಆಮ್ ಆದ್ಮಿ ಪಕ್ಷದ ಒಂಬತ್ತು ಶಾಸಕರನ್ನು ದೆಹಲಿ ಹೈಕೋರ್ಟ್ ಬುಧವಾರ ದೋಷಮುಕ್ತಗೊಳಿಸಿದೆ.

ಆದರೆ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ಎಎಪಿಯ ಇನ್ನಿಬ್ಬರು ಶಾಸಕರಾದ ಅಮಾನ್‌ತುಲ್ಲಾ ಮತ್ತು ಪ್ರಕಾಶ್ ಜರ್ವಾಲ್ ವಿರುದ್ಧ ದೋಷಾರೋಪ ದಾಖಲಿಸುವಂತೆ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಸಚಿನ್ ಗುಪ್ತಾ ಆದೇಶಿಸಿದ್ದಾರೆ.

2018ರ ಫೆಬ್ರುವರಿ 19ರಂದು ಅರವಿಂದ ಕೇಜ್ರಿವಾಲ್ ಅವರ ಅಧಿಕೃತ ನಿವಾಸದಲ್ಲಿ ಸಭೆ ನಡೆಯುತ್ತಿದ್ದ ವೇಳೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಅಂಶು ಪ್ರಕಾಶ್ ಮೇಲೆ ಹಲ್ಲೆ ನಡೆಸಲಾಗಿತ್ತು ಎಂದು ಆರೋಪಿಸಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿದ್ದ ಮುಖ್ಯಮಂತ್ರಿ ಕೇಜ್ರಿವಾಲ್, ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಮತ್ತು ಎಎಪಿಯ 11 ಶಾಸಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು.

ಈ ಹಲ್ಲೆ ಪ್ರಕರಣದ ನಂತರ ದೆಹಲಿ ಸರ್ಕಾರ ಮತ್ತು ಆಡಳಿತಾಧಿಕಾರಿಗಳ ನಡುವೆ ಸಂಘರ್ಷ ಸೃಷ್ಟಿಗೆ ಕಾರಣವಾಗಿತ್ತು.

ನ್ಯಾಯಾಲಯದಿಂದ ತೀರ್ಪು ಹೊರ ಬಂದ ನಂತರ ಕೇಜ್ರಿವಾಲ್ ಅವರು ‘ಸತ್ಯಮೇವ ಜಯತೆ‘ ಎಂದು ಟ್ವೀಟ್ ಮಾಡಿದ್ದಾರೆ. 'ಇದು ನ್ಯಾಯ ಮತ್ತು ಸತ್ಯದ ವಿಜಯದ ದಿನ‘ ಎಂದು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಸಿಸೋಡಿಯಾ ಕೂಡ ‘ಇದು ಸತ್ಯಕ್ಕೆ ಸಂದ ಜಯವಾಗಿದೆ‘ ಎಂದು ಹೇಳಿದ್ದಾರೆ.

ಅಫ್ಘಾನಿಸ್ತಾನದಲ್ಲಿ ಪ್ರಾಬಲ್ಯ ಸಾಧಿಸುತ್ತಿರುವ ಉಗ್ರಗಾಮಿ ಸಂಘಟನೆ

# ಮತ್ತೆ 3 ರಾಜಧಾನಿಗಳು ತಾಲಿಬಾನ್ ವಶಕ್ಕೆ

ಕಾಬೂಲ್: ಅಫ್ಘಾನಿಸ್ತಾನದ ಮೂರು ಪ್ರಾಂತ್ಯಗಳನ್ನು ತಾಲಿಬಾನ್ ಮತ್ತೆ ವಶಪಡಿಸಿಕೊಂಡಿದೆ. ಇದರಿಂದಾಗಿ, ದೇಶದ ಮೂರನೇ ಎರಡರಷ್ಟು ಭಾಗ ತಾಲಿಬಾನ್ ನಿಯಂತ್ರಣದಲ್ಲಿದೆ.

ಈಶಾನ್ಯ ಭಾಗದ ಬದಖ್‌ಷಾನ್ ಮತ್ತು ಪಶ್ಚಿಮ ಭಾಗದ ಬಘ್ಲಾನ್ ಹಾಗೂ ಫರಾಹ್ ಪ್ರಾಂತ್ಯಗಳ ರಾಜಧಾನಿಗಳನ್ನು ತಾಲಿಬಾನ್ ವಶಪಡಿಸಿಕೊಂಡಿದೆ.

ಅಫ್ಘಾನಿಸ್ತಾನದ ಅಧ್ಯಕ್ಷ ಅಷ್ರಫ್ ಘನಿ ಬಲ್ಖ್ ಪ್ರಾಂತ್ಯಕ್ಕೆ ಧಾವಿಸಿದ್ದು, ತಾಲಿಬಾನ್ ವಿರುದ್ಧದ ಹೋರಾಟವನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ತಾಲಿಬಾನ್ ಇತ್ತೀಚಿನ ದಿನಗಳಲ್ಲಿ ತನ್ನ ಪ್ರಾಬಲ್ಯವನ್ನು ತೀವ್ರ ಗತಿಯಲ್ಲಿ ಸಾಧಿಸುತ್ತಿರುವುದು ಅಫ್ಘಾನಿಸ್ತಾನದ ಸರ್ಕಾರವನ್ನು ಚಿಂತೆಗೀಡು ಮಾಡಿದೆ. ಹಲವೆಡೆ ಯುದ್ಧದ ಸ್ಥಳಗಳಿಂದ ವಿಶೇಷ ಕಾರ್ಯಾಚರಣೆ ಪಡೆಗಳೇ ಪಲಾಯನಗೈದಿವೆ. ಅಪಾರ ವೆಚ್ಚ ಮಾಡಿ ತರಬೇತಿ ಪಡೆದಿದ್ದರೂ ಸೇನಾ ಪಡೆಗಳು ಯುದ್ಧ ಭೂಮಿಯಿಂದ ಓಡಿ ಹೋಗುತ್ತಿರುವುದು ಏಕೆ ಎನ್ನುವ ಪ್ರಶ್ನೆ ಸರ್ಕಾರವನ್ನು ಕಾಡುತ್ತಿದೆ.

ಹಲವೆಡೆ ಸಂಭವಿಸಿರುವ ಹಿಂಸಾಚಾರದಿಂದಾಗಿ ಸಾವಿರಾರು ಮಂದಿ ಕಾಬೂಲ್‌ನಲ್ಲಿ ಆಶ್ರಯ ಪಡೆದಿದ್ದಾರೆ.

ಈ ತಿಂಗಳ ಅಂತ್ಯಕ್ಕೆ ಸೇನೆಯನ್ನು ವಾಪಸ್ ಕರೆಯಿಸಿಕೊಳ್ಳುವುದಾಗಿ ಹೇಳಿರುವ ಅಮೆರಿಕ, ಕೆಲವೆಡೆ ವಾಯು ದಾಳಿ ಮಾತ್ರ ನಡೆಸಿದೆ. ಆದರೆ, ಇತರ ಕಾರ್ಯಾಚರಣೆಯಿಂದ ದೂರವೇ ಉಳಿದಿದೆ.

ಫರಾಹ್‌ನಲ್ಲಿ ತಾಲಿಬಾನಿಗಳು ಅಫ್ಘಾನಿಸ್ತಾನದ ಭದ್ರತಾ ಪಡೆಗಳ ಯೋಧರ ದೇಹವನ್ನು ಬೀದಿಯಲ್ಲಿ ಎಳೆದಾಡಿ ‘ದೇವರು ದೊಡ್ಡವನು’ ಎಂದು ಘೋಷಣೆ ಹಾಕಿದ್ದಾರೆ.

‘ಪರಿಸ್ಥಿತಿ ನಿಯಂತ್ರಣದಲ್ಲಿದೆ. ಫರಾಹ್ ನಗರದಲ್ಲಿ ನಮ್ಮ ಮುಜಾಹಿದ್ದೀನ್‌ಗಳು ಗಸ್ತು ತಿರುಗುತ್ತಿದ್ದಾರೆ’ ಎಂದು ತಾಲಿಬಾನ್ ಉಗ್ರನೊಬ್ಬ ತಿಳಿಸಿದ್ದಾನೆ.

ತಾಲಿಬಾನಿಗಳು ಈ ಮೊದಲು ಕುಂದುಜ್ ಸೇರಿದಂತೆ ಆರು ಪ್ರಾಂತ್ಯಗಳ ರಾಜಧಾನಿಗಳನ್ನು ವಶಪಡಿಸಿಕೊಂಡಿದ್ದರು.

ಬುಧವಾರ ಕುಂದುಜ್ ವಿಮಾನ ನಿಲ್ದಾಣದಲ್ಲಿನ ಅಫ್ಗನ್ ರಾಷ್ಟ್ರೀಯ ಸೇನೆಯ ಪ್ರಧಾನ ಕಚೇರಿಯನ್ನು ಸಹ ತಾಲಿಬಾನ್ ವಶಪಡಿಸಿಕೊಂಡಿದೆ. ಇದರಿಂದ ಸೇನೆಗೆ ತೀವ್ರ ಹಿನ್ನಡೆಯಾದಂತಾಗಿದೆ ಎಂದು ಕುಂದುಜ್ ಪ್ರಾಂತ್ಯದ ಸದಸ್ಯ ಘುಲಾಮ್ ರಬಾನಿ ತಿಳಿಸಿದ್ದಾರೆ.

ತಾಲಿಬಾನ್ ಪ್ರಾಬಲ್ಯ ಸಾಧಿಸುತ್ತಿರುವುದರಿಂದ ಸೇನಾ ಮುಖ್ಯಸ್ಥರನ್ನು ಅಫ್ಘಾನಿಸ್ತಾನ ಅಧ್ಯಕ್ಷ ಅಷ್ರಫ್ ಘನಿ ಅವರು ಬದಲಾಯಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಅಫ್ಘಾನಿಸ್ತಾನದ 400 ಜಿಲ್ಲೆಗಳ ಪೈಕಿ 230 ಜಿಲ್ಲೆಗಳಲ್ಲಿ ತಾಲಿಬಾನ್ ನಿಯಂತ್ರಣ ಸಾಧಿಸಿದೆ ಎಂದು ಐರೋಪ್ಯ ಒಕ್ಕೂಟದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಬಘ್ಲಾನ್ ಪ್ರಾಂತ್ಯದ ರಾಜಧಾನಿ ಪುಲ್–ಇ–ಖುಮ್ರಿ ವಶಪಡಿಸಿಕೊಂಡ ತಾಲಿಬಾನಿಗಳು ರಾಯಿಟರ್ಸ್ ಚಿತ್ರ

### 90 ದಿನಗಳಲ್ಲಿ ಕಾಬೂಲ್ ವಶಪಡಿಸಿಕೊಳ್ಳುವ ಸಾಧ್ಯತೆ

ವಾಷಿಂಗ್ಟನ್ (ರಾಯಿಟರ್ಸ್): ಅಫ್ಘಾನಿಸ್ತಾನದ ರಾಜಧಾನಿಯನ್ನು ಇನ್ನು 90 ದಿನಗಳಲ್ಲಿ ತಾಲಿಬಾನ್ ವಶಕ್ಕೆ ಪಡೆದುಕೊಳ್ಳುವ ಸಾಧ್ಯತೆ ಇದೆ ಎಂದು ಅಮೆರಿಕದ ಗುಪ್ತಚರ ಇಲಾಖೆ ಅಂದಾಜಿಸಿದೆ.

ತಾಲಿಬಾನ್ ಈಗ ಅಫ್ಘಾನಿಸ್ತಾನದ ಶೇಕಡ 65ರಷ್ಟು ಪ್ರದೇಶವನ್ನು ನಿಯಂತ್ರಿಸುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ, ಅಫ್ಗನ್ ಪಡೆಗಳು ತೀವ್ರ ಪ್ರತಿರೋಧವೊಡ್ಡಿದರೆ ಮಾತ್ರ ಪರಿಸ್ಥಿತಿ ಬದಲಾಗಬಹುದು ಎಂದು ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

### ಮಹಿಳೆಯರಿಗೆ ನಿರ್ಬಂಧ

ತಾಲಿಬಾನಿಗಳು ತಾವು ವಶಪಡಿಸಿಕೊಂಡಿರುವ ಸ್ಥಳಗಳಲ್ಲಿ ಮಹಿಳೆಯರಿಗೆ ಹಲವು ರೀತಿಯ ನಿರ್ಬಂಧಗಳನ್ನು ವಿಧಿಸುತ್ತಿದ್ದಾರೆ ಎಂದು ನಾಗರಿಕರು ತಿಳಿಸಿದ್ದಾರೆ. ಕೆಲವೆಡೆ ಶಾಲೆಗಳಿಗೂ ಬೆಂಕಿ ಹಚ್ಚಿದ್ದಾರೆ. ಜತೆಗೆ ಸೇಡಿಗಾಗಿ ಹಲವರನ್ನು ಹತ್ಯೆ ಮಾಡಿರುವ ವರದಿಯಾಗಿವೆ.

### ಅಫ್ಘಗನಿಸ್ತಾನ: ಸ್ವದೇಶಕ್ಕೆ ಭಾರತೀಯರು ವಾಪಸ್


ನವದೆಹಲಿ: ತಾಲಿಬಾನ್ ಉಗ್ರರು ಮತ್ತು ಭದ್ರತಾ ಪಡೆಗಳ ನಡುವಿನ ದಾಳಿಯ ಕಾರಣ ಅಫ್ಘಾನಿಸ್ತಾನದ ಉತ್ತರ ಭಾಗದಲ್ಲಿರುವ ಮಜರ್–ಇ–ಷರೀಫ್ ನಗರ ಮತ್ತು ಸುತ್ತಮುತ್ತಲು ವಾಸವಿದ್ದ ಸುಮಾರು 50 ಅಧಿಕಾರಿಗಳು ಹಾಗೂ ನಾಗರಿಕರನ್ನು ವಿಶೇಷ ವಿಮಾನದ ಮೂಲಕ ಬುಧವಾರ ಭಾರತವು ವಾಪಸ್ ಕರೆಸಿಕೊಂಡಿದೆ.

ಬುಧವಾರ ಮುಂಜಾನೆ ವಿಶೇಷ ವಿಮಾನವು ನವದೆಹಲಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು.

ಮಜರ್–ಇ–ಷರೀಫ್ ನಗರದಲ್ಲಿರುವ ಭಾರತೀಯ ದೂತಾವಾಸ ಕಚೇರಿಯ ರಾಜತಾಂತ್ರಿಕ ಸಿಬ್ಬಂದಿ ಮತ್ತು ಭಾರತೀಯ ನಾಗರಿಕರನ್ನು ರಕ್ಷಿಸಲು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ವಿಶೇಷ ವಿಮಾನವು ಮಂಗಳವಾರ ತಡರಾತ್ರಿಯೇ ಹೊರಡಬೇಕಾಗಿತ್ತು. ಆದರೆ, ಭದ್ರತೆಯ ಕಾರಣಕ್ಕಾಗಿ ಕೆಲ ತಾಸುಗಳ ವಿಳಂಬದ ನಂತರ ಪ್ರಯಾಣ ಬೆಳೆಸಿತು. ಈ ನಿಟ್ಟಿನಲ್ಲಿ ಭಾರತವು ಅಫ್ಗನ್ ಸರ್ಕಾರದೊಂದಿಗೆ ನಿರಂತರ ಸಂಪರ್ಕ ಸಾಧಿಸಿತ್ತು.

ಈ ನಡುವೆ ಮಜರ್–ಇ–ಷರೀಫ್ ನಗರದಲ್ಲಿರುವ ಭಾರತೀಯ ದೂತಾವಾಸ ಕಚೇರಿಯನ್ನು ಮುಚ್ಚುವುದಿಲ್ಲ ಎಂದು ಭಾರತ ಸರ್ಕಾರವು ಸ್ಪಷ್ಟಪಡಿಸಿದ್ದು, ಸ್ಥಳೀಯ ಉದ್ಯೋಗಿಗಳೇ ಕಾರ್ಯನಿರ್ವಹಿಸಲಿದ್ದಾರೆ ಎಂದು ಹೇಳಿದೆ.

ಭಾರತ ಮಾತ್ರವಲ್ಲ, ವಿಶ್ವಸಂಸ್ಥೆಯು ತನ್ನ ಅಧಿಕಾರಿಗಳನ್ನು ಮಜರ್-ಇ--ಷರೀಫ್‌ನಿಂದ ಸ್ಥಳಾಂತರಿಸಲು ಮುಂದಾಗಿದೆ.






ಬ್ಯಾಂಕ್ ಪರೀಕ್ಷೆಗೆ ಕೂರುವವರು ಗಣಿತದಲ್ಲಿ ಕೆಲವು ಸುಲಭ ವಿಧಾನಗಳನ್ನು ರೂಢಿಸಿಕೊಂಡರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಅಂತಹ ಸರಳ ಕ್ರಮಗಳು ಯಾವುವು?

# ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್

## ಲೆಕ್ಕ ಈಗ ಬಹು ಸುಲಭ

**ಮನೋಜ್ ಟಿ.ಪಿ.**

ಬ್ಯಾಂಕ್ ಅಥವಾ ಎಲ್ಐಸಿ ಪರೀಕ್ಷೆಗೆ ಕೂರುವ ಸ್ಪರ್ಧಾರ್ಥಿಗಳಿಗೆ ಲೆಕ್ಕ ಮಾಡುವ ವೇಗ ತುಂಬಾ ಮುಖ್ಯ. ಅದರಲ್ಲೂ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ವೇಗವಾಗಿ ಲೆಕ್ಕ ಮಾಡುವ ಚಾಕಚಕ್ಯತೆ ಇದ್ದರೆ ಹೆಚ್ಚು ಅಂಕ ಗಳಿಸಬಹುದು. ಏಕೆಂದರೆ ಬ್ಯಾಂಕ್ ಪರೀಕ್ಷೆಯಲ್ಲಿ ಅಂದರೆ ಪ್ರೊಬೇಷನರಿ ಆಫೀಸರ್, ಕ್ಲರ್ಕ್, ಸ್ಪೆಷಲ್ ಆಫೀಸರ್ ಪರೀಕ್ಷೆಯಲ್ಲಿ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಪರೀಕ್ಷೆಯೇ ಪ್ರಮುಖ ಪಾತ್ರ ವಹಿಸುತ್ತದೆ. ವೇಗವಾಗಿ ಲೆಕ್ಕ ಹಾಕುವ ಸಾಮರ್ಥ್ಯ ಕೇವಲ ಸಮಯವನ್ನು ಉಳಿಸುವುದು ಮಾತ್ರವಲ್ಲ, ಉಳಿದವರಿಗೆ ತೀವ್ರ ಪೈಪೋಟಿ ನೀಡಲೂ ಸಹ ಉಪಯೋಗವಾಗುತ್ತದೆ.

ಲೆಕ್ಕ ಮಾಡುವ ವೇಗವನ್ನು ವೇದಿಕ್ ಗಣಿತದ ಮೂಲಕ ಸುಧಾರಿಸಿಕೊಳ್ಳಬಹುದು. ಆದರೆ ಈ ವೇದಿಕ್ ಗಣಿತದಲ್ಲಿ ಪರಿಣತಿ ಸಾಧಿಸುವುದು ಸ್ವಲ್ಪ ಕಷ್ಟ ಹಾಗೂ ಸಾಕಷ್ಟು ಸಮಯ ತಗಲುತ್ತದೆ. ಸಾಮಾನ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಲೆಕ್ಕ ಹಾಕಬೇಕಾದ ಸಂಖ್ಯೆ 2–3 ಡಿಜಿಟ್ ಹೊಂದಿದ್ದು, ಸಾಮಾನ್ಯವಾದ ಕ್ರಮ ಅನುಸರಿಸಿದರೆ ಸಾಕು. ಹೀಗಾಗಿ ವೇದಿಕ್ ಗಣಿತ ಬರದಿದ್ದರೂ ಅಡ್ಡಿಯಿಲ್ಲ. ಕೆಲವು ಸುಲಭವಾದ ಕ್ರಮಗಳು ಈ ರೀತಿ ಇವೆ.

**ಮೂಲಭೂತ ಲೆಕ್ಕಾಚಾರ:** ನೀವು ಶೂನ್ಯದಿಂದ ಕಲಿಯಲು ಆರಂಭಿಸಿದರೆ ಪರೀಕ್ಷೆಗೆ ಬೇಕಾದ ಎಲ್ಲವನ್ನೂ ಕಲಿತುಕೊಂಡಂತಾಗುತ್ತದೆ. ಹೀಗಾಗಿ ತಾತ್ಕಾಲಿಕವಾದ ಕ್ರಮಕ್ಕಿಂತ ಮೂಲಭೂತ ಹಂತಗಳನ್ನು ಕಲಿಯಬೇಕಾಗುತ್ತದೆ. ಜೊತೆಗೆ ಪ್ರತಿಯೊಂದನ್ನೂ ಪುನರಾವರ್ತನೆ ಮಾಡಬೇಕು. ಹೀಗಾಗಿ ನಿಮ್ಮ ಶಾಲಾ ದಿನಗಳಲ್ಲಿ ಕಲಿತ ಗಣಿತವನ್ನು ನೆನಪಿಗೆ ತಂದುಕೊಂಡು 30ರವರೆಗಿನ ಟೇಬಲ್ ಅನ್ನು ಕಲಿತುಕೊಳ್ಳಿ.

ಈ ಟೇಬಲ್ ಅನ್ನು ಕಲಿತುಕೊಳ್ಳುವುದು ಕೆಲವರಿಗೆ ಬೇಸರದ ಕೆಲಸ. ಆದರೆ ಇದರ ಹಿಂದಿನ ತಂತ್ರವನ್ನು ಅರ್ಥ ಮಾಡಿಕೊಂಡರೆ ಬಹಳ ಸುಲಭ. ಉತ್ತಮವಾದ ವಿಧಾನವೆಂದರೆ ಇದರ ಪುನರಾವರ್ತನೆ. ಮೊದಲು 20x20 ಚೌಕಗಳುಳ್ಳ ಟೇಬಲ್ ಮಾಡಿಕೊಂಡು 1ರಿಂದ 20ರವರೆಗೆ ಗುಣಾಕಾರದಿಂದ ಬಂದ ಗುಣಲಬ್ಧವನ್ನು ಬರೆದುಕೊಳ್ಳಿ. ಇದನ್ನು ಸಂಪೂರ್ಣವಾಗಿ ತುಂಬಿದ ನಂತರ ಎಷ್ಟು ಸಮಯ ಹಿಡಿಯಿತು ಎಂದು ನೆನಪಿಟ್ಟುಕೊಳ್ಳಿ. 10 ನಿಮಿಷಕ್ಕಿಂತ ಕಡಿಮೆ ಅವಧಿಯಲ್ಲಿ ಭರ್ತಿ ಮಾಡುವುದನ್ನು ಕಲಿತರೆ ಕ್ರಮೇಣ ಅಭ್ಯಾಸ ಮಾಡಿ ಮಾಡಿ ಇನ್ನೂ ಕಡಿಮೆ ಸಮಯದಲ್ಲಿ ಇದನ್ನು ಮಾಡಬಹುದು. 10–15 ಸಲ ಮಾಡಿದ ನಂತರ ಇದನ್ನು ಐದು ನಿಮಿಷಕ್ಕಿಂತ ಕಡಿಮೆ ಸಮಯದಲ್ಲಿ ಮಾಡುವುದರಲ್ಲಿ ಯಶಸ್ವಿಯಾಗಬಹುದು. ಇದರಿಂದ ಐಬಿಪಿಎಸ್ ಪರೀಕ್ಷೆಯಲ್ಲಿ ಲೆಕ್ಕಗಳನ್ನು ನೀವು ಸುಲಭವಾಗಿ ಬಿಡಿಸಲು ಸಾಧ್ಯ. ಇದೇ ರೀತಿ 30ರವರೆಗಿನ ವರ್ಗ ಹಾಗೂ ಘನಗಳಿಗೂ ಕೂಡ ನೀವು ಅಭ್ಯಾಸ ಮಾಡಬಹುದು. ಕಲಿಕೆಯ ಸುಲಭ ವಿಧಾನವೆಂದರೆ ಪುನರಾವರ್ತನೆ. ಒಂದು ಎಕ್ಸೆಲ್ ಶೀಟ್‌ನಲ್ಲಿ ಬಾಕ್ಸ್ ಹಾಕಿ ಅದರ ಪ್ರಿಂಟ್‌ಔಟ್ ತೆಗೆದುಕೊಂಡು ತುಂಬುತ್ತ ಹೋಗಬಹುದು.



ಹಾಗೆಯೇ 15ರವರೆಗಿನ ಭಾಗಾಂಶ ಅಥವಾ ಫ್ರ್ಯಾಕ್ಷನ್ ಹಾಗೂ ಅದರ ಶೇಕಡಾವಾರನ್ನು ಕಲಿತುಕೊಳ್ಳಿ. ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್‌ನಲ್ಲಿ ಶೇಕಡಾವಾರು, ಲಾಭಾಂಶ, ನಷ್ಟ, ಸರಾಸರಿ ಮೊದಲಾದ ಎಲ್ಲಾ ವಿಷಯಗಳಲ್ಲೂ ಈ ಫ್ರ್ಯಾಕ್ಷನ್ ಬಳಕೆಯಾಗುತ್ತದೆ. ಉದಾಹರಣೆಗೆ ಶೇ 50 ಅಂದರೆ 1/2, 0.5, ಶೇ 12.5 ಅಂದರೆ 1/8, 0.125. ಅನುಪಾತ ಹಾಗೂ ಶೇಕಡಾವಾರು ಕುರಿತ ನಿಮ್ಮ ಶಾಲಾ ಗಣಿತದ ಪಾಠವನ್ನು ಮತ್ತೊಮ್ಮೆ ಓದಿಕೊಂಡು ಮನನ ಮಾಡಿ. ಕಂಠಪಾಠ ಮಾಡಿದರೂ ಆದೀತು. ನೀವು ಗಣಿತದಲ್ಲಿ ನಿಧಾನವಾಗಿ ಲೆಕ್ಕ ಹಾಕುತ್ತ ಕೂತರೆ ಅಥವಾ ಭಾಗಾಂಶ ಗೊತ್ತಿರದಿದ್ದರೆ ಅಂಕಿ–ಅಂಶ ವಿಶ್ಲೇಷಣೆ (ಡೇಟಾ ಇಂಟರ್‌ಪ್ರಿಟೇಶನ್) ಕುರಿತ ಪ್ರಶ್ನೆಗಳಿಗೆ ಬೇಗ ಉತ್ತರಿಸುವುದು ಕಷ್ಟ. ಹೀಗಾಗಿ ವರ್ಗ, ಘನ, ವರ್ಗಮೂಲ, ಭಾಗಾಂಶದ ಬಗ್ಗೆ ನಿಮ್ಮ ಜ್ಞಾನವನ್ನು ಸುಧಾರಿಸಿಕೊಳ್ಳುವುದು ಮುಖ್ಯ.

ಹಾಗೆಯೇ ಎಲ್ಲ ಲೆಕ್ಕಗಳನ್ನೂ ಮನಸ್ಸಿನಲ್ಲೇ ಮಾಡಿಕೊಂಡು ನಂತರ ಕಷ್ಟವೆನಿಸಿದರೆ ಪೇಪರ್ ಮತ್ತು ಪೆನ್ ಬಳಸಿ ಮಾಡಿ. ಮೇಲೆ ತಿಳಿಸಿದ ಅಭ್ಯಾಸವನ್ನು 15–20 ದಿನಗಳ ಕಾಲ ಮಾಡಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ❖

# ಇಂಗ್ಲಿಷ್ ವ್ಯಾಕರಣ ಅಂಕ ಗಳಿಕೆಗೆ ಕಾರಣ

**ಎಸ್. ರೇಖಾ ರಾಮ್**

**ಬ್ಯಾಂಕ್** ಪರೀಕ್ಷೆಯಿರಲಿ ಅಥವಾ ಇತರ ಸ್ಪರ್ಧಾತ್ಮಕ ಪರೀಕ್ಷೆಯಿರಲಿ, ಪ್ರತಿಯೊಂದು ಪರೀಕ್ಷೆಯಲ್ಲೂ ಇಂಗ್ಲಿಷ್ ವಿಭಾಗಕ್ಕೆ ಮಹತ್ವ ಕೊಡಲೇಬೇಕು. ಈ ವಿಭಾಗದಲ್ಲಿ ಕೇಳಲಾಗುವ ಪ್ರಶ್ನೆಗಳು ಗೊಂದಲ ಉಂಟು ಮಾಡುವಂತೆ ಇರುತ್ತವೆ. ಆದರೆ ಮೂಲಭೂತ ಇಂಗ್ಲಿಷ್ ಚೆನ್ನಾಗಿ ಗೊತ್ತಿದ್ದರೆ ಅಂಕಗಳನ್ನು ಸುಲಭವಾಗಿ ಗಳಿಸಬಹುದು.

### ಸಾಮಾನ್ಯ ಇಂಗ್ಲಿಷ್ ಅನ್ನು ಸುಧಾರಿಸಲು ಕೆಲವು ಸಲಹೆಗಳು

- ಭಾಷೆಯನ್ನು ಸುಧಾರಿಸಿಕೊಳ್ಳಲು ಇಂಗ್ಲಿಷ್ ದಿನಪತ್ರಿಕೆ, ನಿಯತಕಾಲಿಕೆ ಹಾಗೂ ಪುಸ್ತಕಗಳನ್ನು ನಿಯಮಿತವಾಗಿ ಓದಬೇಕು. ಇದರಿಂದ ಹಲವಾರು ಲಾಭಗಳಿವೆ. ಕೇವಲ ನಿಮ್ಮ ಇಂಗ್ಲಿಷ್ ವ್ಯಾಕರಣ, ಶಬ್ದ ಭಂಡಾರ ಮಾತ್ರ ಸುಧಾರಿಸದೆ, ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನದ ಕುರಿತ ಅರಿವನ್ನೂ ಹೆಚ್ಚಿಸಿಕೊಳ್ಳಬಹುದು.

ಸ್ಪರ್ಧಾರ್ಥಿಗಳು ವಾಕ್ಯಗಳ ರಚನೆಯನ್ನು ಅವಲೋಕಿಸಿ, ಇಂಗ್ಲಿಷ್ ವ್ಯಾಕರಣದ ಬಳಕೆಯ ಬಗ್ಗೆ ಜ್ಞಾನ ಹೆಚ್ಚಿಸಿಕೊಳ್ಳಬಹುದು. ಇದರ ಮೇಲೆ ಸಣ್ಣ ಟಿಪ್ಪಣಿಯನ್ನು ನಿತ್ಯ ಬರೆದುಕೊಂಡರೆ ಆಗಾಗ ಓದಿಕೊಳ್ಳಲು ಅನುಕೂಲವಾಗುತ್ತದೆ. ಹಾಗೆಯೇ ಹೊಸ ಶಬ್ದಗಳನ್ನು ಬರೆದಿಟ್ಟುಕೊಂಡು ಅವುಗಳ ಅರ್ಥವನ್ನು ನಿಘಂಟಿನ ಸಹಾಯದಿಂದ ತಿಳಿದುಕೊಳ್ಳಬಹುದು.

- ಶಬ್ದ ಭಂಡಾರ ಬೆಳೆಸಿಕೊಳ್ಳಿ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಒಳ್ಳೆಯ ಶಬ್ದ ಭಂಡಾರವಿದ್ದರೆ ಇಂಗ್ಲಿಷ್ ವಿಭಾಗದಲ್ಲಿ ಒಳ್ಳೆಯ ಅಂಕ ಗಳಿಸಬಹುದು. ನಿತ್ಯ ಒಂದು ಹೊಸ ಶಬ್ದ ಕಲಿಯುತ್ತ, ಅದನ್ನು ಬಳಸುತ್ತ ಹೋದರೆ ಇದು ಸಾಧ್ಯ.

ಹೊಸ ಶಬ್ದಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಇನ್ನೊಂದು ವಿಧಾನವಿದೆ. ಅದು ಫ್ಲಾಷ್‌ಕಾರ್ಡ್ ಬಳಕೆ. ಈಗಂತೂ ಎಲೆಕ್ಟ್ರಾನಿಕ್ ಫ್ಲಾಷ್‌ಕಾರ್ಡ್ ಹೆಚ್ಚು ಜನಪ್ರಿಯ. ಇದಕ್ಕಾಗಿ ಸ್ಮಾರ್ಟ್‌ಫೋನ್ ಆ್ಯಪ್ ಬಳಸಬಹುದು.

- **ಮೂಲಭೂತ ವ್ಯಾಕರಣ ಕಲಿಕೆ:** ಕಾಲಗಳು, ನಾಮಪದ, ಕ್ರಿಯಾಪದ, ವಿಶೇಷಣ, ಶಬ್ದ ಜೋಡಣೆ, ಪ್ರಿಪೋಶಿಷನ್, ಆ್ಯಕ್ಟಿವ್ ಹಾಗೂ ಪ್ಯಾಸಿವ್ ವೈಸ್ ಮೊದಲಾದ ಮೂಲಭೂತ ವ್ಯಾಕರಣದ ಬಗ್ಗೆ ಕಲಿತರೆ ಪರೀಕ್ಷೆ ಎದುರಿಸುವುದು ಸುಲಭ. ಇಂಗ್ಲಿಷ್ ವ್ಯಾಕರಣ ಕುರಿತ ಪುಸ್ತಕಗಳನ್ನು ಓದಬಹುದು. ಈ ಕುರಿತ ಅಣಕು ಪರೀಕ್ಷೆ ತೆಗೆದುಕೊಳ್ಳಬಹುದು.

ಹಾಗೆಯೇ ಎಲ್ಲಾ ಬಗೆಯ ವ್ಯಾಕರಣ ಕಲಿಯಲು ಬರೆದು ಅಭ್ಯಾಸ ಮಾಡುವುದು ಸೂಕ್ತ. ಇದರಿಂದ ಏನು ತಪ್ಪಾಗಿದೆ ಎಂದು ತಿಳಿದುಕೊಂಡು ಸುಧಾರಿಸಿಕೊಳ್ಳಲು ಸಾಧ್ಯ.

- ಕೇಳಿ ಅರ್ಥ ಮಾಡಿಕೊಳ್ಳುವುದು. ಭಾಷೆಯ ಬಗ್ಗೆ ತಿಳಿದುಕೊಳ್ಳುವ ಇನ್ನೊಂದು ವಿಧಾನವೆಂದರೆ ಆಲಿಸುವುದು. ಅಂದರೆ ಇಂಗ್ಲಿಷ್ ವಾರ್ತೆಯನ್ನು, ರೇಡಿಯೊ, ಟಿವಿ ಚಾನೆಲ್‌ಗಳಲ್ಲಿ ನಿಯಮಿತವಾಗಿ ಕೇಳಿದರೆ ಶಬ್ದ ಭಂಡಾರ, ವ್ಯಾಕರಣ, ಉಚ್ಛಾರ ಮಾಡುವ ವಿಧಾನ ಸುಧಾರಿಸುತ್ತದೆ.
- **ಸಮಯದ ನಿರ್ವಹಣೆ:** ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಇಂಗ್ಲಿಷ್ ವಿಭಾಗದ ಪ್ರಶ್ನೆಗಳಿಗೆ ಉತ್ತರಿಸುವಾಗ ಸಮಯ ನಿರ್ವಹಣೆ ತುಂಬಾ ಮುಖ್ಯ. ಕಡಿಮೆ ಅವಧಿಯಲ್ಲಿ ಉತ್ತರಿಸುವ ಜಾಣ್ಮೆ ಬೆಳೆಸಿಕೊಳ್ಳುವುದು ಅಭ್ಯಾಸದಿಂದ ಮಾತ್ರ ಸಾಧ್ಯ.
- **ರೀಡಿಂಗ್ ಕಾಂಪ್ರೆಹೆನ್ಷನ್:** ಇದರಲ್ಲಿ ಒಳ್ಳೆಯ ಅಂಕ ಗಳಿಸಬೇಕಾದರೆ ಓದುವ ವೇಗ, ಉತ್ತಮವಾದ ವಿಶ್ಲೇಷಣೆ, ಪುನರಾವರ್ತನೆ, ಒಳ್ಳೆಯ ಶಬ್ದ ಜ್ಞಾನ ಮುಖ್ಯ. ಇದರಲ್ಲಿ ಸಾಮಾನ್ಯವಾಗಿ ಶಬ್ದಗಳು, ಸಮಾನಾರ್ಥಕ ಹಾಗೂ ವಿರುದ್ಧ ಶಬ್ದಗಳು, ಇನ್‌ಫರೆನ್ಸ್ ಮೊದಲಾದವುಗಳು ಬರುತ್ತವೆ.
- **ತಪ್ಪುಗಳನ್ನು ಕಂಡು ಹಿಡಿಯುವುದು:** ಈ ವಿಭಾಗದಲ್ಲಿ ಉತ್ತಮ ಅಂಕ ಗಳಿಸಬೇಕಾದರೆ ಹಳೆಯ ಪ್ರಶ್ನೆ ಪತ್ರಿಕೆಗಳು ಹಾಗೂ ಅಣಕು ಪರೀಕ್ಷೆಗಳನ್ನು ಎದುರಿಸಿ ಅಭ್ಯಾಸ ಮಾಡಬೇಕು. ❖

## ಪ್ರಜಾವಾಣಿ ಉದ್ಯೋಗ ವಾರ್ತೆ

### ಬಿಇಎಲ್‌ನಲ್ಲಿ ಎಂಜಿನಿಯರ್ ಹುದ್ದೆಗಳು

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) 2021ನೇ ಸಾಲಿನ ನೇಮಕಾತಿ ಕುರಿತಂತೆ ವೆಬ್‌ಸೈಟ್‌ನಲ್ಲಿ ಅಧಿಕೃತ ಮಾಹಿತಿ ಹೊರಡಿಸಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು.

**ಹುದ್ದೆಗಳು:** ಪ್ರಾಜೆಕ್ಟ್ ಎಂಜಿನಿಯರ್, ಟ್ರೈನಿ ಎಂಜಿನಿಯರ್

**ಹುದ್ದೆಗಳ ಸಂಖ್ಯೆ:** 511

**ಸ್ಥಳ:** ಬೆಂಗಳೂರು

**ವಿದ್ಯಾರ್ಹತೆ:** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಇ, ಬಿ.ಟೆಕ್, ಎಂಬಿಎ, ಪಿಜಿ ಡಿಪ್ಲೊಮಾ, ಬಿ. ಆರ್ಕ್ ಪದವಿ ಪಡೆದಿರಬೇಕು. ಟ್ರೈನಿ ಎಂಜಿನಿಯರ್ ಹುದ್ದೆಗೆ 8ನೇ ಸೆಮಿಸ್ಟರ್ ಪರೀಕ್ಷೆ ಬರೆದವರು ಸಹ ಅರ್ಜಿ ಸಲ್ಲಿಸಬಹುದು.

**ವಯೋಮಿತಿ:** ಪ್ರಾಜೆಕ್ಟ್ ಎಂಜಿನಿಯರ್‌ಗೆ 25 ವರ್ಷ ಹಾಗೂ ಟ್ರೈನಿ ಎಂಜಿನಿಯರ್‌ಗೆ 28 ವರ್ಷ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 5 ವರ್ಷ ವಿನಾಯಿತಿ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ವಿನಾಯಿತಿ ಇದೆ.

**ಆಯ್ಕೆ ಪ್ರಕ್ರಿಯೆ:** ಪದವಿ ಅಂತಿಮ ವರ್ಷದ ಅಂಕಗಳ ಸರಾಸರಿ, ಲಿಖಿತ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ.

**ಅರ್ಜಿ ಶುಲ್ಕ:** ಪ್ರಾಜೆಕ್ಟ್ ಎಂಜಿನಿಯರ್ ಹುದ್ದೆಯ ಒಬಿಸಿ ಅಭ್ಯರ್ಥಿಗಳಿಗೆ ₹ 500, ಟ್ರೈನಿ ಎಂಜಿನಿಯರ್ ₹ 200, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಆಗಸ್ಟ್ 15, 2021

**ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ

**ಹೆಚ್ಚಿನ ಮಾಹಿತಿಗೆ:** https://bel-india.in/Default.aspx ❖

## ಸಿಇಟಿ ದಿಕ್ಸೂಚಿ

# Maths – Binomial Theorem

1. If $n$ is an odd positive integer and $(1+x+x^2+x^3)^n=\sum_{r=0}^{3n}a_r x^r$, then $a_0-a_1+a_2-a_3+....-a_{3n}$ is equal to
(1) $4^n$ (2) 1
(3) −1 (4) 0

2. If $r^{th}$ and $(r+1)^{th}$ terms in the expansion of $(p+q)^n$ are equal, then $\frac{(n+1)q}{r(p+q)}$ is
(1) 0 (2) 1
(3) $\frac{1}{4}$ (4) $\frac{1}{2}$

3. The value of ${}^{10}C_1+{}^{10}C_2+{}^{10}C_3+....+{}^{10}C_9$ is
(1) $2^{10}$ (2) $2^{11}$
(3) $2^{10}-2$ (4) $2^{10}-1$

4. If the volume of the parallelopiped formed by three non-coplanar vectors $\vec{a}$, $\vec{b}$ and $\vec{c}$ is 4cubic units, then $[\vec{a}\times\vec{b}\ \ \vec{b}\times\vec{c}\ \ \vec{c}\times\vec{a}]$
(1) 64 (2) 16
(3) 4 (4) 8

5. The $13^{th}$ term in the expansion of $\left(x^2+\frac{2}{x}\right)^n$ is independent of x then the sum of the divisors ofn is
(1) 36 (2) 37
(3) 38 (4) 39

6. If the value of $C_0+2.C_1+3.C_2+.........+(n+1).C_n=576$, then 'n' is ______
(1) 7 (2) 5
(3) 6 (4) 9

7. The remainder when, $10^{10}.(10^{10}+1)(10^{10}+2)$ is divided by 6 is ______
(1) 2 (2) 4
(3) 0 (4) 6

8. If $21^{st}$ and $22^{nd}$ terms in the expansion of $(1+x)^{44}$ are equal, then x is equal to
(1) $\frac{21}{22}$ (2) $\frac{23}{24}$
(3) $\frac{8}{7}$ (4) $\frac{7}{8}$

9. Consider an infinite geometric series with first term 'a' common ratio 'r' if the sum is 4 and the second term is $\frac{3}{4}$, then
(1) $a=\frac{4}{7}, r=\frac{3}{7}$ (2) $a=3, r=\frac{1}{4}$
(3) $a=2, r=\frac{3}{8}$ (4) $a=\frac{3}{2}, r=\frac{1}{2}$

10. The middle term of expansion of $\left(\frac{10}{x}+\frac{x}{10}\right)^{10}$
(1) ${}^7C_5$ (2) ${}^8C_5$
(3) ${}^9C_5$ (4) ${}^{10}C_5$

11. The $11^{th}$ term in the expansion of $\left(x+\frac{1}{\sqrt{x}}\right)^{14}$ is
(1) 999/x (2) 1001/x
(3) i (4) x/1001

12. The total number of terms in the expansion of $(x+a)^{47}-(x-a)^{47}$ after simplification is
(1) 24 (2) 47
(3) 48 (4) 96

13. The constant term in the expansion of $\left(x^2-\frac{1}{x^2}\right)^{16}$ is
(1) ${}^{16}C_8$ (2) ${}^{16}C_7$
(3) ${}^{16}C_9$ (4) ${}^{16}C_{10}$

14. If the angle between $\vec{a}$ and $\vec{b}$ is $\frac{2\pi}{3}$ and the projection of $\vec{a}$ in the direction of $\vec{b}$ is -2 , then $|\vec{a}|=$
(1) 3 (2) 1
(3) 4 (4) 2

15. The value of ${}^{16}C_9+{}^{16}C_{10}-{}^{16}C_6-{}^{16}C_7$ is
(1) ${}^{17}C_{10}$ (2) ${}^{17}C_3$
(3) 0 (4) 1

16. The number of terms in the expansion of $(x+y+z)^{10}$ is
(1) 11 (2) 110
(3) 66 (4) 142

**ANSWERS**

1. Answer (4)

Sol.: Given, $(1+x+x^2+x^3)^n=\sum_{r=0}^{3n}a_r x^r$ & $n$ is an odd positive integer.

$\Rightarrow[(1+x)(1+x^2)]^n=\sum_{r=0}^{3n}a_r x^r$

$\Rightarrow(1+x)^n(1+x^2)^n=\sum_{r=0}^{3n}a_r x^r$

$=\sum_{r=0}^{3n}a_r x^r$

Put $X=-1$

2. Answer (2)

Sol.: Given, $(p+q)^n$

$T_r=T_{(r-1)+1}={}^nC_{r-1}p^{n-r+1}.q^{r-1}$ &

$T_{r+1}={}^nC_r p^{n-r}.q^r$

$T_r=T_{r+1}$

$\Rightarrow\frac{1}{(n-r+1)}.\frac{p}{q}=\frac{1}{r}$

$\Rightarrow\frac{q(n+1)}{r(p+q)}=1$

3. Answer: (3)

Sol:- ${}^{10}C_0+{}^{10}C_1+{}^{10}C_2+....+{}^{10}C_9+{}^{10}C_{10}=2^{10}$

$\therefore{}^{10}C_1+{}^{10}C_2+....+{}^{10}C_9=2^{10}-2$

4 Answer: (3)

Sol:- $[a\times b\ \ b\times c\ \ c\times a]$

$=[abc]^2=16(\because[abc]=4)$

5. Answer: (4)

Sol:-

$T_{13}={}^nc_{12}(x^2)^{n-12}.\left(\frac{2}{x}\right)^{12}\Rightarrow x^{2n-24-12}=x^0\Rightarrow n=18$

the divisions $n=18=2^1.3^2$ is 39

$1+2+3+6+9+18=39$

6. Answer (1)

Sol : $c_0+2C_1+3C_2+......+(n+1)C_n=576$

$[2a+nd]2^{n-1}=576$

$[2+n]2^{n-1}=576$

$\Rightarrow n=7$

7. Answer (3)

Sol : Product of 3 consecutive integers divisible by 3! ⇒remainder = 0

8. Answer (4)

Hint: $(1+x)^{44}$

$T_{21}=T_{22}$ (given)

${}^{44}C_{20}x^{20}={}^{44}C_{21}x^{21}$

$x=\frac{{}^{44}C_{20}}{{}^{44}C_{21}}$

$x=\frac{7}{8}$

9. Answer (2)

Hint: $S_\infty=\frac{a}{1-\gamma}$

$4=\frac{a}{1-\gamma}$

$a=4-4\gamma$ ------(1)

$T_2=ar$

$ar=\frac{3}{4}$ -------(2)

$a=4-4\left(\frac{3}{a}\right)$

$a^2-3a-a+3=0$

$a=1,3;\ r=\frac{1}{4}$

10. Answer (4)

Hint : $T_{5+1}={}^{10}C_5\left(\frac{10}{x}\right)^5\times\left(\frac{x}{10}\right)^5={}^{10}C_5$

11. Answer (2)

Sol. $\left(x+\frac{1}{\sqrt{x}}\right)^{14}$

$T_{11}={}^{14}C_{10}\ 1/x$

$=1001/x$

12. Answer: (1)

Sol: $(x+a)^{47}-(x-a)^{47}$

Total number of terms $=\frac{n+1}{2}=\frac{47+1}{2}=24$

13. Answer (1)

Solution:

$Tr+1=16_{C_r}(x^2)^{16-r}=\left(-\frac{1}{x^2}\right)^r$

$=16_{C_r}.\frac{x^{32-2r}}{x^{2r}}.(-1)^r$

$=16_{C_r}.x^{32-4r}.(-1)^r$

For constant term

$32-4r=0\Rightarrow r=8$

14. Key. (3)

Hint: $\theta=\frac{2\pi}{3}\Rightarrow\frac{\vec{a}.\vec{b}}{|\vec{b}|}=-2$

$\Rightarrow\frac{|\vec{a}||\vec{b}|\cos\theta}{|\vec{b}|}=-2\Rightarrow|\vec{a}|\times-\frac{1}{2}=-2\Rightarrow|\vec{a}|=4$

15. Answer: (3)

Sol: ${}^{16}C_9+{}^{16}C_{10}-{}^{16}C_6-{}^{16}C_7=0$

${}^nC_r={}^nC_{n-r}$

16. Answer: (3)

Sol: $(x+y+z)^{10}$

no. of terms in the expansion $(x_1+x_2+....x_r)^n$ is ${}^{n+r-1}C_{r-1}$

$={}^{10+3-1}C_{3-1}$

$={}^{12}C_2=\frac{12\times11}{2}=66$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

# ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

**ಭಾಗ -40**

**531. ಯಾವ ರಾಜ್ಯ ಸರ್ಕಾರ 'ಸೇವಾಸಿಂಧು ಡಿಜಿಟಲ್ ಪ್ಲಾಟ್ ಫಾರ್ಮ್' ಆರಂಭಿಸಿದೆ?**
ಎ) ತೆಲಂಗಾಣ
ಬಿ) ತಮಿಳುನಾಡು
ಸಿ) ಆಂಧ್ರಪ್ರದೇಶ
ಡಿ) ಕರ್ನಾಟಕ

**532. ಈ ಶ್ರೇಣಿಯಲ್ಲಿ ಮುಂದಿನ ಅಂಕ ಯಾವುದು?**
**1, 4, 9, 16, 25, 36, 49 _____**
ಎ) 1 ಬಿ) 9
ಸಿ) 64 ಡಿ) 99

**533. ಈ ಸರಣಿಯಲ್ಲಿ ಹೊಂದಿಕೆ ಆಗದ ಸಂಖ್ಯೆ ಯಾವುದು?**
**3, 5, 11, 14, 17, 21**
ಎ) 21 ಬಿ) 14
ಸಿ) 17 ಡಿ) 3

**534. ಎರಡು ಸಂಖ್ಯೆಗಳ ಮೊತ್ತ 25 ಮತ್ತು ಅವುಗಳ ವ್ಯತ್ಯಾಸ 13 ಆದರೆ, ಅವುಗಳ ಗುಣಲಬ್ಧ ಏನು?**
ಎ) 104 ಬಿ) 114
ಸಿ) 315 ಡಿ) 325

**535. ಒಂದು ಗಂಟೆಗೆ 60 ಕಿ.ಮೀ. ವೇಗದಲ್ಲಿ ಓಡುತ್ತಿರುವ ರೈಲುಗಾಡಿ, ಒಂದು ಕಂಬವನ್ನು ದಾಟಲು 9 ಸೆಕೆಂಡು ತೆಗೆದುಕೊಳ್ಳುತ್ತದೆ. ಈ ರೈಲು ಗಾಡಿಯ ಉದ್ದವೆಷ್ಟು?**
ಎ) 120 ಮೀ. ಬಿ) 180 ಮೀ.
ಸಿ) 324 ಮೀ. ಡಿ) 150 ಮೀ.

**536. ಒಂದು ಮರಗಳ ಸಾಲಿನಲ್ಲಿ, ಒಂದು ಮರವು ಎಡ ತುದಿಯಿಂದ ಏಳನೆಯದಾಗಿಯೂ, ಬಲ ತುದಿಯಿಂದ ಹದಿನಾಲ್ಕನೆಯದಾಗಿಯೂ ಇದೆ. ಆ ಸಾಲಿನಲ್ಲಿ ಒಟ್ಟು ಎಷ್ಟು ಮರಗಳಿವೆ?**
ಎ) 18 ಬಿ) 19
ಸಿ) 20 ಡಿ) 21

**537. ಕರ್ನಾಟಕದಲ್ಲಿ, ನಡೆಯುವ ಎಮ್ಮೆ ಓಟಕ್ಕೆ ಏನೆನ್ನುತ್ತಾರೆ?**
ಎ) ಬೈಲ್ಗಾಡಿ ಶರಿಯತ್
ಬಿ) ಮರಮಡಿ
ಸಿ) ಜಲ್ಲಿಕಟ್ಟು
ಡಿ) ಕಂಬಳ

**538. ಕರ್ನಾಟಕ ರಾಜ್ಯದ ರಾಜ್ಯ ಪಕ್ಷಿ ಯಾವುದು?**
ಎ) ದೊಡ್ಡ ಹಾರ್ನ್‌ಬಿಲ್
ಬಿ) ಮನೆಗುಬ್ಬಚ್ಚಿ
ಸಿ) ಇಂಡಿಯನ್ ರೋಲರ್ (ನೀಲಕಂಠ)
ಡಿ) ಗ್ರೇಟರ್ ಫ್ಲೆಮಿಂಗೊ (ರಾಜಹಂಸ)

**539. ಭಾರತದ ಅತ್ಯಂತ ಉದ್ದವಾದ ರೋಪ್ ವೇ ಅನ್ನು ಯಾವ ನದಿಯ ಮೇಲೆ ಪ್ರಾರಂಭಿಸಲಾಗಿದೆ?**
ಎ) ಬ್ರಹ್ಮಪುತ್ರ ಬಿ) ಗಂಗಾ
ಸಿ) ಯಮುನಾ ಡಿ) ನರ್ಮದಾ

**540. 'ಇಂದ್ರ' ಇದು ಯಾವ ರಾಷ್ಟ್ರದ ಜೊತೆ ಭಾರತೀಯ ನೌಕಾಪಡೆಯ ದ್ವಿಪಕ್ಷೀಯ ವ್ಯಾಯಾಮ?**
ಎ) ಫ್ರಾನ್ಸ್
ಬಿ) ಶ್ರೀಲಂಕಾ
ಸಿ) ರಷ್ಯಾ
ಡಿ) ಇಸ್ರೇಲ್

**541. ಶರಾವತಿ ನದಿಯು ಯಾವ ಪಟ್ಟಣದ ಮೂಲಕ ಹರಿಯುತ್ತದೆ?**
ಎ) ಕಾರವಾರ
ಬಿ) ದಾಂಡೇಲಿ
ಸಿ) ಹೊನ್ನಾವರ
ಡಿ) ಹಾವೇರಿ

**542. 2011ನೇ ಸಾಲಿನ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಲಿಂಗಾನುಪಾತವು**
ಎ) 1000/968
ಬಿ) 1000/930
ಸಿ) 1000/943
ಡಿ) 1000/980

**543. ಉತ್ತರ ಪ್ರದೇಶದ ರಾಜಧಾನಿ ಯಾವುದು?**
ಎ) ಅಲಹಾಬಾದ್
ಬಿ) ವಾರಾಣಸಿ
ಸಿ) ನೊಯ್ಡಾ
ಡಿ) ಲಕ್ನೋ

**544. ಇವುಗಳಲ್ಲಿ ಯಾವುದು ದ್ರಾವಿಡ ಭಾಷೆ ಅಲ್ಲ?**
ಎ) ತೆಲುಗು
ಬಿ) ಮರಾಠಿ
ಸಿ) ತುಳು
ಡಿ) ಕನ್ನಡ

**545. ಕರ್ನಾಟಕದ ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗುವ ಸದಸ್ಯರ ಸಂಖ್ಯೆ?**
ಎ) 20 ಬಿ) 25
ಸಿ) 30 ಡಿ) 35

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

**ಭಾಗ– 39 ರ ಉತ್ತರ:**
516. ಬಿ, 517. ಎ, 518. ಎ, 519. ಸಿ, 520. ಎ, 521. ಬಿ, 522. ಬಿ, 523. ಎ, 524. ಬಿ, 525. ಎ, 526. ಎ, 527. ಬಿ, 528. ಬಿ, 529. ಸಿ, 530. ಎ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





❦ ಸುಭಾಷಿತ ❦

ಒಳ್ಳೆಯ ಓದುಗರಾಗದೆ ಉತ್ತಮ ಜ್ಞಾನಿಗಳಾಗಲು ಸಾಧ್ಯವಿಲ್ಲ. -ಬಿಲ್ ಗೇಟ್ಸ್

# ರಾಜಕೀಯ ಪಕ್ಷಗಳಿಗೆ ದಂಡದ ಬಿಸಿ ಶುದ್ಧೀಕರಣಕ್ಕೆ ಬೇಕು ಬದ್ಧತೆ

**ಬಿಹಾರ** ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳ ಅಪರಾಧ ಹಿನ್ನೆಲೆಯನ್ನು ಮತ್ತು ಅಭ್ಯರ್ಥಿಗಳಾಗಿ ಅವರನ್ನು ಆಯ್ಕೆ ಮಾಡಿದ್ದಕ್ಕೆ ಕಾರಣಗಳನ್ನು ಬಹಿರಂಗಪಡಿಸದ ಎಲ್ಲ ರಾಜಕೀಯ ಪಕ್ಷಗಳಿಗೂ ದಂಡ ವಿಧಿಸುವ ಮೂಲಕ ಸುಪ್ರೀಂ ಕೋರ್ಟ್ ದಿಟ್ಟ ಕ್ರಮವೊಂದನ್ನು ಕೈಗೊಂಡಿದೆ. ಎಲ್ಲ ಪಕ್ಷಗಳೂ ತಮ್ಮ ಅಭ್ಯರ್ಥಿಗಳ ಅಪರಾಧ ಹಿನ್ನೆಲೆಯನ್ನು ಬಹಿರಂಗಪಡಿಸಬೇಕು ಎಂದು 2020ರಲ್ಲಿ ಸುಪ್ರೀಂ ಕೋರ್ಟ್ ಸೂಚಿಸಿತ್ತು. ಆದರೆ ಆ ಬಳಿಕ ನಡೆದ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷವೂ ಸುಪ್ರೀಂ ಕೋರ್ಟ್‌ನ ಈ ನಿರ್ದೇಶನವನ್ನು ಅನುಸರಿಸಿರಲಿಲ್ಲ. ತನ್ನ ನಿರ್ದೇಶನದ ಉಲ್ಲಂಘನೆಯನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್, ದಂಡ ವಿಧಿಸುವ ಮೂಲಕ ಎಲ್ಲ ರಾಜಕೀಯ ಪಕ್ಷಗಳಿಗೂ ಎಚ್ಚರಿಕೆಯ ಚಾಟಿ ಬೀಸಿದೆ. ಬಿಜೆಪಿ, ಕಾಂಗ್ರೆಸ್, ಜೆಡಿಯು, ಆರ್‌ಜೆಡಿ, ಎಲ್‌ಜೆಪಿ ಮತ್ತು ಸಿಪಿಐ ಪಕ್ಷಗಳಿಗೆ ತಲಾ ಒಂದು ಲಕ್ಷ ರೂಪಾಯಿ ದಂಡ ವಿಧಿಸಿರುವ ಸುಪ್ರೀಂ ಕೋರ್ಟ್ ನ್ಯಾಯಪೀಠವು ಎನ್‌ಸಿಪಿ ಮತ್ತು ಸಿಪಿಎಂಗೆ ತಲಾ ₹ 5 ಲಕ್ಷ ದಂಡ ವಿಧಿಸಿದೆ. ಚುನಾವಣೆಗೆ ಸ್ಪರ್ಧಿಸಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ 48 ಗಂಟೆಗಳೊಳಗೆ ಪಕ್ಷಗಳು ತಮ್ಮ ಅಭ್ಯರ್ಥಿಗಳ ಮೇಲೆ ಇರುವ ಕ್ರಿಮಿನಲ್ ಮೊಕದ್ದಮೆ ವಿವರಗಳನ್ನು ಪಕ್ಷದ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕು ಎಂದೂ ನ್ಯಾಯಪೀಠವು ಆದೇಶಿಸಿದೆ. ನ್ಯಾಯಪೀಠದ ಈ ಕ್ರಮ ರಾಜಕೀಯ ಪಕ್ಷಗಳಲ್ಲಿ ನಾಚಿಕೆಯನ್ನು ಹುಟ್ಟು ಹಾಕಬಹುದೇ? ಇನ್ನು ಮುಂದೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ, ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ದೂರ ಇಡುವುದಕ್ಕೆ ತೀರ್ಪು ಪ್ರೇರಣೆ ನೀಡಬಹುದೇ? ಈ ಪ್ರಶ್ನೆಗಳಿಗೆ ಈಗಲೇ ಉತ್ತರ ಹೇಳುವುದು ಕಷ್ಟ.



ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳನ್ನು ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯಿಂದ ದೂರ ಇಡುವುದಕ್ಕೆ ಈ ತೀರ್ಪು ಪ್ರೇರಣೆ ನೀಡಬಹುದೇ?

ಚುನಾವಣೆಯಲ್ಲಿ ಸ್ಪರ್ಧಿಸಲು ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳಿಗೆ ಟಿಕೆಟ್ ನೀಡುವುದು ನೈತಿಕ ನೆಲೆಯಲ್ಲಿ ಸರಿಯಾದ ನಡೆಯಲ್ಲ. ಜನಹಿತಕ್ಕಾಗಿ ಕಾನೂನುಗಳನ್ನು ರೂಪಿಸುವ ಸಂಸದೀಯ ವೇದಿಕೆಗಳಲ್ಲಿ ಕಾನೂನುಗಳನ್ನು ಮುರಿದವರನ್ನೇ ಆ ಕೆಲಸಕ್ಕಾಗಿ ನಿಯೋಜಿಸುವುದು ರಾಜಕೀಯ ಪಕ್ಷಗಳ ನೈತಿಕ ದಿವಾಳಿತನಕ್ಕೆ ಸಾಕ್ಷಿ ಎನ್ನುವುದು ಸ್ಪಷ್ಟ. ರಾಜಕೀಯದಲ್ಲಿ ಹೆಚ್ಚುತ್ತಿರುವ ಅಪರಾಧೀಕರಣವನ್ನು ತಡೆಗಟ್ಟಲು ಸಂಸದೀಯ ವ್ಯವಸ್ಥೆಯ ಒಳಗೇ ಸುಧಾರಣೆಗಳು ನಡೆಯಬೇಕು. ಆದರೆ ಸಂಸತ್ ಅಥವಾ ವಿಧಾನ ಮಂಡಲಗಳಿಂದ ಈ ವಿಷಯದಲ್ಲಿ ಹೆಚ್ಚಿನ ಸ್ಪಂದನ ವ್ಯಕ್ತವಾಗಿಲ್ಲ. ನ್ಯಾಯಾಂಗವು ಇಂತಹ ಕಠಿಣ ಕ್ರಮಗಳ ಮೂಲಕ ಮಹತ್ವದ ಹೆಜ್ಜೆಯನ್ನೇ ಇಟ್ಟಿದೆ. ಚುನಾವಣಾ ಆಯೋಗವು ಇತ್ತೀಚಿನ ದಿನಗಳಲ್ಲಿ ಹಲ್ಲಿಲ್ಲದ ಹಾವಿನಂತೆ ವರ್ತಿಸುತ್ತಿರುವುದು ಎಲ್ಲರ ಗಮನಕ್ಕೂ ಬಂದಿದೆ. ಸುಪ್ರೀಂ ಕೋರ್ಟಿನ ನಿರ್ದೇಶನಗಳನ್ನು ಉಲ್ಲಂಘಿಸುವ ಪಕ್ಷಗಳ ಕುರಿತು ಕಾಲಕಾಲಕ್ಕೆ ಮಾಹಿತಿ ನೀಡಬೇಕು, ಚುನಾವಣಾ ಅಭ್ಯರ್ಥಿಗಳ ಕ್ರಿಮಿನಲ್ ಹಿನ್ನೆಲೆಯ ವಿವರಗಳನ್ನು ಒದಗಿಸುವ ಆ್ಯಪ್‌ಗಳನ್ನು ರೂಪಿಸಬೇಕೆಂದೂ ನ್ಯಾಯಪೀಠವು ಆಯೋಗಕ್ಕೆ ಸೂಚಿಸಿರುವುದು ಗಮನಾರ್ಹ ಸಂಗತಿ. ರಾಜಕೀಯದಲ್ಲಿ ಅಪರಾಧೀಕರಣವನ್ನು ತಡೆಗಟ್ಟಲು ಕಾನೂನಿಗೆ ತಿದ್ದುಪಡಿ ತರಬೇಕಾದ ಅಗತ್ಯದ ಬಗೆಗೆ ನ್ಯಾಯಾಲಯವು ಈ ಹಿಂದೆಯೇ ಪ್ರಸ್ತಾಪಿಸಿದೆ. ಕ್ರಿಮಿನಲ್ ಪ್ರಕರಣವೊಂದರಲ್ಲಿ ಎರಡು ವರ್ಷಕ್ಕಿಂತ ಹೆಚ್ಚು ಜೈಲು ಶಿಕ್ಷೆ ಅನುಭವಿಸಿದ ವ್ಯಕ್ತಿಯು ಶಿಕ್ಷೆ ಪೂರೈಸಿದ ಬಳಿಕ ಆರು ವರ್ಷಗಳವರೆಗೆ ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂಬ ಅಂಶ ಪ್ರಜಾಪ್ರಾತಿನಿಧ್ಯ ಕಾಯ್ದೆಯಲ್ಲಿ ಇದೆ. ಆದರೆ ನಮ್ಮಲ್ಲಿ ಬಹುತೇಕ ಕ್ರಿಮಿನಲ್ ಪ್ರಕರಣಗಳಲ್ಲಿ ತೀರ್ಪು ಹೊರಬರಲು ನ್ಯಾಯಾಂಗದ ಪ್ರಕ್ರಿಯೆಯು ಸುದೀರ್ಘ ಅವಧಿಯನ್ನು ತೆಗೆದುಕೊಳ್ಳುತ್ತಿದೆ. ಕ್ರಿಮಿನಲ್ ಹಿನ್ನೆಲೆಯ ಬಹುತೇಕ ವ್ಯಕ್ತಿಗಳು ವಿಳಂಬ ನ್ಯಾಯದ ಈ ಅವಕಾಶವನ್ನೇ ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವುದು ಸ್ಪಷ್ಟ. ನ್ಯಾಷನಲ್ ಎಲೆಕ್ಷನ್ ವಾಚ್ ಮತ್ತು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಸಂಸ್ಥೆಗಳು ಪ್ರಕಟಿಸಿದ ಅಂಕಿ ಅಂಶಗಳ ಪ್ರಕಾರ, ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ವಿಧಾನಸಭೆಗಳ ಚುನಾವಣೆಗೆ ಸ್ಪರ್ಧಿಸಿದ್ದ ಒಟ್ಟು 6,318 ಅಭ್ಯರ್ಥಿಗಳ ಪೈಕಿ 1,157 ಅಭ್ಯರ್ಥಿಗಳ ವಿರುದ್ಧ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಪ್ರಕರಣಗಳು ಬಾಕಿ ಉಳಿದಿವೆ. ಪ್ರಜಾಪ್ರಾತಿನಿಧ್ಯ ಕಾಯ್ದೆಯನ್ನು ಸೂಕ್ತ ತಿದ್ದುಪಡಿಗಳ ಮೂಲಕ ಇನ್ನಷ್ಟು ಬಲಪಡಿಸಬೇಕಾದ ಅಗತ್ಯವಿದೆ ಎನ್ನುವುದನ್ನು ಇದು ಸೂಚಿಸುತ್ತಿದೆ. ಸದಾ ವೋಟ್‌ಬ್ಯಾಂಕ್ ಮೇಲೆ ಕಣ್ಣಿಟ್ಟು, ಗೆಲುವು ಮಾತ್ರ ಅಭ್ಯರ್ಥಿ ಆಯ್ಕೆಗೆ ಮಾನದಂಡ ಎಂದುಕೊಂಡಿರುವ ರಾಜಕೀಯ ಪಕ್ಷಗಳಿಂದ ಇಂತಹ ನೈತಿಕ ನಿಲುವನ್ನು ನಿರೀಕ್ಷಿಸಲು ಸಾಧ್ಯವಿಲ್ಲದ ಪರಿಸ್ಥಿತಿ ದೇಶದಲ್ಲಿದೆ. ಈ ಕೆಲಸ ಮಾಡಬೇಕಾದ ಜವಾಬ್ದಾರಿ ಶಾಸಕಾಂಗದ್ದು. ನಮ್ಮ ಸಂಸದರು ಮತ್ತು ಶಾಸಕರು ಈ ದಿಸೆಯಲ್ಲಿ ಕಾನೂನು ತಿದ್ದುಪಡಿ ತರಲು ಶೀಘ್ರ ಕ್ರಮಗಳನ್ನು ಕೈಗೊಳ್ಳುವರೇ?

## ದಿನದ ಟ್ವೀಟ್



### ಹೀಗಿದೆ ಜಾತಿಪ್ರೀತಿ

**ಕುತೂಹಲಕಾರಿ: ಆರ್ಥಿಕತೆ, ಪೆಗಾಸಸ್, ಕೋವಿಡ್, ಇಂಧನ ದರ, ಚೀನಾದಂತಹ ವಿಷಯಗಳ ಬಗ್ಗೆ ಚರ್ಚೆ ನಡೆಸಲು, ಸಹಮತ ಸಾಧಿಸಲು ಸಂಸತ್ತಿಗೆ ಆಗಲಿಲ್ಲ. ಆದರೆ, ಜಾತಿ ಮೀಸಲಾತಿ ನಿರ್ಧರಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡುವ ಒಬಿಸಿ ಮಸೂದೆಯನ್ನು ಅಂಗೀಕರಿಸಲು ಮಾತ್ರ ಅದು ತಕ್ಷಣವೇ ಒಗ್ಗೂಡಿತು. ಭಾರತದಲ್ಲಿ ಜಾತಿ ರಾಜಕಾರಣವು ಎಲ್ಲ ಪಕ್ಷಗಳನ್ನೂ ಬೆಸೆಯುವ ಒಂದು ಸಾಮಾನ್ಯ ಅಂಶವಾಗಿದೆ.**

**ರಾಜ್‌ದೀಪ್ ಸರ್ದೇಸಾಯಿ,** ಪತ್ರಕರ್ತ

## ಕಿಡಿನುಡಿ

**ನನಗೆ ಬಿ.ಪಿ, ಶುಗರ್ ಸಮಸ್ಯೆ ಇಲ್ಲ. ಆದರೆ, ನನ್ನ ತಂಟೆಗೆ ಬಂದವರಿಗೆ ಅವೆಲ್ಲವೂ ಬರುತ್ತವೆ.**



**ಕೆ.ಎಸ್.ಈಶ್ವರಪ್ಪ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

## 25 ವರ್ಷಗಳ ಹಿಂದೆ

ಸೋಮವಾರ, 12-8-1996

**• ಆಲಮಟ್ಟಿ ಕೆಲಸ ನಿಲ್ಲದು**

**ನವದೆಹಲಿ, ಆ. 11–** ಆಲಮಟ್ಟಿ ಅಣೆಕಟ್ಟಿನ ವಿಚಾರದಲ್ಲಿ ಆಂಧ್ರಪ್ರದೇಶದ ವಾದ ‘ರಾಜಕೀಯ ಸ್ಟಂಟ್’ ಎಂದು ಟೀಕಿಸಿದ ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್, ಅಣೆಕಟ್ಟಿನ ಕಾಮಗಾರಿಯನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಘೋಷಿಸಿದರು.

ಕಾಮಗಾರಿಗೆ ತಡೆ ನೀಡಿರುವ ಆಂಧ್ರ ಹೈಕೋರ್ಟ್‌ನಲ್ಲಿ ನಾಳೆ ಅಫಿಡವಿಟ್ ಸಲ್ಲಿಸಿ ಕಾಮಗಾರಿ ಎಂದಿನಂತೆ ಮುಂದುವರಿಸಲಾಗುವುದು ಎಂದು ಅವರು ಹೇಳಿದರು.

**• ನಾಲ್ವರು ಮುಖ್ಯಮಂತ್ರಿಗಳ ಸಮಿತಿ ರಚನೆ: ಇಂದು ವರದಿ ಸಲ್ಲಿಕೆ**

**ನವದೆಹಲಿ, ಆ. 11–** ಆಲಮಟ್ಟಿ ಅಣೆಕಟ್ಟು ಯೋಜನೆಯ ಬಗೆಗೆ ಆಂಧ್ರಪ್ರದೇಶ ಎತ್ತಿರುವ ಆಕ್ಷೇಪಗಳ ಬಗೆಗೆ ವಿಚಾರಣೆ ಮಾಡಿ ನಾಳೆಯೇ ವರದಿ ನೀಡಲು ಇಂದು ನಡೆದ ಸಂಯುಕ್ತ ರಂಗದ ಚಾಲನಾ ಸಮಿತಿ ಸಭೆಯು ನಾಲ್ವರು ಮುಖ್ಯಮಂತ್ರಿಗಳ ಸಮಿತಿಯೊಂದನ್ನು ರಚಿಸುವ ಮೂಲಕ ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳ ನಡುವೆ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ನಿರ್ಧರಿಸಿತು.

ಮುಖ್ಯಮಂತ್ರಿಗಳಾದ ಜ್ಯೋತಿಬಸು, ಲಾಲೂ ಪ್ರಸಾದ್ ಯಾದವ್, ಎಂ. ಕರುಣಾನಿಧಿ ಮತ್ತು ಪ್ರಫುಲ್ಲ ಕುಮಾರ್ ಮಹಂತ ಅವರು ನಾಳೆ ಸಭೆ ಸೇರಿ, ಆಂಧ್ರದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಅಭಿಪ್ರಾಯ ಕೇಳಿ ನಾಳೆ ಸಂಜೆಯೊಳಗೇ ತಮ್ಮ ವರದಿಯನ್ನು ಸ್ಥಾಯಿ ಸಮಿತಿಗೆ ಒಪ್ಪಿಸಲಿದ್ದಾರೆ ಎಂದು ದಳದ ವಕ್ತಾರ ಎಸ್. ಜೈಪಾಲ್ ರೆಡ್ಡಿ ತಿಳಿಸಿದರು.

## 50 ವರ್ಷಗಳ ಹಿಂದೆ

ಗುರುವಾರ, 12-8-1971

**• ಸಂವಿಧಾನ ತಿದ್ದುಪಡಿ ಅಧಿಕಾರ ಮತ್ತೆ ಸಂಸತ್ತಿಗೆ**

**ನವದೆಹಲಿ, ಆ. 11–** ಮೂಲಭೂತ ಹಕ್ಕುಗಳೂ ಸೇರಿ ಸಂವಿಧಾನದ ಯಾವುದೇ ಭಾಗವನ್ನಾದರೂ ತಿದ್ದುಪಡಿ ಮಾಡುವುದಕ್ಕೆ ಮತ್ತೆ ಅಧಿಕಾರ ಪಡೆದುಕೊಳ್ಳುವ ಸಂವಿಧಾನದ 24ನೇ ತಿದ್ದುಪಡಿಯ ಐತಿಹಾಸಿಕ ವಿಧೇಯಕವನ್ನು ಇಂದಿನ ರಾಜ್ಯಸಭೆಯ ಒಪ್ಪಿಗೆಯೊಡನೆ ಸಂಸತ್ತು ಅಂಗೀಕರಿಸಿದಂತಾಯಿತು.

ಈಗಾಗಲೇ ಲೋಕಸಭೆ ಅಂಗೀಕರಿಸಿರುವ ಈ ವಿಧೇಯಕವನ್ನು ರಾಜ್ಯಸಭೆಯು ಕರತಾಡನಗಳ ನಡುವೆ 177–3 ಮತಗಳಿಂದ ಒಪ್ಪಿಕೊಂಡಿತು. ಇದರಿಂದ, ಮೂಲಭೂತ ಹಕ್ಕುಗಳನ್ನು ಮೊಟಕು ಮಾಡುವ ಅಥವಾ ಬದಲಾಯಿಸುವ ಅಧಿಕಾರವನ್ನು ಸಂಸತ್ತಿಗೆ ತಪ್ಪಿಸುವ ಗೋಲಕನಾಥ್ ಮೊಕದ್ದಮೆ ಕುರಿತು ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಮಾರ್ಪಡಿಸಿದಂತಾಗಿದೆ.

**• ಚೀನಾ ಕೇಡಿಗಿಂತ ರಷ್ಯಾ ಸಹವಾಸ ಮೇಲೆಂದ ರಾಜಾಜಿ**

**ಮದ್ರಾಸ್, ಆ. 11–** ಚೀನಾದ ಕೇಡಿಗಿಂತಲೂ ರಷ್ಯಾ ವಿದೇಶಾಂಗ ಮಂತ್ರಿ ಗ್ರೋಮಿಕೋ ಅವರ ಸಹವಾಸ ಎಷ್ಟೋ ಮೇಲೆಂದು ಸ್ವತಂತ್ರ ಪಕ್ಷದ ನಾಯಕ ಸಿ. ರಾಜಗೋಪಾಲಾಚಾರಿ ಅವರು ತಿಳಿಸಿದ್ದಾರೆ.

ಭಾರತವನ್ನು ವಿಪತ್ತಿನಿಂದ ಸಂರಕ್ಷಿಸಲು ಇದಕ್ಕಿಂತ ಬೇರೇನೂ ಮಾರ್ಗಗಳಿಲ್ಲ ಎಂದು ಹೇಳಿರುವ ಶ್ರೀಯುತರು, ನಾವು ರಷ್ಯಾದ ಸಲಹೆ ಪಡೆಯಲೇಬೇಕಾಗಿರುವುದೆಂದು ಇತ್ತೀಚಿನ ‘ಸ್ವರಾಜ್ಯ’ದಲ್ಲಿ ಬರೆದಿದ್ದಾರೆ.

ಭಾರತಕ್ಕೆ ನೆರವು ನೀಡಲು ಗ್ರೋಮಿಕೋ ಅವರು ಮಾಡಿರುವ ನಿರ್ಧಾರ ಸಂತೋಷದ ವಿಷಯ ಎಂದು ಅವರು ತಿಳಿಸಿದ್ದಾರೆ.

ಎಲ್ಲರೂ ಒಂದಾದರೆ ಬಿಸಿಪ್ರಳಯವನ್ನು ತಡೆಯಬಹುದು; ಇಲ್ಲಾಂದರೆ ಎಲ್ಲರದ್ದೂ ಒಂದೇ ಭವಿಷ್ಯ

# ಅಪಾಯ ಬಂದಿದೆ, ಅಡಗಲು ಸ್ಥಳವೆಲ್ಲಿ?



ವಿಜ್ಞಾನ- ವಿಶೇಷ

ನಾಗೇಶ ಹೆಗಡೆ

**ಹೀಗೊಂದು** ಸಾಧ್ಯತೆಯನ್ನು ಊಹಿಸಿಕೊಳ್ಳಿ: ಸೌರ ಮಂಡಲದ ಅಂಚಿಗೆಲ್ಲೋ ಸುತ್ತುತ್ತಿದ್ದ ಧೂಮಕೇತು ತನ್ನ ಕಕ್ಷೆಯಿಂದ ಮೇಲೆದ್ದು ಹೊರಟಿದೆ. ಅದು ಹೊರಟಿದೆ ಎಂಬುದು 20 ವರ್ಷಗಳ ಹಿಂದೆ ಮಬ್ಬು ಮಬ್ಬಾಗಿ ಕಂಡಿತ್ತು. ಹತ್ತು ವರ್ಷಗಳಿಂದ ಸ್ಪಷ್ಟವಾಗಿ ಕಾಣಿಸುತ್ತಿರುವ ಅದು ನಮ್ಮ ಭೂಮಿಯತ್ತಲೇ ಬರುತ್ತಿದೆ ಎಂಬುದೂ ಗೊತ್ತಾಗಿದೆ. ಅದು ಸಮೀಪ ಬಂದಂತೆಲ್ಲ ಇಲ್ಲಿ ಉತ್ಪಾತಗಳು ಹೆಚ್ಚುತ್ತಿವೆ. ಸೆಕೆ, ಕಾಡಿನ ಬೆಂಕಿ, ಭೂಕುಸಿತ, ಚಂಡಮಾರುತ, ಮಿಡತೆಮೇಳ, ಮೇಘಸ್ಫೋಟ, ದಿಢೀರ್ ಜಡಿಮಳೆ ಎಲ್ಲರ ಅನುಭವಕ್ಕೆ ಬರುತ್ತಿವೆ. ಆ ಧೂಮಕೇತುವಿನ ಮೇಲೆ ಕಣ್ಣಿಟ್ಟ ತಜ್ಞರ ತಂಡವೊಂದು ‘ಇನ್ನು 30 ವರ್ಷಗಳಲ್ಲಿ ಭೂಪ್ರಳಯ ಸಂಭವಿಸಲಿದೆ. ಸಜ್ಜಾಗಿರಿ’ ಎಂದು ಆರನೇ ಎಚ್ಚರಿಕೆ ಗಂಟೆಯನ್ನು ಮೊಳಗಿಸಿದೆ. ನಾವೇನು ಮಾಡುತ್ತೇವೆ? ಮಾಡಬೇಕು?

ವಾಸ್ತವದಲ್ಲಿ ಈ ಅಪಾಯ ದೂರದ ಧೂಮಕೇತುವಿನಿಂದ ಅಲ್ಲ, ನಮ್ಮಿಂದಾಗಿಯೇ ಎದುರಾಗಿದೆ. ಭೂಮಿ ಹಿಂದೆಂದಿಗಿಂತ ಜಾಸ್ತಿ ವೇಗದಲ್ಲಿ ಬಿಸಿಯಾಗುತ್ತಿದೆ ಎಂದು ಇದೀಗ ವಿಶ್ವಸಂಸ್ಥೆಯ ಐಪಿಸಿಸಿ ತಂಡ ತನ್ನ ಆರನೇ ಎಚ್ಚರಿಕೆಯ ವರದಿಯನ್ನು ಮುಂದಿಟ್ಟಿದೆ. ‘ಅಷ್ಟೇ ತಾನೆ, ಐದರ ಜೊತೆ ಆರನೇದು’ ಎನ್ನುವಂತಿಲ್ಲ. ಈ ವರದಿಯಲ್ಲಿ ಅನೇಕ ವಿಶೇಷಗಳಿವೆ. ಎಲ್ಲಕ್ಕಿಂತ ಮುಖ್ಯ ಏನೆಂದರೆ ಈಗಾಗಲೇ ಈ ವರದಿಯ ಮುಖ್ಯಾಂಶಗಳ ಪ್ರತೀ ಸಾಲನ್ನೂ 165 ದೇಶಗಳ ಸರ್ಕಾರಿ ಪ್ರತಿನಿಧಿಗಳು ಆಗಲೇ ಓದಿ, ಒಪ್ಪಿ, ಸಹಿ ಹಾಕಿದ್ದಾರೆ. ಅದರಲ್ಲಿನ ಐದು ಮುಖ್ಯಾಂಶಗಳೆಂದರೆ:

1. ಬಿಸಿಪ್ರಳಯ ಭೂಮಿಯ ಎಲ್ಲ ಭಾಗವನ್ನೂ ಪ್ರಭಾವಿಸುತ್ತಿದೆ. ಆದರೆ ಅದರ ಪರಿಣಾಮಗಳು ಏಕರೂಪವಾಗಿರುವುದಿಲ್ಲ. ಸಮುದ್ರದ ಉಷ್ಣಕ್ಕಿಂತ ನೆಲದ ಉಷ್ಣತೆ ಜಾಸ್ತಿ ಏರುತ್ತಿದೆ. ಅಟ್ಲಾಂಟಿಕ್ ಸಾಗರಕ್ಕಿಂತ ಅರಬ್ಬೀ ಸಮುದ್ರ ಹೆಚ್ಚು ಬಿಸಿಯಾಗುತ್ತಿದೆ. ಎತ್ತರದ ಪ್ರದೇಶಗಳ ಸಂಕಷ್ಟ ಹೆಚ್ಚುತ್ತದೆ. ಸಮುದ್ರಪಾತಳಿಯ ಸಂಕಷ್ಟಗಳೂ ಹೆಚ್ಚುತ್ತವೆ.

2. ಎಲ್ಲೆಲ್ಲೂ ಚಳಿಗಾಲದ ಅವಧಿ ಕಡಿಮೆಯಾಗುತ್ತ ಬೇಸಿಗೆ ಹೆಚ್ಚುತ್ತ ಹೋಗಲಿದೆ. ಹಿಮಖಂಡಗಳು ಇನ್ನಷ್ಟು ಶೀಘ್ರವಾಗಿ ಕರಗುತ್ತವೆ.

3. ಜಲಚಕ್ರ ವೇಗವಾಗಿ ಸುತ್ತುತ್ತದೆ. ಅಂದರೆ, ಸಮುದ್ರದ ನೀರು ಆವಿಯಾಗಿ ಮೋಡಗಟ್ಟುವ ವೇಗ, ಅದು ಮಳೆಯಾಗಿ, ಹೊಳೆಯಾಗಿ ಸಮುದ್ರಕ್ಕೆ ಸೇರುವ ವೇಗ ಎಲ್ಲವೂ ಹೆಚ್ಚುತ್ತವೆ.

4. ಆದಷ್ಟು ಬೇಗ, ಆದಷ್ಟು ದೊಡ್ಡ ಪ್ರಮಾಣದಲ್ಲಿ ಆದಷ್ಟು ಹೆಚ್ಚು ದೇಶಗಳು ಫಾಸಿಲ್ ಇಂಧನಗಳ ಬಳಕೆಯನ್ನು ಕಡಿತ ಮಾಡದೇ ಇದ್ದರೆ ಸರಾಸರಿ ತಾಪವನ್ನು ಒಂದೂವರೆ ಡಿಗ್ರಿಗೆ ನಿರ್ಬಂಧಿಸುವುದು ಕಷ್ಟವಾಗಲಿದೆ. ಎರಡು ಡಿಗ್ರಿ ಅಥವಾ ಅದಕ್ಕಿಂತ ಹೆಚ್ಚಾಗುವ ಸಂಭವ ಇದೆ.

5. ಹಾಗೇನಾದರೂ ಆದರೆ ಸಾವಿರ ವರ್ಷಗಳಲ್ಲೊಮ್ಮೆ ಸಂಭವಿಸುವ ಗರಿಷ್ಠ (ಮಳೆ, ಸೆಕೆ, ಗಾಳಿಯ ವೇಗದ) ದಾಖಲೆಗಳೆಲ್ಲ ಪ್ರತೀ ದಶಕದ, ಪ್ರತೀ ವರ್ಷದ ದಾಖಲೆ ಗಳಾಗುತ್ತವೆ. ಮುಂದಿನ ಅನೇಕ ಶತಮಾನಗಳವರೆಗೆ ಪೃಥ್ವಿ ತನ್ನನ್ನು ತಾನು ಸರಿಪಡಿಸಿಕೊಳ್ಳಲಾಗದು.

ಐಪಿಸಿಸಿ ವರದಿಯ ಸಿದ್ಧತೆಯೇ ಬೆರಗು ಹುಟ್ಟಿಸುವಂಥದ್ದು. ಇಡೀ ಮನುಕುಲದ ಸಾಮೂಹಿಕ ಪ್ರಜ್ಞೆಯನ್ನು ಎಚ್ಚರಿಸಲೆಂದೇ ತಯಾರಿಸುವ ವರದಿ ಕೂಡ ತುಂಬ ಎಚ್ಚರಿಕೆಯಿಂದಲೇ ಸಿದ್ಧವಾಗಬೇಕಾಗುತ್ತದೆ. ಅದು ಎಲ್ಲ ವಿಧದಲ್ಲೂ ದೋಷಮುಕ್ತ ಇರಬೇಕು. ಅದರಲ್ಲಿ ಎಲ್ಲ ದೇಶಗಳ ಹಿತಾಸಕ್ತಿ ಇರಬೇಕು. ತೈಲದೊರೆಗಳದ್ದೇ ಪಾರುಪತ್ಯ ಇರುವಂಥ ಕೊಲ್ಲಿ ರಾಷ್ಟ್ರಗಳ ನಾಯಕರೂ ಅದಕ್ಕೆ ಸಹಿ ಹಾಕುವಂತಿರಬೇಕು. ಅದನ್ನು ನಿಭಾಯಿಸಿದ್ದಕ್ಕೇ ಐಪಿಸಿಸಿಗೆ 2007ರಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿದೆ. 6ನೇ ವರದಿಯಲ್ಲಿ ವಿವಿಧ ದೇಶಗಳ 234 ವಿಜ್ಞಾನಿಗಳು ಭೂಮಿಯ ವಿವಿಧ ಕಡೆ ಸಮೀಕ್ಷೆ ನಡೆಸಿ ಪ್ರಕಟಿಸಿದ 14 ಸಾವಿರ ಪ್ರಬಂಧಗಳನ್ನು ಆಧರಿಸಿ 3,949 ಪುಟಗಳ ವರದಿಯನ್ನು ಸಿದ್ಧಪಡಿಸಿ, ಅದನ್ನೂ ಜಾಗತಿಕ ಮಟ್ಟದ ಮೂರು ಸಭೆಗಳಲ್ಲಿ ಚರ್ಚಿಸಿದ ನಂತರವೇ ಇದು ಹೊರ ಬಂತು.

ವಿಜ್ಞಾನಿಗಳ ಎಚ್ಚರಿಕೆಗಿಂತ ದೊಡ್ಡ ದನಿಯಲ್ಲಿ ಪೃಥ್ವಿಯ ಆಕ್ರಂದನ ಎನ್ನಿ, ಗರ್ಜನೆ ಎನ್ನಿ, ಅದರ ಎಚ್ಚರಿಕೆಯೇ ಎಲ್ಲೆಲ್ಲೂ ಮೊಳಗುತ್ತಿದೆ. ವರದಿಯ ಪರಿಧಿಯೊಳಗೂ ಬಾರದಿದ್ದ ವಿಲಕ್ಷಣ ಸಂಗತಿಗಳು ದಾಖಲಾಗುತ್ತಿವೆ. ಕೆನಡಾ- ಅಮೆರಿಕ, ಯುರೋಪ್‌ನಲ್ಲಿ ಉರಿಗೋಲಗಳು (ಹೀಟ್ ಡೋಮ್) ಸೃಷ್ಟಿಯಾಗುತ್ತಿವೆ. ರಷ್ಯಾದ ಸೈಬೀರಿಯಾದಲ್ಲಿ ಹಿಮಪದರಗಳು ಅಲ್ಲಲ್ಲಿ ಆಸ್ಫೋಟಿಸಿ ಭಾರೀ ಹಂಡೆಗಳಂಥ ಕಂದರಗಳನ್ನು ಸೃಷ್ಟಿಸುತ್ತಿವೆ. ಅಮೆಝಾನ್ ಕಾಡಿನಲ್ಲಿ ಬೆಂಕಿ ಅದೆಷ್ಟು ಹೆಚ್ಚಿದೆ ಎಂದರೆ ಇನ್ನೇನು ಅದು ಪಲ್ಟಿಬಿಂದುವನ್ನು ತಲುಪುವ (ಅಂದರೆ ಆ ಕಾಡು ಕಾರ್ಬನ್ನನ್ನು ಹೀರಿಕೊಳ್ಳುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೊರಕಕ್ಕುವ) ದಿನಗಳು ಬರಲಿವೆ. ಯುರೋಪ್‌ನಲ್ಲಿ ಎರಡು ತಿಂಗಳಲ್ಲಿ ಸುರಿಯಬೇಕಿದ್ದ ಮಳೆ ಎರಡೇ ದಿನಗಳಲ್ಲಿ ಸುರಿದಿದೆ. ಅಲ್ಲೇ ಗ್ರೀಸ್ ದೇಶದ ಈವಿಯಾಸ್ ದ್ವೀಪದಲ್ಲಿ ಪುರಾತನ ಇಡೀ ಕಾಡು ಹೊತ್ತಿ ಉರಿದಿದ್ದು ಅದನ್ನು ತಡೆಯಲಾಗದ್ದಕ್ಕೆ ಅಲ್ಲಿನ ಪ್ರಧಾನಿ ರಾಷ್ಟ್ರದ ಕ್ಷಮೆ ಕೋರಿದ್ದಾರೆ. ಉಪಗ್ರಹ ಚಿತ್ರದಲ್ಲೂ ಕಾಣುವ ಟರ್ಕಿಯ ಅಗ್ನಿಜ್ವಾಲೆಯ ಬೆನ್ನಿಗೇ ಮೇಘಸ್ಫೋಟವೂ ಸಂಭವಿಸಿ ಬೂದಿಯ ಮಹಾಪೂರ ಬಂದಿದೆ. ಮಧ್ಯಚೀನಾದಲ್ಲಿ ಮೆಟ್ರೊ ಸುರಂಗದಲ್ಲಿ ನೀರು ನುಗ್ಗಿದ್ದರಿಂದ ಪ್ರಾಣ ಬಿಟ್ಟ ಪ್ರಯಾಣಿಕರ ಲೆಕ್ಕ ಎಷ್ಟೆಂದು ನಿಖರ ಗೊತ್ತಾಗಬೇಕಿದೆ.

ಪ್ರಳಯವನ್ನು ಎದುರಿಸಲು ನಾವು ಏನು ಮಾಡೋಣ? ಈ ಪ್ರಶ್ನೆಯಲ್ಲಿ ‘ನಾವು’ ಎಂಬುದಕ್ಕೆ ಒಂದು ಕುಟುಂಬ, ಸಮೂಹ, ರಾಜ್ಯ, ರಾಷ್ಟ್ರ ಹೀಗೆ ವಿವಿಧ ಆಯಾಮಗಳಿವೆ. ಅವೆಲ್ಲಕ್ಕೆ ಮಿಗಿಲಾಗಿ ನಮ್ಮೆಲ್ಲರನ್ನೂ ಅಮರಿಕೊಂಡಿರುವ ಕಾರ್ಪೊರೇಟ್ ಸಂಸ್ಥೆಗಳಿವೆ. ಈಲಾನ್ ಮಸ್ಕ್ ಬ್ಯಾಟರಿಚಾಲಿತ ಕಾರುಗಳನ್ನು, ಗಗನ ನೌಕೆಗಳನ್ನು, ಬಿಲ್ ಗೇಟ್ಸ್ ಮತ್ತು ವಾರೆನ್ ಬಫೆಟ್ಸ್ ಸೇರಿ ನ್ಯೂಕ್ಲಿಯರ್ ವಿದ್ಯುತ್ ಸ್ಥಾವರಗಳನ್ನೂ ಅದಾನಿಯವರು ಸೌರ ಸಾಮ್ರಾಜ್ಯಗಳನ್ನೂ ನಿರ್ಮಿಸುತ್ತಿದ್ದಾರೆ. ಸಂಕಷ್ಟಕ್ಕೆ ಸಿಲುಕಬಲ್ಲವರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಿ ಬದಲೀ ಉದ್ಯೋಗ ಸೃಷ್ಟಿಸಬೇಕು. ಅರಣ್ಯಗಳನ್ನು ಸೃಷ್ಟಿಸಬೇಕು. ಆಹಾರ ಉತ್ಪಾದನೆಯ ಬದಲೀ ಸಾಧ್ಯತೆಗಳನ್ನು ಪರಿಚಯಿಸಬೇಕು. ನಗರ ವಿಸ್ತರಣೆಯನ್ನು ಪ್ರತಿಬಂಧಿಸಬೇಕು. ಪ್ರತಿಷ್ಠೆಗೆಂದು ಗೂಟದ ಕಾರಿನ ಹಿಂದೆ ಡಝನ್ ಕಾರುಗಳನ್ನು ಓಡಿಸುವ ರಾಜಕಾರಣಿಗಳಿಗೆ, ಅವರನ್ನು ಆಶೀರ್ವದಿಸಲು ನಿಂತ ಸ್ವಾಮೀಜಿಗಳಿಗೆ ಪಾಠ ಹೇಳಬೇಕು... ಒಂದೆ ಎರಡೆ?

ನಾವು ಬಿಸಿಪ್ರಳಯವನ್ನು ಎದುರಿಸಲು ನಡೆಸುವ ಸಿದ್ಧತೆಯೇ ಅದರ ಅಪಾಯವನ್ನು ಇನ್ನಷ್ಟು ಹೆಚ್ಚಿಸಬಹುದು. ಸೆಕೆಯನ್ನು ತಡೆಯಲೆಂದು ಇನ್ನಷ್ಟು ಹವಾ ನಿಯಂತ್ರಕಗಳು ಬಳಕೆಯಾಗುತ್ತವೆ (ಚೀನಾದ ಹೆ ಷಾಂಜನ್ ಎಂಬಾತ ಎ.ಸಿ. ಯಂತ್ರಗಳನ್ನು ಮಾರಿ ಶತಕೋಟ್ಯಧೀಶರ ಪಟ್ಟಿಗೆ ಸೇರಿದ್ದಾನೆ.) ಕೃಷಿಯ ಸಂಕಟಗಳು ಹೆಚ್ಚಿದಂತೆಲ್ಲ ನಗರಗಳಿಗೆ ಧಾವಿಸುವವರ ಸಂಖ್ಯೆ ಹೆಚ್ಚಾಗಬಹುದು. ನಗರಕ್ಕೆ ಹೇಗಾದರೂ ವಿದ್ಯುತ್ತು, ನೀರು, ಸಾರಿಗೆ ಇನ್ನಷ್ಟು ಕಲ್ಲಿದ್ದಲು, ಇನ್ನಷ್ಟು ಮೆಟ್ರೊ, ಇನ್ನಷ್ಟು ಕೊಳವೆಬಾವಿ, ಇನ್ನಷ್ಟು ದೊಡ್ಡ ಡ್ಯಾಮ್, ಇನ್ನಷ್ಟು ಟ್ಯಾಂಕರ್‌ಗಳು ಬೇಕಾಗುತ್ತವೆ. ನಿಭಾಯಿಸಬೇಕು.

ಈ ಮಧ್ಯೆ ‘ಎಲ್ಲರನ್ನೂ ಒಳಗೊಳ್ಳುವ’ ಧೋರಣೆ ಅಲ್ಲಲ್ಲಿ ಕಾಣುತ್ತಿದೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ‘ಇನ್ನಷ್ಟು ವೇಗ’, ‘ಇನ್ನಷ್ಟು ಎತ್ತರ’, ‘ಇನ್ನಷ್ಟು ಪ್ರಬಲ’ ಎಂಬ ಮಾಮೂಲಿನ ಮೂರು ಘೋಷಪದಗಳ ಜೊತೆಗೆ ಇದೇ ಮೊದಲ ಬಾರಿಗೆ ‘ನಾವೆಲ್ಲ ಒಂದಾಗಿ’ ಎಂಬ ಮಾತನ್ನೂ ಸೇರಿಸಲಾಗಿದೆ. ಮೊನ್ನೆ ಆಗಸ್ಟ್ 9ರ ‘ವಿಶ್ವ ಮೂಲನಿವಾಸಿ ದಿನ’ದ ಸಂದರ್ಭದ ಘೋಷಣೆಯೂ ‘ಯಾರೂ ಹಿಂದುಳಿಯಬಾರದು’ ಎಂತಲೇ ರೂಪಿತವಾಗಿದೆ. ಭೂಮಿ ಸಂಕಷ್ಟ ನಿವಾರಣೆಯಲ್ಲೂ ಎಲ್ಲರನ್ನೂ ತೊಡಗಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ.

ನಾವೆಲ್ಲ ಒಂದಾದರೆ ವಿಪತ್ತನ್ನು ತಡೆಯಲು ಈಗಲೂ ಸಮಯವಿದೆ. ಒಂದಾಗಲು ವಿಫಲರಾದರೆ ‘ನಮ್ಮೆಲ್ಲರದೂ ಒಂದೇ ಭವಿಷ್ಯ’.



## ಚುರುಮುರಿ



### ನಮ್ಮ ಒಲಿಂಪಿಕ್ಸ್

• ಆನಂದ

‘ಒಲಿಂಪಿಕ್ಸ್ ಹೀರೊಗಳಿಗೆ ಸರ್ಕಾರಗಳು ಘೋಷಿಸಿರುವ ನಗದು ಬಹುಮಾನ ಮುಂದಿನ ಒಲಿಂಪಿಕ್ಸ್ ಹೊತ್ತಿಗೆ ಅವರಿಗೆ ಸಿಗಬಹುದೇನು?’ ಎಂದು ಹೆಂಡತಿ ಕೇಳಿದಾಗ ಆಶ್ಚರ್ಯವಾಯಿತು.

‘ಫೈಲ್ ಪುಟ್‌ಅಪ್ ಆಗಬೇಕು, ವಿವಿಧ ಮಂದಿಯ ಸಹಿ ಬೀಳಬೇಕು, ಇಲಾಖೆಗೆ ಅನುದಾನ ಬಿಡುಗಡೆ ಆಗಿಲ್ಲ ಎಂದರೆ ಅದನ್ನು ಮಂಜೂರು ಮಾಡಿಸಿಕೊಳ್ಳಬೇಕು, ಎಷ್ಟು ಪ್ರೊಸೀಜರ್ಸ್ ಇದೆ. ಇದೇನು ಚೋಪ್ರಾ ಜಾವೆಲಿನ್ ಎಸೆದಷ್ಟು ಸುಲಭ ಅಂದುಕೊಂಡಿರಾ? ಎಲ್ಲಾ ಹೇಗೋ ಮುಗಿ(ಸಿ)ದ ಮೇಲೆ ಮಂತ್ರಿಗಳ ಬಳಿ ಹೋಗಬೇಕು, ಚೆಕ್ ವಿತರಣೆ ಮಾಡಲು ಅವರು ಡೇಟ್ ಕೊಡಬೇಕು, ಅವರಿಗೆ ಸಾವಿರಾರು ಕೆಲಸಗಳಿರುತ್ತವೆ...’ ಎಲ್ಲ ವಿವರಣೆಯನ್ನೂ ಅವಳೇ ಕೊಡುತ್ತಿದ್ದಳು.

‘ಅಂದಹಾಗೆ ನಮ್ಮದೇ ಆದ ರಾಜಕೀಯ ಒಲಿಂಪಿಕ್ಸ್ ಇದ್ದರೆ ಯಾರು ಯಾರಿಗೆ ಚಿನ್ನ ಸಿಗಬಹುದು?’ ಎಂದು ಕೇಳಿದಳು. ‘ನೀನೇ ಹೇಳು’ ಎಂದೆ. ‘ಬ. ಬೊಮ್ಮಾಯಿ ಅವರಿಗೆ ಮಾರ್ಗದರ್ಶನ ಮಾಡಲಿರುವ ಬಿಎಸ್‌ವೈ ಅವರಿಗೆ ಕೋಚ್ ಅವಾರ್ಡ್. ಉಪ ಮುಖ್ಯಮಂತ್ರಿ ಆಗದೆ ಮುನಿಸಿಕೊಂಡಿದ್ದರೂ ಜನಸೇವೆ ಎಂಬ ಏಕೈಕ ಕಾರಣಕ್ಕೆ ಬರೀ ಮಂತ್ರಿ ಆಗಲು ಒಪ್ಪಿರುವವರಿಗೆ ಪದಕ ಕೊಡಲೇಬೇಕು. ಏನಂತೀರಿ?’

ನಾನು ಸುಮ್ಮನಿದ್ದೆ.

‘ಚೋಪ್ರಾನಂತೆ ಮೊದಲ ಜಿಗಿತದಲ್ಲೇ ದಾಖಲೆ ಮಾಡಿದ ಜ್ಞಾನೇಂದ್ರ ಮತ್ತು ಸುನಿಲ್ ಕುಮಾರ್‌ಗೂ ಸಿಗಬೇಕು. ‘ಏಕವಚನ ಪ್ರಯೋಗಪಟು’ ಎಂಬ ಅವಾರ್ಡ್ ಸಿದ್ದರಾಮಯ್ಯನವರಿಗೇ ಮೀಸಲು’ ಎಂದಳು.

‘ಒಂದೆರಡು ಸಮಾಧಾನಕರ ಬಹುಮಾನಗಳೂ ಇವೇರಿ’ ಎಂದಳು. ಹೇಳು ಎಂದೆ. ಕೇಳೋದಷ್ಟೇ ನನ್ನ ಕೆಲಸ. ‘ಎಲ್ಲರನ್ನೂ ಪಾಸ್ ಮಾಡಿಸಿ ತಾವು ಮಾತ್ರ ಹಾಗೇ ಉಳಿದುಕೊಂಡ ಸುರೇಶ್ ಕುಮಾರ್ ಮತ್ತು ಪಾಪ, ಏನೂ ಗಿಟ್ಟಿಸಿಕೊಳ್ಳದ ಮಾಜಿ ಸೂಪರ್ ಮುಖ್ಯಮಂತ್ರಿ ವಿಜಯೇಂದ್ರ ಅವರಿಗೆ ಕಣ್ಣೊರೆಸುವ ಬಹುಮಾನ ನೀಡಲೇಬೇಕು’ ಎಂದಳು. ಮುಗಿಯಿತು ಎಂದುಕೊಂಡೆ.

‘ಹಗರಣ ನಡೆಯುವುದಕ್ಕೆ ಮುಂಚೆಯೇ ‘ಸೂಕ್ತ ಸಮಯದಲ್ಲಿ ದಾಖಲೆ ಬಿಡುಗಡೆ ಮಾಡುವೆ’ ಎಂದು ಹೆದರಿಸುವ ಎಚ್‌ಡಿಕೆಗೂ ಬಹುಮಾನ ಕೊಡಲೇಬೇಕ್ರಿ’ ಎಂದಳು.

‘ಕೊಡು’ ಎಂದೆ.

## ಸಂಗತ

# ಗ್ರಂಥಾಲಯ: ಮಾಹಿತಿಗಷ್ಟೇ ಅಲ್ಲ

ಸಾರ್ವಜನಿಕ ಗ್ರಂಥಾಲಯಗಳನ್ನು ಮತ್ತಷ್ಟು ಸಶಕ್ತಗೊಳಿಸುವ ಅನಿವಾರ್ಯ ಇದೆ

• ವಸಂತ ರಾಜು ಎನ್.

**‘ಪೋಸ್ಟ್-ಟ್ರೂತ್’** ಎನ್ನುವ ಪದವನ್ನು ಕನ್ನಡದಲ್ಲಿ ಸತ್ಯೋತ್ತರ ಕಾಲಘಟ್ಟ ಎಂದು ಹೆಸರಿಸಲಾಗಿದೆ. 2016ರಲ್ಲಿ ಈ ಪದವನ್ನು ‘ವರ್ಷದ ಪದ’ ಎಂದು ಪ್ರಸಿದ್ಧ ಆಕ್ಸ್‌ಫರ್ಡ್ ನಿಘಂಟು ಗುರುತಿಸಿತು. ಫೇಸ್‌ಬುಕ್, ಟ್ವಿಟರ್, ಯುಟ್ಯೂಬ್, ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಯಾವ ಮಾಹಿತಿಯನ್ನು ಬೇಕಾದರೂ ಹಂಚಿಕೊಳ್ಳುವ ಅವಕಾಶ ದೊರೆತಾಗ, ಅನೇಕರು ಇವುಗಳ ಮೂಲಕ ಸುಳ್ಳಿನ ಸರಮಾಲೆಗಳನ್ನೇ ಪಸರಿಸಲು ಪ್ರಾರಂಭಿಸಿದರು. ಇದರಿಂದ, ಅಸಂಖ್ಯ ಜನಸಮುದಾಯಕ್ಕೆ ಸತ್ಯ ಮತ್ತು ಸುಳ್ಳಿನ ನಡುವಿನ ಅಂತರವನ್ನು ಗುರುತಿಸಲು ಸಾಧ್ಯವಾಗದ ಪರಿಸ್ಥಿತಿ ತಲೆದೋರಿತು. ಜನರನ್ನು ವಾಸ್ತವಾಂಶಗಳಿಂದ ವಿಮುಖಗೊಳಿಸಿ, ಅವರು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗದಂತಹ ಪರಿಸ್ಥಿತಿಯನ್ನು ಸೃಷ್ಟಿಸಲಾಯಿತು.

ಇದು, ಮತದಾನಕ್ಕೆ ಸಂಬಂಧಿಸಿದ ಜನರ ಮನೋಭಾವವನ್ನೂ ಬದಲಿಸಿತು. ಇದರಿಂದ ಅನೇಕ ದೇಶಗಳ ಚುನಾವಣಾ ಫಲಿತಾಂಶಗಳೇ ಬದಲಾದ ಉದಾಹರಣೆಗಳಿವೆ. ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ರಾಜಕಾರಣದಲ್ಲಿ ಸುಳ್ಳು ಮಾಹಿತಿಗಳನ್ನು ಸತ್ಯವೆಂಬಂತೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಿದವು. ಕೆಲವರು, ವಾಟ್ಸ್‌ಆ್ಯಪ್ ಮೂಲಕ ಸುಳ್ಳು ಸುದ್ದಿಗಳನ್ನು ಹಂಚಿಕೊಂಡು ಗುಂಪುಹತ್ಯೆಗಳಿಗೆ ಕಾರಣರಾದರು. ಉತ್ತರ ಭಾರತದ ಕೆಲವೆಡೆ ಮಕ್ಕಳನ್ನು ಅಪಹರಿಸುವ ಗುಂಪುಗಳೆಂದು ಬಗೆದು ಅಪರಿಚಿತ ವ್ಯಕ್ತಿಗಳನ್ನು ಗುಂಪುಹತ್ಯೆ ಮಾಡಲಾಯಿತು. ಇಂತಹ ಬೆಳವಣಿಗೆಗೆ ಕಡಿವಾಣ ಹಾಕುವಂತೆ ಸರ್ಕಾರವು ಪತ್ರಿಕೆಗಳ ಮೂಲಕ ಜಾಹೀರಾತು ನೀಡುವಂತಾಯಿತು. ಈ ಬಗೆಯ ಸುಳ್ಳುಸುದ್ದಿಗಳ ಪ್ರಸರಣ ತಡೆಗಟ್ಟುವಲ್ಲಿ ಈಗಿನ ಸತ್ಯೋತ್ತರ ಕಾಲಘಟ್ಟದಲ್ಲಿ ಗ್ರಂಥಾಲಯಗಳು ಮಹತ್ವದ ಪಾತ್ರ ವಹಿಸಬೇಕಾಗಿದೆ.

ಭಾರತದಂತಹ ದೇಶಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳು ಜನಸಾಮಾನ್ಯರಿಗೆ ಮಾಹಿತಿ ತಲುಪಿಸುವಲ್ಲಿ ಅಥವಾ ಅವರನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಈ ಕಾರಣಕ್ಕೆ ಅವುಗಳನ್ನು ಜನಸಾಮಾನ್ಯರ ವಿಶ್ವವಿದ್ಯಾಲಯಗಳೆಂದು ಕರೆಯಲಾಗಿದೆ. ರಾಜಾರಾಮ್ ಮೋಹನರಾಯ್ ಗ್ರಂಥಾಲಯ ಪ್ರಾಧಿಕಾರದ ಪ್ರಕಾರ, ದೇಶದಲ್ಲಿ ವಿವಿಧ ಪ್ರಕಾರದ 46,746 ಸಾರ್ವಜನಿಕ ಗ್ರಂಥಾಲಯಗಳಿವೆ. ಎಲ್ಲ ವಯೋಮಾನದ, ಅನೇಕ ಧರ್ಮ, ಜಾತಿಗಳ ಜನರು ವಿವಿಧ ಬಗೆಯ ಮಾಹಿತಿಗಳನ್ನು ಪಡೆಯಲು ಇಲ್ಲಿಗೆ ಭೇಟಿ ನೀಡುತ್ತಾರೆ. ಇವು ನಿಖರ ಮತ್ತು ಅಧಿಕೃತ ಮಾಹಿತಿಗಳನ್ನು ಓದುಗರಿಗೆ ತಲುಪಿಸುವ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿವೆ.

ಇಂದು ಈ ಕಾರ್ಯ ಮತ್ತಷ್ಟು ಅನಿವಾರ್ಯವಾಗಿದೆ. ಸುಳ್ಳು ಸುದ್ದಿಗಳನ್ನು ಪರಾಮರ್ಶಿಸುವ ಸಂಬಂಧ ಗ್ರಂಥಾಲಯಗಳು ತಮ್ಮ ಓದುಗರಿಗೆ ಅನೇಕ ರೀತಿಯಲ್ಲಿ ನೆರವಾಗಬಹುದಾಗಿದೆ. ಚಿತ್ರಪಟಗಳ ಪ್ರದರ್ಶನ, ಸೈನೇಜ್ ಅಥವಾ ಸಂಕೇತಗಳ ಅಳವಡಿಕೆ, ಸಂಬಂಧಿಸಿದ ಪುಸ್ತಕಗಳು, ಲೇಖನಗಳ ಪಟ್ಟಿಯನ್ನು ಒದಗಿಸಬಹುದಾಗಿದೆ. ಚಿಕ್ಕ ಚಿಕ್ಕ ವಿಡಿಯೊಗಳ ಮೂಲಕ ಮಾಹಿತಿಯ ನಿಖರತೆಯನ್ನು ಗುರುತಿಸಲು ಸಾಧ್ಯವಾಗುವಂತೆ ಮಾಡಬಹುದಾಗಿದೆ. ಸ್ವತಃ ಅಥವಾ ಇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ವಿಶೇಷ ಉಪನ್ಯಾಸಗಳನ್ನು ಆಯೋಜಿಸಬಹುದಾಗಿದೆ. ಅಮೆರಿಕ, ಕೆನಡಾ ಮತ್ತು ಇಂಗ್ಲೆಂಡ್‌ನ ಅನೇಕ ಗ್ರಂಥಾಲಯಗಳು ಸುಳ್ಳು ಸುದ್ದಿಗಳ ವಿಶ್ಲೇಷಣೆಗೆ ಪೂರಕವಾಗಿ ಮಾಹಿತಿಗಳನ್ನು ಒದಗಿಸುತ್ತಿವೆ.

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಗ್ರಂಥಾಲಯಗಳಿಗೆ ಹಣಕಾಸು ಮೂಲಗಳನ್ನು ಕಡಿತಗೊಳಿಸಲಾಗುತ್ತಿದೆ. ಇದರಿಂದ ಅವು ಸಮುದಾಯದ ಅಭ್ಯುದಯ ಕಾರ್ಯದಲ್ಲಿ ತೊಡಗಲು ಕಷ್ಟವಾಗುತ್ತಿದೆ. ಸಾಮಾಜಿಕ ಜಾಲತಾಣಗಳು ಬೀರುತ್ತಿರುವ ನಕಾರಾತ್ಮಕವಾದ ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳನ್ನು ಗಮನಿಸಿದರೆ, ಸಾರ್ವಜನಿಕ ಗ್ರಂಥಾಲಯಗಳನ್ನು ಮತ್ತಷ್ಟು ಸಶಕ್ತಗೊಳಿಸುವ ಅನಿವಾರ್ಯ ಇರುವುದರ ಅರಿವಾಗುತ್ತದೆ. ಈ ತಾಣಗಳಿಗೆ ಜನಸಮುದಾಯಗಳನ್ನು ಜ್ಞಾನಸಂಪನ್ನರನ್ನಾಗಿ ರೂಪಿಸುವ ಅಪಾರ ಶಕ್ತಿ ಇದೆ ಎನ್ನುವುದನ್ನು ನಾವು ಮರೆಯಬಾರದು.



ಅಮೆರಿಕದ ಮಿಚಿಗನ್ ವಿಶ್ವವಿದ್ಯಾಲಯವು ಸುಳ್ಳು ಸುದ್ದಿಗಳ ಬಗ್ಗೆ ತನ್ನ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಆ ಬಗ್ಗೆ ಸವಿವರವಾದ ಮಾಹಿತಿಯ ಮೂಲಗಳನ್ನು ತನ್ನ ಅಂತರ್ಜಾಲ ತಾಣದಲ್ಲಿ ನೀಡಿದೆ. ಸುತ್ತಮುತ್ತಲಿನ ಸಮುದಾಯಗಳನ್ನು ಒಳಗೊಂಡು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇದರಲ್ಲಿ, ವಿಶ್ವವಿದ್ಯಾಲಯದ ಗ್ರಂಥಾಲಯ ಮಹತ್ತರ ಪಾತ್ರ ವಹಿಸಿದೆ.

ಕೇರಳದಲ್ಲಿ ಕಣ್ಣೂರಿನ ಜಿಲ್ಲಾಧಿಕಾರಿ ಮಿರ್ ಮಹಮದ್ ಅಲಿ ಅವರು ‘ಸತ್ಯಮೇವ ಜಯತೆ’ ಎನ್ನುವ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳನ್ನು ದೊಡ್ಡ ಮಟ್ಟದಲ್ಲಿ ದೇಶದ ಅನೇಕ ಭಾಗಗಳಲ್ಲಿ ಶಿಕ್ಷಣ ಸಂಸ್ಥೆಗಳು ಹಮ್ಮಿಕೊಳ್ಳಬೇಕಾಗಿದೆ. ಆರೋಗ್ಯದಂತಹ ಪ್ರಮುಖ ವಿಷಯಗಳ ಬಗ್ಗೆ ಜನರಲ್ಲಿ ಭೀತಿ ಉಂಟು ಮಾಡುತ್ತಿರುವುದು, ಧರ್ಮಾಧಾರಿತ ಮಾಹಿತಿಗಳನ್ನು ತಿರುಚಿ ಕೋಮು ಗಲಭೆಗಳಿಗೆ ಅವಕಾಶ ಮಾಡಿಕೊಡುವುದಕ್ಕೆ ಸಾಮಾಜಿಕ ಜಾಲತಾಣಗಳು ದೊಡ್ಡ ಮಟ್ಟದಲ್ಲಿ ವೇದಿಕೆಗಳಾಗಿರುವುದು ನಮ್ಮ ಮುಂದಿದೆ. ಇಂತಹ ಸಮಯದಲ್ಲಿ, ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳುವಂತೆ ಮಾಡಲು ನಮ್ಮ ಗ್ರಂಥಾಲಯಗಳು ಮುಂದೆ ಬರಬೇಕಾಗಿರುವುದು ಇಂದಿನ ತುರ್ತು ಅಗತ್ಯವಾಗಿದೆ. ಅಂದಹಾಗೆ, ಇಂದು (ಆ. 12) ರಾಷ್ಟ್ರೀಯ ಗ್ರಂಥಾಲಯ ದಿನಾಚರಣೆ

ಲೇಖಕ: ಗ್ರಂಥಪಾಲಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಲಕಾಡು

## ವಾಚಕರ ವಾಣಿ

### ಖಾತೆ ನಿರಾಕರಣೆ: ಮಾನದಂಡವೇನು?

ರಾಜ್ಯದಲ್ಲಿ ಸಚಿವರಾಗಿ ಇತ್ತೀಚೆಗೆ ಪ್ರಮಾಣವಚನ ಸ್ವೀಕರಿಸಿದ ಕೆಲವರು ಖಾತೆ ಹಂಚಿಕೆಯ ನಂತರ ಅಸಮಾಧಾನ ಹೊರಹಾಕಿ, ಮುಖ್ಯಮಂತ್ರಿ ಮೇಲೆ ಒತ್ತಡ ತರುತ್ತಿರುವುದು ಸರಿಯಲ್ಲ. ಪರಿಸರ ಮತ್ತು ಪ್ರವಾಸೋದ್ಯಮ ಖಾತೆ ಕೊಟ್ಟಿರುವುದಕ್ಕೆ ಸಿಡಿದೆದ್ದಿರುವ ಆನಂದ್ ಸಿಂಗ್ ಅವರು, ಸಚಿವ ಹಾಗೂ ಶಾಸಕ ಸ್ಥಾನಕ್ಕೂ ರಾಜೀನಾಮೆ ಕೊಡುವಷ್ಟರ ಮಟ್ಟಿಗೆ ಬೇಸರಗೊಂಡಿದ್ದಾರೆ ಎಂದು ವರದಿಯಾಗಿದೆ.

ಖಾತೆಗಳಲ್ಲಿ ಮೇಲು-ಕೀಳು ಎಂಬುದನ್ನು ಇವರು ಯಾವ ಮಾನದಂಡದಿಂದ ಅಳೆಯುತ್ತಾರೋ ಗೊತ್ತಿಲ್ಲ. ಪರಿಸರ ಯಾವ ಲೆಕ್ಕದಲ್ಲಿ ಕೀಳು? ಇಂದು ಮತ್ತು ಇನ್ನುಮುಂದೆ ಈ ಭೂಮಿಯ ಮೇಲೆ ಮಾನವ ಸಂತತಿಯ ಅಳಿವು-ಉಳಿವಿನಲ್ಲಿ ನಿರ್ಣಾಯಕ ಪಾತ್ರ ವಹಿಸುವುದು ಈ ಪರಿಸರವೇ. ಮನುಷ್ಯನ ಸ್ವಯಂಕೃತ ಅಪರಾಧಗಳಿಂದಾಗಿ ಪರಿಸರ ಹಾಳಾಗಿ ಹಲವಾರು ಆತಂಕಗಳು ನಮ್ಮನ್ನು ಸುತ್ತುವರಿಯುತ್ತಿರುವ ಈ ಸಂದರ್ಭದಲ್ಲಿ, ಪರಿಸರದ ಉಳಿವೊಂದೇ ಆದ್ಯತಾ ವಿಷಯ. ಈ ಖಾತೆಯಲ್ಲಿ ಮಾಡುವಷ್ಟೂ ಕೆಲಸವಿದೆ (ಮಾಡಿದರೆ), ಗಳಿಸಬಹುದಾದಷ್ಟು ಕೀರ್ತಿಯೂ ಇದೆ. ಕ್ರಿಯಾಶೀಲ ಮನಸ್ಸುಗಳಿಗೆ ಇದರಷ್ಟು ಒಳ್ಳೆಯ ಖಾತೆ ಇನ್ನೊಂದಿಲ್ಲ. ನೂತನ ಸಚಿವರು ಸದರಿ ಖಾತೆಯನ್ನು ಕಾಲ ಕಸದಂತೆ ಪರಿಗಣಿಸಿದ್ದನ್ನು ನೋಡಿದರೆ, ಮಾನವನು ಪರಿಸರವನ್ನು ನಿರ್ಲಕ್ಷಿಸುತ್ತಿರುವುದರ ನಿದರ್ಶನದಂತೆಯೂ ಇದು ಕಾಣುತ್ತದೆ. ಹೀಗಾಗಬಾರದಲ್ಲವೇ?

**ಟಿ.ಎಂ.ಕೃಷ್ಣ,** ಬೆಂಗಳೂರು

### ನಾಲಿಗೆ ಹರಿಬಿಡುವ ಕೆಟ್ಟ ಚಾಳಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವರು ವಿರೋಧ ಪಕ್ಷದ ನಾಯಕರೊಬ್ಬರನ್ನು ಟೀಕಿಸುವಾಗ ಆಕ್ಷೇಪಾರ್ಹ ಪದ ಬಳಸಿರುವುದು, ರಾಜಕಾರಣದಲ್ಲಿ ಮೌಲ್ಯಗಳು ಕುಸಿದಿರುವುದನ್ನು ತೋರಿಸುತ್ತದೆ. ಜವಾಬ್ದಾರಿಯುತ ಸಚಿವ ಸ್ಥಾನದಲ್ಲಿರುವ ಈಶ್ವರಪ್ಪನವರಿಗೆ ಇಂತಹ ಮಾತು ಶೋಭೆ ತರುವುದಿಲ್ಲ ಮತ್ತು ಇದು ಸಂವಿಧಾನಬದ್ಧ ಚುನಾಯಿತ ಪ್ರತಿನಿಧಿಯ ಲಕ್ಷಣವಲ್ಲ.

ರಾಜಕಾರಣದಲ್ಲಿ ಆರೋಪ– ಪ್ರತ್ಯಾರೋಪಗಳು, ಟೀಕೆಟಿಪ್ಪಣಿಗಳು ಸಹಜ. ರಚನಾತ್ಮಕ ಟೀಕೆ ಪ್ರಜಾಪ್ರಭುತ್ವ ವ್ಯವಸ್ಥೆಯ ಸೌಂದರ್ಯವೂ ಹೌದು. ಆದರೆ, ಸಾರ್ವಜನಿಕವಾಗಿ ಮಾತನಾಡುವಾಗ ರಾಜಕಾರಣಿಗಳು ಸಭ್ಯತೆಯ ಪರಿಧಿಯನ್ನು ದಾಟದೆ ಉತ್ತಮ ನಡವಳಿಕೆಯ ಬದ್ಧತೆಯನ್ನು ಪ್ರದರ್ಶಿಸಬೇಕು. ಮಾತ್ರವಲ್ಲದೆ, ಸಂಸದೀಯ ಭಾಷೆಯನ್ನು ಬಳಸಬೇಕು. ಸಾರ್ವಜನಿಕ ಜೀವನದಲ್ಲಿರುವಾಗ ವಿರೋಧಿಗಳನ್ನು ವೈಯಕ್ತಿಕವಾಗಿ ಅವಾಚ್ಯ ಶಬ್ದಗಳಿಂದ ನಿಂದಿಸುವುದು ಹತಾಶೆಯ ಪರಮಾವಧಿ ಹಾಗೂ ಮಾನಸಿಕ ನ್ಯೂನತೆಯೇ ಆಗಿದೆ. ಸಚಿವ ಈಶ್ವರಪ್ಪ ಅವರ ಈ ನಡವಳಿಕೆ ಇದೇ ಮೊದಲಲ್ಲ. ಈ ಹಿಂದೆಯೂ ಅವರು ಬೇಕಾಬಿಟ್ಟಿ ನಾಲಿಗೆ ಹರಿಬಿಟ್ಟ ಅನೇಕ ಉದಾಹರಣೆಗಳು ಇವೆ. ಅವರ ಇಂತಹ ಕೆಟ್ಟ ಪರಿಪಾಟಕ್ಕೆ ಅವರ ಪಕ್ಷವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

**ಅಜಯ್ ರಾಜ್,** ಬೆಂಗಳೂರು

### ರಾಜಕಾರಣಿಗಳ ಹೆಸರಿಡುವ ಸಂಪ್ರದಾಯ ಸಲ್ಲ

ಈ ಹಿಂದಿನ ಸರ್ಕಾರಗಳ ಅವಧಿಯಲ್ಲಿ ಅಥವಾ ಸ್ವಾತಂತ್ರ್ಯಪೂರ್ವದಲ್ಲೇ ಇಟ್ಟಿರುವ ಹೆಸರುಗಳನ್ನು ಇತ್ತೀಚಿನ ದಿನಗಳಲ್ಲಿ ಬದಲಾಯಿಸುವ ಕೇಡಿನ ಪರಂಪರೆ ಸೃಷ್ಟಿಯಾಗಿದೆ. ಸಾಮಾನ್ಯವಾಗಿ ಹೆಸರುಗಳನ್ನು ಅವರ ಸಾಧನೆ, ಅವರವರ ಕೊಡುಗೆ, ಜನರು ಅವರನ್ನು ಪ್ರೀತಿಸುವುದರ ಮೇಲೆ ನಿರ್ಣಯಿಸಿ, ಕೆಲವೊಮ್ಮೆ ಅತೀ ಅಭಿಮಾನದಿಂದ ಇಡಲಾಗುತ್ತದೆ. ಏನೇ ಆದರೂ ಇಟ್ಟ ಹೆಸರುಗಳು ಅವರ ಅಲ್ಪಸ್ವಲ್ಪ ಕೊಡುಗೆಯನ್ನಾದರೂ ನೆನಪಿಸುತ್ತವೆ. ಹೀಗಿರುವಾಗ ದ್ವೇಷದಿಂದ, ರಾಜಕೀಯ ಕಾರಣದಿಂದ, ಜಾತಿಯ ಪ್ರಶ್ನೆಯಿಂದ, ಧರ್ಮದ ಪ್ರತಿಷ್ಠೆಯಿಂದ ಹೆಸರುಗಳನ್ನು ಬದಲಾಯಿಸುವುದು ದ್ವೇಷದ, ಸೇಡಿನ ರಾಜಕಾರಣವಾಗುತ್ತದೆ.

ಯಾವುದೇ ರಾಜಕೀಯ ಪಕ್ಷವು ಇನ್ನು ಮುಂದೆ ಹೆಸರುಗಳನ್ನು ಇಡುವಾಗ ರಾಜಕೀಯಕ್ಕೆ ಸಂಬಂಧಿಸಿದವರ ಹೆಸರುಗಳನ್ನು ಇಡುವುದನ್ನೇ ಬಿಡುವ ನಿರ್ಣಯ ಕೈಗೊಳ್ಳಬೇಕು. ಹೀಗಾದಾಗ, ಹೆಸರು ಬದಲಿಸಿ ಒಬ್ಬ ವ್ಯಕ್ತಿಗೆ ಅವಮರ್ಯಾದೆ ಮಾಡುವುದು ತಪ್ಪುತ್ತದೆ.

**ಡಾ. ಎ.ಆರ್.ಗೋವಿಂದಸ್ವಾಮಿ ನಾಯಕ್,** ಬೆಂಗಳೂರು

### ಕಾಣಿಕೆ ನಿಷೇಧ ಎಷ್ಟು ಸರಿ?

ಸರ್ಕಾರದ ಸಭೆ ಸಮಾರಂಭಗಳಲ್ಲಿ ಕೆಲವು ಕಾಣಿಕೆಗಳನ್ನು ನೀಡಬಾರದೆಂದು ಸರ್ಕಾರ ಸುತ್ತೋಲೆಯನ್ನು ಹೊರಡಿಸಿದ್ದರ ಬಗ್ಗೆ ಸುದೀರ್ಘ ಚಿಂತನೆಗಳು ನಡೆಯಬೇಕಿದೆ. ಕನ್ನಡ ಪುಸ್ತಕಗಳನ್ನು ನೀಡುವ ಆಶಯ ಉತ್ತಮವಾದರೂ ಹೂಗುಚ್ಛ, ಹಾರ ತುರಾಯಿಗಳ ನಿಷೇಧದಿಂದ ಗ್ರಾಮೀಣ ಹೂಗಾರರ ಮೇಲೆ ಹಾಗೂ ಪುಷ್ಪ ಕೃಷಿ ಮಾಡುವ ರೈತರ ಮೇಲೆ ಇದರ ದುಷ್ಪರಿಣಾಮ ಆಗುವುದು ಖಚಿತ. ಅದೇ ರೀತಿ ಹಣ್ಣು ಬೆಳೆಗಾರರು, ಮಾರಾಟಗಾರರು ಸಹ ಇದರಿಂದ ಸಂಕಷ್ಟ ಅನುಭವಿಸುವ, ಶಾಲುಗಳ ನಿರ್ಬಂಧದಿಂದ ಕೈಮಗ್ಗ ನೇಕಾರಿಕೆಗೆ ತೊಂದರೆಯಾಗುವ ಸಾಧ್ಯತೆಗಳಿವೆ. ನೆನಪಿನ ಕಾಣಿಕೆಯ ನಿರ್ಬಂಧದಿಂದ ಕಲಾವಿದರಿಗೆ, ಕಂಪ್ಯೂಟರ್ ಆಧಾರಿತ ನೆನಪಿನ ಕಾಣಿಕೆಗಳನ್ನು ರೂಪಿಸುವವರಿಗೆ ನಷ್ಟವಾಗಬಹುದು.

ಸನ್ಮಾನ ಸಮಾರಂಭಗಳಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಸಂಗತಿಗಳ ಬಗೆಗೆ ನಮ್ಮ ಜನರು ಗೌರವ, ಸಂತಸದ ಭಾವನೆಗಳನ್ನು ಹೊಂದಿದ್ದಾರೆ. ಇದರ ಬದಲಾವಣೆಗೆ ಎಲ್ಲರ ಮನಸ್ಸುಗಳೂ ಒಪ್ಪದಿರುವ ಸಾಧ್ಯತೆ ಇದೆ. ಈ ಬಗೆಯ ನಿಷೇಧಕ್ಕೆ ಹಲವರು ತಾತ್ವಿಕ ವಿರೋಧ ಹೊಂದಿದ್ದು, ಈ ಬಗ್ಗೆ ಪರಿಣತರ ತಂಡದಿಂದ ಅನೇಕ ಆಯಾಮಗಳ ಚಿಂತನೆ ಅಗತ್ಯ. ಎಲ್ಲರ ಹಿತದೃಷ್ಟಿಯ ನೆಲೆಯಲ್ಲಿ ಸರ್ಕಾರವು ತನ್ನ ಕಾರ್ಯಕ್ರಮಗಳಲ್ಲಿ ನಿಗದಿತ ಪ್ರಮಾಣದ ಕನ್ನಡ ಪುಸ್ತಕಗಳನ್ನು ಕಡ್ಡಾಯವಾಗಿ ನೀಡಬೇಕೆಂಬ ಆದೇಶ ಜಾರಿಗೆ ತರುವುದರ ಜೊತೆಗೆ, ಈಗಾಗಲೇ ಇರುವ ಸಾಂಪ್ರದಾಯಿಕ ಪದ್ಧತಿಯ ಹಾರ ತುರಾಯಿ, ಹಣ್ಣಿನ ಬುಟ್ಟಿ, ಶಾಲು, ನೆನಪಿನ ಕಾಣಿಕೆಗಳಿಗೂ ಅವಕಾಶ ನೀಡುವುದು ಸೂಕ್ತ. ಇಂತಹ ಸುತ್ತೋಲೆಗಳನ್ನು ಹೊರಡಿಸುವ ಮುನ್ನ ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚೆಗಳು ನಡೆದು, ಜನಹಿತವೆನಿಸುವ ನಿಯಮಾವಳಿಗಳು ಜಾರಿಗೆ ಬರಲಿ. ಪುಸ್ತಕ ಪ್ರೇಮದೊಟ್ಟಿಗೆ ಜೀವಪರ ಕಾಳಜಿಯ ಚಿಂತನೆಗಳೂ ಎಲ್ಲರಲ್ಲಿ ಮೂಡಬೇಕಿದೆ.

**ಆದಪ್ಪ ಮಲ್ಲಪ್ಪ ಗೊರಚಿಕ್ಕನವರ,** ಕೂಡಲಸಂಗಮ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 



# ದೂರಸಂಪರ್ಕದ ದುಃಸ್ಥಿತಿ

ಭಾರತದ ದೂರ ಸಂಪರ್ಕ ಕ್ಷೇತ್ರವು ತೀವ್ರವಾದ ಬಿಕ್ಕಟ್ಟಿಗೆ ಸಿಲುಕಿದೆ. ವೊಡಾಫೋನ್-ಐಡಿಯಾ ಕಂಪನಿಯಲ್ಲಿ ಹೂಡಿಕೆ ಮಾಡಲು ಉದ್ಯಮಿಗಳು ಆಸಕ್ತರಾಗಿಲ್ಲ. ಹೊಂದಾಣಿಕೆ ಮಾಡಲಾದ ಒಟ್ಟು ವರಮಾನ (ಎಜಿಆರ್) ಪಾವತಿಯ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಇದಕ್ಕೆ ಒಂದು ಕಾರಣ. ತರಂಗಾಂತರ ಶುಲ್ಕ ಪಾವತಿ ಗಡುವಿನ ಮುಂದೂಡಿಕೆ ಆಗುತ್ತಿಲ್ಲ. ದೂರ ಸಂಪರ್ಕ ಸೇವೆಯ ವೆಚ್ಚಕ್ಕಿಂತ ಹೆಚ್ಚು ಶುಲ್ಕ ನಿಗದಿ ವ್ಯವಸ್ಥೆಯೂ ಇಲ್ಲ. ಇಂತಹ ಸ್ಥಿತಿಯಲ್ಲಿ ಸರ್ಕಾರವು ಬೆಂಬಲಕ್ಕೆ ಬಾರದಿದ್ದರೆ ವೊಡಾಫೋನ್-ಐಡಿಯಾ ಕಂಪನಿಯು 'ಚೇತರಿಕೆ ಸಾಧ್ಯವೇ ಇಲ್ಲದ ಹಂತಕ್ಕೆ ಕುಸಿಯಲಿದೆ' ಎಂದು ಆದಿತ್ಯಾ ಬಿರ್ಲಾ ಕಂಪನಿಯ ಅಧ್ಯಕ್ಷ ಕುಮಾರ ಮಂಗಳಂ ಬಿರ್ಲಾ ಇತ್ತೀಚೆಗೆ ಹೇಳಿದ್ದಾರೆ. ಇದು ದೂರಸಂಪರ್ಕ ಕ್ಷೇತ್ರದ ಈಗಿನ ಸ್ಥಿತಿಗೆ ಕನ್ನಡಿ ಹಿಡಿದಂತಿದೆ. ಆದಿತ್ಯಾ ಬಿರ್ಲಾ ಕಂಪನಿಯು ವೊಡಾಫೋನ್-ಐಡಿಯಾ ಕಂಪನಿಯಲ್ಲಿ ಶೇ 27ರಷ್ಟು ಪಾಲು ಹೊಂದಿದೆ.

ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಬಿಟ್ಟರೆ ದೇಶದಲ್ಲಿ ದೂರ ಸಂಪರ್ಕ ಸೇವೆ ಒದಗಿಸುತ್ತಿರುವ ಕಂಪನಿಗಳು ಮೂರು ಮಾತ್ರ. ಅದರೊಳ್ಳೊಂದು ವೊಡಾಫೋನ್-ಐಡಿಯಾ. ಇದು ಮೂರನೇ ಸ್ಥಾನದಲ್ಲಿದ್ದರೆ ಜಿಯೊ ಮತ್ತು ಏರ್‌ಟೆಲ್ ಒಂದು ಮತ್ತು ಎರಡನೇ ಸ್ಥಾನಗಳಲ್ಲಿವೆ.

ಬಿಎಸ್‌ಎನ್‌ಎಲ್ ನಷ್ಟದಲ್ಲಿದೆ ಮತ್ತು ಸೇವೆಯನ್ನು ವಿಸ್ತರಿಸುವ ಬದಲು ದಿನ ದಿನವೂ ಕುಗ್ಗಿಸುತ್ತಲೇ ಇದೆ. ಖಾಸಗಿ ಕ್ಷೇತ್ರದ ವೊಡಾಫೋನ್-ಐಡಿಯಾ ಕೂಡ ಮುಚ್ಚಿಬಿಟ್ಟರೆ, ಏರ್‌ಟೆಲ್ ಮತ್ತು ಜಿಯೊ ಎರಡೇ ಸ್ಪರ್ಧೆಯಲ್ಲಿ ಉಳಿಯುತ್ತವೆ. ಹೀಗಾಗಿಯೇ ವೊಡಾಫೋನ್-ಐಡಿಯಾಕ್ಕೆ ನೆರವು ನೀಡುವುದಕ್ಕೆ ಜಿಯೊ ಕೂಡ ಆಕ್ಷೇಪ ಎತ್ತಿದೆ.

ವೊಡಾಫೋನ್-ಐಡಿಯಾ ಮತ್ತು ಇಡೀ ದೂರಸಂಪರ್ಕ ಕ್ಷೇತ್ರಕ್ಕೆ ಸರ್ಕಾರದ ನೆರವು ದೊರೆಯದೇ ಹೋದರೆ, ದೇಶದ ದೂರ ಸಂಪರ್ಕ ಕ್ಷೇತ್ರದಲ್ಲಿ ಜಿಯೊ ಮತ್ತು ಏರ್‌ಟೆಲ್ ಮಾತ್ರ ಉಳಿಯಲಿವೆ. ಇದರಿಂದ ಗ್ರಾಹಕರ ಆಯ್ಕೆಯ ಸ್ವಾತಂತ್ರ್ಯ ಮೊಟಕಾಗಬಹುದು. ಈ ಕಂಪನಿಗಳು ಕೊಡುವ ಸೇವೆಯನ್ನು ಪಡೆದುಕೊಂಡು, ವಿಧಿಸುವ ಶುಲ್ಕವನ್ನು ಭರಿಸಲು ಗ್ರಾಹಕರು ಸಿದ್ಧರಾಗಬೇಕಾಗಬಹುದು.

## ಕ್ಷೇತ್ರದ ನಷ್ಟದ ಹಾದಿ

ಭಾರತದ ದೂರಸಂಪರ್ಕ ಕ್ಷೇತ್ರ ದುಃಸ್ಥಿತಿಗೆ ಇಳಿಯಲು ಹಲವು ಕಾರಣಗಳನ್ನು ಗುರುತಿಸಬಹುದು. ಸರ್ಕಾರದ ಗೊಂದಲಕಾರಿ ನೀತಿ, ದರ ಸಮರ, ತರಂಗಾಂತರಕ್ಕೆ ದುಬಾರಿ ದರ, ಎಜಿಆರ್ ಪಾವತಿ ಮಾಡಬೇಕಾದ ಒತ್ತಡಗಳಿಂದಾಗಿ ಒಂದೊಂದೇ ಕಂಪನಿಗಳು ಬಾಗಿಲು ಮುಚ್ಚುವ ಅಥವಾ ವಿಲೀನವಾಗುವ ಸ್ಥಿತಿ ಎದುರಾಗಿದೆ ಎನ್ನುತ್ತಾರೆ ತಜ್ಞರು.

ಪರವಾನಿಗೆ ಹಾಗೂ ಮೂಲಸೌಕರ್ಯ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಕಂಪನಿಗಳು ನೀಡಬೇಕಿದ್ದ ಹೊಂದಾಣಿಕೆ ಮಾಡಲಾದ ಒಟ್ಟು ವರಮಾನ (ಎಜಿಆರ್) ಶುಲ್ಕವು ಇದೀಗ ವೊಡಾಫೋನ್ ಐಡಿಯಾದಂತಹ ದೊಡ್ಡ ಸಂಸ್ಥೆಯನ್ನು ಮುಳುಗುವ ಹಂತಕ್ಕೆ ತಂದಿದೆ. ಎಲ್ಲ ದೂರಸಂಪರ್ಕ ಕಂಪನಿಗಳು ಸೇರಿ ಕೇಂದ್ರ ಸರ್ಕಾರಕ್ಕೆ ₹93,520 ಕೋಟಿ ಎಜಿಆರ್ ಬಾಕಿ ಮೊತ್ತ ಪಾವತಿಸಬೇಕಿದೆ. ಇದರಲ್ಲಿ ವೊಡಾಫೋನ್ ಪಾಲೇ ಅರ್ಧದಷ್ಟಿದೆ. ಎಜಿಆರ್ ಲೆಕ್ಕಾಚಾರದಲ್ಲಿ ತಪ್ಪುಗಳಿವೆ ಎಂದು ದೂರಸಂಪರ್ಕ ಕಂಪನಿಗಳು ಕೋರ್ಟ್ ಮೊರೆ ಹೋಗಿದ್ದರೂ, ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿರುವುದು ಇಕ್ಕಟ್ಟಿಗೆ ಸಿಲುಕಿಸಿದೆ. ಕೆಲವು ಷರತ್ತುಗಳನ್ನು ವಿಧಿಸಿ ಎಜಿಆರ್ ಪಾವತಿಗೆ 10 ವರ್ಷಗಳ ಕಾಲಾವಕಾಶ ನೀಡಿ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಕೋರ್ಟ್ ಆದೇಶಿಸಿತ್ತು.

ತರಂಗಾಂತರದ ದುಬಾರಿ ದರದಿಂದಾಗಿ ದೂರಸಂಪರ್ಕ ವಲಯ ನಷ್ಟದ ಹಾದಿಯಲ್ಲಿದೆ ಎಂದು ಭಾರತಿ ಎಂಟರ್‌ಪ್ರೈಸಸ್ ಉಪಾಧ್ಯಕ್ಷ ರಾಕೇಶ್ ಭಾರತಿ ಮಿತ್ತಲ್ ಆರೋಪಿಸಿದ್ದಾರೆ. ಹೈ ಸ್ಪೀಡ್ ಬ್ರಾಡ್‌ಬ್ಯಾಂಡ್‌ಗಾಗಿ ದೇಶದಲ್ಲಿ ಆಪ್ಟಿಕಲ್ ಫೈಬರ್ ಅಳವಡಿಸುವ ವೆಚ್ಚದ ಶೇ 75ರಷ್ಟನ್ನು ಸ್ಥಳೀಯ ಅಧಿಕಾರಿಗಳು ಶುಲ್ಕವಾಗಿ ನಿಗದಿಪಡಿಸುತ್ತಾರೆ ಎಂದಿದ್ದಾರೆ. ಪ್ರಸ್ತುತ ದರವು ವಿಶ್ವದ ಇತರೆಡೆಗೆ ಹೋಲಿಸಿದರೆ, 7 ಪಟ್ಟು ಹೆಚ್ಚು ಎಂಬುದು ಅವರ ಮಾತು.


ದೂರಸಂಪರ್ಕ ಕ್ಷೇತ್ರಕ್ಕೆ ರಿಯಲನ್ಸ್ ಜಿಯೊ ಪದಾರ್ಪಣೆ ಮಾಡಿದ ಬಳಿಕ ಶುರುವಾದ ದರ ಸಮರವು ಅದಾಗಲೇ ಕಾರ್ಯಾಚರಣೆ ನಡೆಸುತ್ತಿದ್ದ ಕಂಪನಿಗಳ ಅಸ್ತಿತ್ವವನ್ನೇ ಅಲುಗಾಡಿಸಿತು. ಬಳಕೆದಾರರಿಗೆ ಕಡಿಮೆ ದರದ ಸೇವೆ ನೀಡಿದ್ದರಿಂದ ಅವರು ಜಿಯೊ ಕಡೆ ಆಕರ್ಷಿತರಾದರು. ಮಾರುಕಟ್ಟೆಯಲ್ಲಿ ಉಳಿದುಕೊಳ್ಳುವ ಅನಿವಾರ್ಯಕ್ಕೆ ಬಿದ್ದ ಏರ್‌ಟೆಲ್, ವೊಡಾಫೋನ್, ಐಡಿಯಾ, ಬಿಎಸ್‌ಎನ್‌ಎಲ್ ಮೊದಲಾದ ಕಂಪನಿಗಳೂ ದರ ಇಳಿಸಿದವು. ಆದರೆ ಆದಾಯಕ್ಕೆ ಭಾರಿ ಹೊಡೆತ ಬಿದ್ದಿತು. ಕಂಪನಿಗಳ ಸರಾಸರಿ ಆದಾಯ ಖೋತಾ ಆಯಿತು. 2012-2013ರಲ್ಲಿ ಶೇ 5.49ರಿಂದ 2015-2016ರಲ್ಲಿ ಶೇ 2.51ಕ್ಕೆ ಕಂಪನಿಗಳ ಆದಾಯ ಕುಸಿಯಿತು. ಮತ್ತೆ 2018-2019ರಲ್ಲಿ ಶೇ -2.82ಕ್ಕೆ ಇಳಿಕೆಯಾಯಿತು ಎಂದು ಅಂಕಿ-ಅಂಶಗಳು ಹೇಳುತ್ತವೆ.

ಟೆಲಿಕಾಂ ನೀತಿಯಲ್ಲಿನ ಗೊಂದಲಕಾರಿ ಅಂಶಗಳು ಹಾಗೂ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಕ್ರಮಗಳನ್ನು ಗಮನಿಸಿದರೆ, ಟೆಲಿಕಾಂ ಮಾರುಕಟ್ಟೆಯಲ್ಲಿ ಎರಡೇ ಸಂಸ್ಥೆಗಳು ಉಳಿದುಕೊಳ್ಳುವ ಹಾಗಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಬಳಕೆದಾರರಿಲ್ಲದೇ ಸೊರಗಿರುವ ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಜೀರ್ಣೋದ್ಧಾರಕ್ಕೆ ಸರ್ಕಾರ ತೋರಿರುವ ನಿರ್ಲಕ್ಷ್ಯ ಹಾಗೂ 50 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಎಜಿಆರ್ ಪಾವತಿಸಬೇಕಾದ ಒತ್ತಡದಲ್ಲಿರುವ ವೊಡಾಫೋನ್-ಐಡಿಯಾ ಕಂಪನಿಗಳು ಮುಚ್ಚಿದರೆ, ಜಿಯೊ ಮತ್ತು ಏರ್‌ಟೆಲ್ ಮಾತ್ರ ಮಾರುಕಟ್ಟೆಯನ್ನು ಆಳಲಿವೆ ಎನ್ನುತ್ತಾರೆ ತಜ್ಞರು.

## ಭಾರತದ ಟೆಲಿಕಾಂ ಮಾರುಕಟ್ಟೆ

ಭಾರತದ ಟೆಲಿಕಾಂ ಮಾರುಕಟ್ಟೆಯು ಮೂರು ಖಾಸಗಿ ಕಂಪನಿಗಳ ಹಿಡಿತದಲ್ಲಿದೆ. ರಿಲಯನ್ಸ್ ಜಿಯೊ ಸಂಸ್ಥೆಯು ಮೊದಲ ಸ್ಥಾನದಲ್ಲಿದೆ. ಏರ್‌ಟೆಲ್ ಹಾಗೂ ವೊಡಾಫೋನ್ ಐಡಿಯಾ ಎರಡನೇ ಹಾಗೂ ಮೂರನೇ ಸ್ಥಾನದಲ್ಲಿವೆ. ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಸೀಮಿತ ಬಳಕೆದಾರರನ್ನು ಹೊಂದಿದ್ದು, ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿದೆ.

### ಮಾರುಕಟ್ಟೆ ಪಾಲು (ಬಳಕೆದಾರರ ಸಂಖ್ಯೆ ಮತ್ತು % ಪ್ರಮಾಣ)




ದೇಶದ ಒಟ್ಟು ಟೆಲಿಕಾಂ ಬಳಕೆದಾರರ ಸಂಖ್ಯೆ 114.3 ಕೋಟಿ

| ಇಂಟರ್‌ನೆಟ್ ಬಳಕೆದಾರರು | |
|---|---|
| ಒಟ್ಟು | 76.4 ಕೋಟಿ |
| ವೈರ್ | 2.2 ಕೋಟಿ |
| ನಿಸ್ತಂತು | 74.2 ಕೋಟಿ |

| ಎಜಿಆರ್ ಬಾಕಿ ಮೊತ್ತ | |
|---|---|
| ವೊಡಾಫೋನ್ | ₹50,400 ಕೋಟಿ |
| ಏರ್‌ಟೆಲ್ | ₹25,976 ಕೋಟಿ |
| ಟಾಟಾ ಗ್ರೂಪ್ | ₹12,601 ಕೋಟಿ |

## ಬೇಡಿಕೆಗೆ ಸ್ಪಂದಿಸದ ಟ್ರಾಯ್

'ಕರೆ ಮತ್ತು ಡೇಟಾಗೆ ಕನಿಷ್ಠ ದರ ನಿಗದಿ ಮಾಡಿ' ಎಂಬುದು ದೂರಸಂಪರ್ಕ ಕಂಪನಿಗಳು ಸರ್ಕಾರದ ಮುಂದೆ ಪದೇ ಪದೇ ಇಡುತ್ತಿರುವ ಬೇಡಿಕೆಯಾಗಿದೆ. ರಿಲಯನ್ಸ್ ಜಿಯೊ ಮಾರುಕಟ್ಟೆಗೆ ಬಂದ ನಂತರ ಅತ್ಯಂತ ಕಡಿಮೆ ದರದಲ್ಲಿ ಡೇಟಾ ಮತ್ತು ಅನ್‌ಲಿಮಿಟೆಡ್ ಕರೆ ಸೇವೆಯನ್ನು ನೀಡಿತು. ಜಿಯೊ ಸ್ಪರ್ಧೆಯನ್ನು ಎದುರಿಸುವ ಸಲುವಾಗಿ ಉಳಿದ ದೂರಸಂಪರ್ಕ ಕಂಪನಿಗಳೂ ದರವನ್ನು ಗಣನೀಯ ಪ್ರಮಾಣದಲ್ಲಿ ತಗ್ಗಿಸಿದವು. ಇದರಿಂದ ಡೇಟಾ ಬಳಕೆ ಗಣನೀಯವಾಗಿ ಹೆಚ್ಚಿದರೂ ದೂರಸಂಪರ್ಕ ಕಂಪನಿಗಳು ಭಾರಿ ನಷ್ಟ ಅನುಭವಿಸಿದವು.

ಈ ಬೆಳವಣಿಗೆಯ ನಂತರ ಹಲವು ಕಂಪನಿಗಳು ಸೇವೆಯನ್ನು ಸ್ಥಗಿತಗೊಳಿಸಿದವು. ಹಲವು ಕಂಪನಿಗಳು ಮುಚ್ಚಿದವು. ಈಗ ದೇಶದಲ್ಲಿ ಮೊಬೈಲ್ ಸೂರಸಂಪರ್ಕ ಸೇವೆ ನೀಡುತ್ತಿರುವ ಖಾಸಗಿ ಕಂಪನಿಗಳ ಸಂಖ್ಯೆ ಮೂರು ಮಾತ್ರ. ಉಳಿದ ಕಂಪನಿಗಳೆಲ್ಲವೂ ಬಾಗಿಲು ಹಾಕಿವೆ.

ಈ ಮೂರೂ ಕಂಪನಿಗಳಲ್ಲಿ ಏರ್‌ಟೆಲ್ ಮತ್ತು ವೊಡಾಫೋನ್-ಐಡಿಯಾ ಕಂಪನಿಗಳು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರಕ್ಕೆ (ಟ್ರಾಯ್) ಎರಡು ಬಾರಿ ಪತ್ರ ಬರೆದು ಕರೆ ಮತ್ತು ಡೇಟಾಗೆ ಕನಿಷ್ಠ ದರ ನಿಗದಿ ಮಾಡಿ ಎಂದು ಕೋರಿವೆ. 2019ರಿಂದಲೂ ಸಲ್ಲಿಸುತ್ತಿರುವ ಈ ಬೇಡಿಕೆಗೆ ಟ್ರಾಯ್ ಯಾವುದೇ ಸ್ಪಷ್ಟ ಪ್ರತಿಕ್ರಿಯೆ ನೀಡಿಲ್ಲ. ಈ ಪ್ರಸ್ತಾವವನ್ನು ಟ್ರಾಯ್ ಒಪ್ಪಿಕೊಂಡೂ ಇಲ್ಲ, ತಿರಸ್ಕರಿಸಿಯೂ ಇಲ್ಲ. ಜಿಯೊ ಸಹ ಪ್ರತಿ ಜಿಬಿ ಡೇಟಾಗೆ ₹ 35 ಕನಿಷ್ಠ ದರ ನಿಗದಿ ಮಾಡಬೇಕು ಎಂದು ಪ್ರಸ್ತಾವ ಸಲ್ಲಿಸಿತ್ತು. ಆ ಬೇಡಿಕೆಗೂ ಟ್ರಾಯ್ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಆದರೆ ಜಿಯೊ ಮತ್ತೆ ಅಂತಹ ಬೇಡಿಕೆ ಸಲ್ಲಿಸಿಲ್ಲ.

2018ರ ರಾಷ್ಟ್ರೀಯ ಡಿಜಿಟಲ್ ಸಂಪರ್ಕ ನೀತಿಯ ಅನ್ವಯ ಮೊಬೈಲ್ ದೂರಸಂಪರ್ಕ ಕಂಪನಿಗಳ ಮೇಲೆ ವಿಧಿಸಲಾಗುವ ಹಲವು ತೆರಿಗೆಗಳ ದರ ಕಡಿತವಾಗುತ್ತದೆ. ಈ ನೀತಿಯ ಪ್ರಕಾರ ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳ ದರವೂ ಕಡಿತವಾಗಬೇಕು. 2022ರ ಆರಂಭದ ವೇಳೆಗೆ ಈ ಎಲ್ಲಾ ನಿಯಮಗಳು ಜಾರಿಗೆ ಬರಬೇಕಿತ್ತು. ಆದರೆ ಅನುಷ್ಠಾನ ವಿಳಂಬವಾಗಿರುವ ಕಾರಣ, ತೆರಿಗೆ ದರ ಕಡಿತದ ಲಾಭ ದೂರಸಂಪರ್ಕ ಕಂಪನಿಗಳಿಗೆ ದೊರೆತಿಲ್ಲ.

## ನೆರವಾಗದ ಸರ್ಕಾರದ ಕ್ರಮ

2012ರ ಪೂರ್ವಾನ್ವಯ ತೆರಿಗೆ ನೀತಿಯನ್ನು ಕೇಂದ್ರ ಸರ್ಕಾರ ಹಿಂಪಡೆಯಲು ಮುಂದಾಗಿದೆ. ಇದರಿಂದ ವೊಡಾಫೋನ್-ಐಡಿಯಾಗೆ ನೆರವಾಗಲಿದೆ ಎಂದು ಸರ್ಕಾರವು ಹೇಳುತ್ತಿದೆ. ಆದರೆ ಪರಿಸ್ಥಿತಿ ಇದಕ್ಕಿಂತಲೂ ಭಿನ್ನವಾಗಿದೆ.

2007ರಲ್ಲಿ ವೊಡಾಫೋನ್ ಕಂಪನಿಯು ಭಾರತದ ದೂರಸಂಪರ್ಕ ಕಂಪನಿಯೊಂದರಿಂದ ಹಲವು ಸ್ವತ್ತುಗಳನ್ನು ಖರೀದಿಸಿತ್ತು. ಈ ಸ್ವತ್ತುಗಳನ್ನು ಬೇರೊಂದು ಕಂಪನಿಯಿಂದ ಪರೋಕ್ಷವಾಗಿ ಖರೀದಿಸಿದ್ದರೂ, ₹ 22,100 ಕೋಟಿ ಆಸ್ತಿ ಖರೀದಿ ತೆರಿಗೆ ಪಾವತಿಸಬೇಕು ಎಂದು ಸರ್ಕಾರವು ಒತ್ತಾಯಿಸಿತ್ತು. ಸರ್ಕಾರದ ಒತ್ತಾಯದ ವಿರುದ್ಧ ವೊಡಾಫೋನ್ ಕಂಪನಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಆಸ್ತಿ ತೆರಿಗೆ ಕಟ್ಟಬೇಕಿಲ್ಲ ಎಂಬ ಕಂಪನಿಯ ವಾದವನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತ್ತು. ಆದರೆ 2012ರಲ್ಲಿ ಪೂರ್ವಾನ್ವಯ ತೆರಿಗೆ ಕಾಯ್ದೆ ಜಾರಿಗೆ ತಂದ ಸರ್ಕಾರವು, ವೊಡಾಫೋನ್ ಕಂಪನಿ ತೆರಿಗೆ ನೀಡಬೇಕು ಎಂದು ಒತ್ತಾಯಿಸಿತ್ತು.

ಸರ್ಕಾರದ ಈ ಕ್ರಮದ ವಿರುದ್ಧ ಹೇಗ್ ಮಧ್ಯಸ್ಥಿಕೆ ಮಂಡಳಿಯಲ್ಲಿ ವೊಡಾಫೋನ್ ಕಂಪನಿ ದಾವೆ ಹೂಡಿತ್ತು. ಹೇಗ್ ಮಧ್ಯಸ್ಥಿಕೆ ಮಂಡಳಿ ಸಹ ವೊಡಾಫೋನ್‌ನ ವಾದವನ್ನು ಮಾನ್ಯ ಮಾಡಿತು. ಸಿಂಗಪುರ ಅಂತರರಾಷ್ಟ್ರೀಯ ಮಧ್ಯಸ್ಥಿಕೆ ಮಂಡಳಿ ಸಹ ವೊಡಾಫೋನ್ ಕಂಪನಿಯ ಪರವಾಗಿ ತೀರ್ಪು ನೀಡಿತ್ತು. ಆದರೆ ಸರ್ಕಾರವು ತೆರಿಗೆ ಪಾವತಿಸಲೇಬೇಕು ಎಂದು ಒತ್ತಾಯಿಸುತ್ತಲೇ ಇತ್ತು. ವಿವಿಧ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ವೊಡಾಫೋನ್ ಮತ್ತು ಭಾರತ ಸರ್ಕಾರದ ಮಧ್ಯೆ ಪ್ರಕರಣಗಳ ವಿಚಾರಣೆ ಪ್ರಗತಿಯಲ್ಲಿ ಇದೆ.

ಈಗ ಪೂರ್ವಾನ್ವಯ ತೆರಿಗೆ ಕಾಯ್ದೆಯನ್ನು ರದ್ದುಪಡಿಸುವ ಮಸೂದೆಗೆ ಸರ್ಕಾರವು ಸಂಸತ್ತಿನ ಅನುಮೋದನೆ ಪಡೆದುಕೊಂಡಿದೆ. ತಿದ್ದುಪಡಿ ಮಸೂದೆ ಪ್ರಕಾರ ಈಗಾಗಲೇ ಪಾವತಿ ಮಾಡಿರುವ ಆಸ್ತಿ ತೆರಿಗೆಯನ್ನು ಸರ್ಕಾರವು, ಕಂಪನಿಗಳಿಗೆ ವಾಪಸ್ ಮಾಡಬೇಕು. ವೊಡಾಫೋನ್ ಇನ್ನೂ ತೆರಿಗೆ ಪಾವತಿ ಮಾಡಿಲ್ಲವಾದ್ದರಿಂದ, ಅದಕ್ಕೆ ಸರ್ಕಾರದ ಕಡೆಯಿಂದ ಯಾವುದೇ ಹಣ ವಾಪಸ್ ದೊರೆಯುವುದಿಲ್ಲ. ಆದರೆ ಸರ್ಕಾರದ ವಿರುದ್ಧ ಕಂಪನಿಯು ವಿವಿಧ ಅಂತರರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ಹೂಡಿರುವ ದಾವೆಗಳನ್ನು ವಾಪಸ್ ಪಡೆದುಕೊಳ್ಳುತ್ತದೆ. ಇದರಿಂದ ಸರ್ಕಾರಕ್ಕೆ ಲಾಭವಾಗುತ್ತದೆ ಅಷ್ಟೆ.

## ತಾಲಿಬಾನ್ ಕೈ ಸೇರಿದ ಭಾರತದ ಹೆಲಿಕಾಪ್ಟರ್



ತಾಲಿಬಾನ್ ಉಗ್ರರು ಬಿಡುಗಡೆ ಮಾಡಿರುವ ಚಿತ್ರ. ಎಂಐ - 24ವಿ ಹೆಲಿಕಾಪ್ಟರ್‌ನ ರೋಟರ್‌ಗಳನ್ನು ಬಿಚ್ಚಿಟ್ಟಿರುವುದು ಈ ಚಿತ್ರದಲ್ಲಿ ಕಾಣುತ್ತದೆ. ಜೋಸೆಫ್ ಡೆಂಪ್ಸಿ ಈ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ

**ನವದೆಹಲಿ:** ಅಫ್ಗಾನಿಸ್ತಾನಕ್ಕೆ ಭಾರತ ಸರ್ಕಾರವು 2019ರಲ್ಲಿ ಉಡುಗೊರೆಯಾಗಿ ನೀಡಿದ್ದ ಎಂಐ - 24ವಿ ಕದನ ಹೆಲಿಕಾಪ್ಟರ್ ಈಗ ತಾಲಿಬಾನ್ ಉಗ್ರರ ವಶವಾಗಿದೆ. ಉತ್ತರ ಅಫ್ಗಾನಿಸ್ತಾನದ ಕುಂದುಜ್ ವಿಮಾನ ನಿಲ್ದಾಣವನ್ನು ತಾಲಿಬಾನ್ ಉಗ್ರರು ಬುಧವಾರ ವಶಕ್ಕೆ ಪಡೆದುಕೊಂಡಿದ್ದು, ಅಲ್ಲಿದ್ದ ಹೆಲಿಕಾಪ್ಟರ್ ಅನ್ನೂ ಅವರು ವಶಕ್ಕೆ ಪಡೆದಿದ್ದಾರೆ.

### ಮುಖ್ಯಾಂಶಗಳು

- 2019ರಲ್ಲಿ ಅಫ್ಗಾನಿಸ್ತಾನಕ್ಕೆ ಭಾರತ ಉಡುಗೊರೆ ನೀಡಿದ್ದ ಹೆಲಿಕಾಪ್ಟರ್
- ನಾಲ್ಕು ಹೆಲಿಕಾಪ್ಟರ್‌ಗಳಲ್ಲಿ ಒಂದು ತಾಲಿಬಾನ್ ಉಗ್ರರ ವಶಕ್ಕೆ
- ಉಗ್ರರ ವಿರುದ್ಧ ದಾಳಿ ನಡೆಸಲು ಈ ಹೆಲಿಕಾಪ್ಟರ್ ಬಳಸಲಾಗಿತ್ತು

ಭಾರತ ಸರ್ಕಾರವು 2019ರಲ್ಲಿ ಅಫ್ಗಾನಿಸ್ತಾನ ವಾಯುಪಡೆಗೆ ನಾಲ್ಕು ಎಂಐ-24ವಿ ಹೆಲಿಕಾಪ್ಟರ್‌ಗಳನ್ನು ಉಡುಗೊರೆಯಾಗಿ ನೀಡಿತ್ತು. 2015 ಮತ್ತು 2016ರಲ್ಲಿ ನೀಡಿದ್ದ ಕದನ ಹೆಲಿಕಾಪ್ಟರ್‌ಗಳ ಬದಲಿಗೆ ನಾಲ್ಕು ಎಂಐ-24ವಿ ಹೆಲಿಕಾಪ್ಟರ್‌ಗಳನ್ನು ನೀಡಿತ್ತು. ನಾಲ್ಕರಲ್ಲಿ ಒಂದು ಹೆಲಿಕಾಪ್ಟರ್ ಈಗ ತಾಲಿಬಾನ್ ಉಗ್ರರ ವಶವಾಗಿದೆ.

ತಾಲಿಬಾನ್ ಉಗ್ರರು ಭಾನುವಾರ ಕುಂದುಜ್ ರಾಜಧಾನಿ ಪ್ರದೇಶವನ್ನು ವಶಕ್ಕೆ ಪಡೆದಿದ್ದರು. ಉಗ್ರರ ವಿರುದ್ಧ ಸೈನಿಕರು ಹೋರಾಡಿದರೂ, ಬುಧವಾರ ಮಧ್ಯಾಹ್ನದ ವೇಳೆಗೆ ಇಡೀ ನಗರವನ್ನು ಉಗ್ರರು ವಶಕ್ಕೆ ಪಡೆದರು. ವಿಮಾನ ನಿಲ್ದಾಣದಲ್ಲಿದ್ದ ಸೈನಿಕರು ಉಗ್ರರಿಗೆ ಶರಣಾಗಿದ್ದಾರೆ. ನಂತರ ತಮ್ಮ ಶಸ್ತ್ರಾಸ್ತ್ರ, ಸೇನಾ ವಾಹನಗಳು ಮತ್ತು ಸಲಕರಣೆಗಳನ್ನು ಉಗ್ರರ ವಶಕ್ಕೆ ನೀಡಿದ್ದಾರೆ. ನಂತರ ಅಲ್ಲಿಂದ ತೆರಳಿದ್ದಾರೆ.

ಉಗ್ರರು ವಿಮಾನ ನಿಲ್ದಾಣವನ್ನು ವಶಕ್ಕೆ ಪಡೆಯುವ ವಿಡಿಯೊವನ್ನು ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಟ್ರಾಟೆಜಿಕ್ ಸ್ಟಡೀಸ್‌ನ ಜೋಸೆಫ್ ಡೆಂಪ್ಸಿ ಅವರು ಟ್ವೀಟ್ ಮಾಡಿದ್ದಾರೆ. ಜತೆಗೆ ಹಲವು ಚಿತ್ರಗಳನ್ನು ಪೋಸ್ಟ್ ಮಾಡಿದ್ದಾರೆ. ಆ ವಿಡಿಯೊದಲ್ಲಿ ಎಂಐ-24ವಿ ಹೆಲಿಕಾಪ್ಟರ್‌ನ ದೃಶ್ಯವೂ ಇದೆ. ಹೆಲಿಕಾಪ್ಟರ್‌ನ ಚಿತ್ರವೂ ಇದೆ. ಹೆಲಿಕಾಪ್ಟರ್‌ನ ರೋಟರ್‌ಗಳನ್ನು ಬಿಚ್ಚಿಡಲಾಗಿದೆ. 'ಹೆಲಿಕಾಪ್ಟರ್ ಅನ್ನು ಹಾರಾಟ ನಡೆಸಲು ಬರದೇ ಇರುವ ಕಾರಣ, ಉಗ್ರರು ಅದರ ಬಿಡಿಭಾಗಗಳನ್ನು ಬಿಚ್ಚಿಟ್ಟಿರಬಹುದು' ಎಂದು ಡೆಂಪ್ಸಿ ಅವರು ಟ್ವೀಟ್ ಮಾಡಿದ್ದಾರೆ.

ಕುಂದುಜ್ ವಿಮಾನ ನಿಲ್ದಾಣವನ್ನು ವಶಕ್ಕೆ ಪಡೆದಾಗ ಯಾವೆಲ್ಲಾ ವಸ್ತುಗಳು ದೊರೆತವು ಎಂಬುದರ ಬಗ್ಗೆ ತಾಲಿಬಾನ್ ಮಾಹಿತಿ ನೀಡಿದೆ. ಶಸ್ತ್ರಾಸ್ತ್ರ, ಸೇನಾ ಸಲಕರಣೆಗಳು ಮತ್ತು ವಾಹನಗಳ ಮಾಹಿತಿಯನ್ನು ತಾಲಿಬಾನ್ ಉಗ್ರರು ನೀಡಿದ್ದಾರೆ. ಭಾರತವು ಉಡುಗೊರೆಯಾಗಿ ನೀಡಿದ್ದ ಎಂಐ-24ವಿ ಹೆಲಿಕಾಪ್ಟರ್‌ನ ಬಗ್ಗೆ ಅವರು ಯಾವುದೇ ಮಾಹಿತಿ ನೀಡಿಲ್ಲ. ಆದರೆ, ತಾಲಿಬಾನ್ ವಕ್ತಾರ ಜಬೀವುಲ್ಲಾ ಮುಜಾಹಿದ್ ಹೆಲಿಕಾಪ್ಟರ್‌ನ ಚಿತ್ರವನ್ನು ಬಿಡುಗಡೆ ಮಾಡಿದ್ದಾನೆ.

ತಾಲಿಬಾನಿಗಳ ಬಂಕರ್ ಮೇಲೆ ಜುಲೈ 31ರಂದು ದಾಳಿ ನಡೆಸಲು ಅಫ್ಗನ್ ವಾಯುಪಡೆ ಈ ಹೆಲಿಕಾಪ್ಟರ್ ಅನ್ನು ಬಳಸಿಕೊಂಡಿತ್ತು ಎಂದು ಮೂಲಗಳು ಹೇಳಿವೆ.

ಅಫ್ಗಾನಿಸ್ತಾನದ ವಿವಿಧೆಡೆ ಸೇವೆಯಲ್ಲಿದ್ದ 50 ಭಾರತೀಯ ಅಧಿಕಾರಿಗಳು ಮತ್ತು ನಾಗರಿಕರನ್ನು ಭಾರತ ಸರ್ಕಾರವು ಬುಧವಾರ ಸುರಕ್ಷಿತವಾಗಿ ತೆರವು ಮಾಡಿದೆ. ವಿಶೇಷ ವಿಮಾನದ ಮೂಲಕ ಅವರನ್ನು ಬುಧವಾರ ಬೆಳಗಿನ ಜಾವ ದೆಹಲಿ ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಬರಲಾಗಿದೆ.

## ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿರುವ ನೀರಜ್ ಚೋಪ್ರಾ ಅವರು ಮಾಡಿದ್ದಾರೆ ಎನ್ನಲಾದ ಟ್ವೀಟ್ ಭಾರಿ ಸದ್ದು ಮಾಡುತ್ತಿದೆ. ಪದಕ ಗೆದ್ದ ಶ್ರೇಯವನ್ನು ರೈತರಿಗೆ ಅರ್ಪಿಸಿ ಅವರು ಮಾಡಿರುವ ಟ್ವೀಟ್ ವೈರಲ್ ಆಗಿದೆ. 'ನಾನು ಮತ್ತು ನನ್ನ ತರಬೇತುದಾರರ ಪರಿಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ. ಪ್ರಧಾನಿಗೆ ಸುಮ್ಮನೆ ಇದರ ಶ್ರೇಯ ಕೊಡಬೇಡಿ' ಎಂದು ಉಲ್ಲೇಖಿಸಲಾಗಿದೆ. 'ಪ್ರಧಾನಿ ಅವರು ಏನೇ ಒಳ್ಳೆಯದಾದರೂ ತಮ್ಮಿಂದ ಎನ್ನುತ್ತಾರೆ' ಎಂದು ಟ್ವಿಟರ್ ಬಳಕೆದಾರರೊಬ್ಬರು ಕಿಡಿಕಾರಿದ್ದಾರೆ. ರೈತರ ಮಗನಾಗಿರುವ ನೀರಜ್ ಅವರು ರೈತರಿಗೆ ಗೌರವ ಸಲ್ಲಿಸಿದ್ದು, ರೈತರ ಪ್ರತಿಭಟನೆಗೆ ಈ ಮೂಲಕ ಬೆಂಬಲ ಸೂಚಿಸಿದ್ದಾರೆ ಎಂಬ ಅರ್ಥದ ಚರ್ಚೆಗಳು ನಡೆಯುತ್ತಿವೆ.



2020ರ ಡಿಸೆಂಬರ್‌ನಲ್ಲಿ ಸೃಷ್ಟಿಯಾಗಿರುವ ನೀರಜ್ ಚೋಪ್ರಾ ಹೆಸರಿನ ಖಾತೆಯೊಂದಕ್ಕೆ (@neeraj_chopra_) ಕೇವಲ 24 ಸಾವಿರ ಫಾಲೋವರ್ಸ್ ಇದ್ದು, ಇದುವರೆಗೆ ಎರಡೇ ಟ್ವೀಟ್ ಮಾಡಲಾಗಿದೆ. ಆದರೆ 2017ರಲ್ಲಿ ರಚನೆಯಾದ @Neeraj_chopra1 ಎಂಬ ಹೆಸರಿನ ಖಾತೆ ನೀರಜ್ ಚೋಪ್ರಾ ಅವರದ್ದು ಎಂದು ಟ್ವಿಟರ್ ದೃಢಪಡಿಸಿದೆ. ಮೋದಿ, ರೈತರ ಹೆಸರನ್ನು ಪ್ರಸ್ತಾಪ ಮಾಡಿರುವ ಯಾವುದೇ ಟ್ವೀಟ್ ಈ ಎರಡೂ ಖಾತೆಗಳಲ್ಲಿ ಲಭ್ಯವಾಗಿಲ್ಲ. ಹೀಗಾಗಿ ವೈರಲ್ ಆಗಿರುವ ಟ್ವೀಟ್ ನಕಲಿ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ

### ತಾಯಿಯ ಆತಂಕ

**ಇತ್ತ** ಮಾದ್ರಿದೇವಿಗೆ ಅಪಶಕುನಗಳಾಗುತ್ತಿದ್ದವು. ರಾತ್ರಿ ಬಿದ್ದ ಕನಸು ಆಕೆಯನ್ನು ಹೆದರಿಸಿತ್ತು. ವೆಸ್ಸಂತರ ಬೋಧಿಸತ್ವನ ಸಮಾಧಾನದ ಮಾತುಗಳು ಅಷ್ಟೊಂದು ತೃಪ್ತಿ ನೀಡಿರಲಿಲ್ಲ. ಕಾಡಿನಲ್ಲಿ ಫಲ ಮೂಲಗಳನ್ನು ಆರಿಸುವಾಗಲೂ ಕೈ ನಡುಗಿ ಮುಮ್ಮಟಿ ಬಿದ್ದು ಬಿದ್ದು ಹೋಗುತ್ತಿತ್ತು. ಹೆಗಲಮೇಲಿನಿಂದ ಸೆರಗು ಮೇಲಿಂದ ಮೇಲೆ ಜಾರುತ್ತಿತ್ತು. ಬಲಗಣ್ಣು ಹಾರುತ್ತಿತ್ತು. ಹಣ್ಣುಗಳಿಂದ ತುಂಬಿದ್ದ ಮರಗಳು ಹಣ್ಣೇ ಇಲ್ಲದಂತೆ ಕಾಣಿಸುತ್ತಿದ್ದವು. ಬೋಳು ಮರಗಳು ಹಣ್ಣಿರುವಂತೆ ತೋರುತ್ತಿದ್ದವು. ಕೆಲವೊಂದು ಬಾರಿ ಅತ್ಯಂತ ಪರಿಚಿತವಾದ ಹಾದಿಯೂ ಮರೆತುಹೋಗುವಂತೆ ಭಾಸವಾಗುತ್ತಿತ್ತು. ಹಿಂದೆಂದೂ ಈ ತರಹದ ಪರಿಸ್ಥಿತಿ ಒದಗಿರಲಿಲ್ಲ. ಆಕೆಯ ಎದೆ ಡವಡವನೆ ಬಡಿದುಕೊಂಡಿತು. ಆದಷ್ಟು ಬೇಗ ಪರ್ಣಕುಟಿಗೆ ಹೋಗಬೇಕೆಂದು ತೀರ್ಮಾನಿಸಿದಳು. ಆಗ ಸೂರ್ಯ ಕೆಳಗಿಳಿದ. ಆಶ್ರಮ ಇನ್ನೂ ದೂರವಿದೆ. ಆಶ್ರಮದಲ್ಲಿ ಎಲ್ಲರೂ ನಾನು ತರುವ ಫಲಮೂಲಗಳಿಗಾಗಿ ಕಾದು ಕುಳಿತಿರುತ್ತಾರೆ. ನಾನು ಅಲ್ಲಿಗೆ ಹೋಗುವುದು ತಡವಾದರೆ, ಬೋಧಿಸತ್ವ ತಾನು ಹಸಿದಿದ್ದರೂ, ಹಸಿದ ಮಕ್ಕಳಿಗೆ ಒಳ್ಳೆಯ ಮಾತುಗಳನ್ನು ಹೇಳುತ್ತ ಸಂತೋಷವನ್ನು ಕೊಡುತ್ತಾನೆ. ನನ್ನ ಬಡಪಾಯಿ ಮಕ್ಕಳು ಹಸಿದಿದ್ದರೂ ತೋರಗೊಡದೆ ನನ್ನ ದಾರಿಯನ್ನೇ ನೋಡುತ್ತ ಕುಳಿತಿರುವರು. ಆದ್ದರಿಂದ ಬೇಗನೇ ಹೊರಡುತ್ತೇನೆ ಎಂದು ದಾರಿಯಲ್ಲಿ ಮುಂದೆ ಬಂದಳು.

ಮಾದ್ರಿದೇವಿ ದಾರಿಯ ಮಧ್ಯದಲ್ಲಿ ಕುಳಿತ ಸಿಂಹ, ಹುಲಿ, ಚಿರತೆಗಳನ್ನು ನೋಡಿ ಒಂದು ಕ್ಷಣ ಹೆದರಿದಳು. 'ಪ್ರಾಣಿ ಬಾಂಧವರೇ, ನನಗೆ ಆಶ್ರಮಕ್ಕೆ ಹೋಗಲು ಇದೊಂದೇ ದಾರಿ. ಬೇರೆ ದಾರಿ ನನಗೆ ತಿಳಿದಿಲ್ಲ. ಆಶ್ರಮದಲ್ಲಿ ನನಗಾಗಿ ನನ್ನ ಗಂಡ ಮತ್ತು ಮಕ್ಕಳು ಕಾಯುತ್ತಿದ್ದಾರೆ. ನಿಮಗೆ ನನ್ನ ನಮಸ್ಕಾರ. ನೀವು ಈ ಕಾಡಿಗೆ ಮಹಾರಾಜರು. ನನಗೆ ಧರ್ಮಸೋದರರು. ದಯವಿಟ್ಟು ನಿಮ್ಮನ್ನು ಬೇಡಿಕೊಳ್ಳುತ್ತೇನೆ, ನನಗೆ ದಾರಿ ಬಿಡಿ. ನಾನು ದೇಶದಿಂದ ಹೊರಹಾಕಲ್ಪಟ್ಟ ರಾಜಪುತ್ರನ ಹೆಂಡತಿ. ನಾನೂ ಪತಿವ್ರತೆ ಸೀತೆಯಂತೆ ಗಂಡನ ಜೊತೆಗೇ ಬಂದವಳು. ಅವನ ನೆರಳಾಗಿಯೇ ಬದುಕುವವಳು. ನೀವೂ ಕೂಡ ರಾತ್ರಿಯಾದರೆ ನಿಮ್ಮ ನಿಮ್ಮ ಮಕ್ಕಳನ್ನು ನೋಡುತ್ತೀರಿ. ಹಾಗೆಯೇ ನಾನೂ ನನ್ನ ಮಕ್ಕಳಾದ ಜಾಲಿಕುಮಾರ ಮತ್ತು ಕೃಷ್ಣಾಜಿನರನ್ನು ನೋಡಬಯಸುತ್ತೇನೆ. ನಿಮಗೆ ಬೇಕಾದರೆ ನಾನು ಸಂಗ್ರಹಿಸಿ ಇಟ್ಟ ಫಲಮೂಲಗಳು ಮತ್ತು ಖಾದ್ಯ ವಸ್ತುಗಳನ್ನು ನಿಮಗೆ ಕೊಟ್ಟುಬಿಡುತ್ತೇನೆ. ದಯವಿಟ್ಟು ನನಗೆ ದಾರಿಬಿಡಿ' ಎಂದು ಪರಿಪರಿಯಾಗಿ ಬೇಡಿದಳು. ಆಗ ಬೆಳದಿಂಗಳು ಹರಡಿಕೊಂಡಿತು. ಸರಿಯಾದ ಸಮಯವಾಯಿತೆಂದು ಪ್ರಾಣಿಗಳಾಗಿದ್ದ ದೇವಪುತ್ರರು ಎದ್ದು ದಾರಿಯನ್ನು ಬಿಟ್ಟು ಹೊರಟುಹೋದರು. ಕಾಡುಪ್ರಾಣಿಗಳು ಹೊರಟುಹೋದಮೇಲೆ ಆಕೆ ನಡೆದು ಆಶ್ರಮಕ್ಕೆ ಬಂದಳು. ಅಂದು ಹುಣ್ಣಿಮೆ. ಉಪೋಸಥದ ದಿನ. ಆಕೆ ನಿತ್ಯವೂ ಯೋಗಭ್ಯಾಸ ಮಾಡುವ ಜಗುಲಿಯ ಮೇಲೆ ನಿಂತುಕೊಂಡು, ಮಕ್ಕಳು ಸಾಮಾನ್ಯವಾಗಿ ಕುಳಿತಿರುತ್ತಿದ್ದ ಸ್ಥಳವನ್ನು ನೋಡಿದಳು. ಅಲ್ಲಿ ಮಕ್ಕಳು ಕಾಣಲಿಲ್ಲ. ಆಕೆಗೆ ಮತ್ತಷ್ಟು ಗಾಬರಿಯಾಯಿತು. ❖

## ದಿನ ಭವಿಷ್ಯ

ಗುರುವಾರ ಆಗಸ್ಟ್ 12, 2021

**ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ಚತುರ್ಥೀ ಗಂ. 23-31 ಹ. 3-38) ಗುರುವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ. 9-44 (ಹ. 10-07) ಸಿದ್ಧ ನಾಮ ಯೋಗ ಗಂ. 30-5 ಭದ್ರೆ ಕರಣ ಗಂ. 23-21 ವಿಷ ಗಂ. 29-55 ಅಮೃತ ಗಂ. 52-58 :** ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-10 ಸೂರ್ಯಾಸ್ತ: 6-39 ಅದೃಷ್ಟ ಸಂಖ್ಯೆ 1 8

**ಮೇಷ:** ಹೆಚ್ಚಿನ ಯಶಸ್ಸಿಗಾಗಿ ವಿದ್ಯಾರ್ಥಿಗಳು ಶ್ರಮವಹಿಸುವುದ ಅಗತ್ಯ. ವಿವಾಹಾಪೇಕ್ಷಿತರಿಗೆ ಕಂಕಣ ಭಾಗ್ಯ ಕೂಡಿಬರುವ ಸಾಧ್ಯತೆ. ಸಾಲದಿಂದ ಮುಕ್ತಿ.

**ವೃಷಭ:** ಆರ್ಥಿಕ ಲಾಭದ ಶುಭ ಸುದ್ದಿಯನ್ನು ಕೇಳುವಿರಿ. ಭೂ ಲಾಭವಾಗುವ ಸಾಧ್ಯತೆ. ಮಾನಸಿಕವಾಗಿ ತೊಳಲಾಟ. ಪ್ರವಾಸಕ್ಕೆ ಹೋಗಿಬರುವ ಯೋಜನೆ ಸಫಲವಾಗಲಿದೆ.

**ಮಿಥುನ:** ರಾಜಕಾರಣಿಗಳಿಗೆ ಒತ್ತಡದ ದಿನ. ಸಾರ್ವಜನಿಕ ರಂಗದಲ್ಲಿ ಪುರಸ್ಕಾರ. ಧಾರ್ಮಿಕ ಕ್ಷೇತ್ರದಲ್ಲಿ ಆಸಕ್ತಿ. ವಿದ್ಯಾರ್ಥಿಗಳಿಗೆ ಸಂತಸದ ದಿನವಾಗಲಿದೆ. ಹೊರಗಿನ ಶತೃಗಳ ಬಗ್ಗೆ ಗಮನ ಅಗತ್ಯ.

**ಕರ್ಕಾಟಕ:** ಉದ್ಯೋಗದಲ್ಲಿ ಯಶಸ್ಸು. ಕುಟುಂಬ ಸಂಬಂಧ ಕಲಹದಿಂದ ಮುಕ್ತಿ. ಆರೋಗ್ಯದಲ್ಲಿ ಚೇತರಿಕೆ. ವಿದ್ಯಾರ್ಥಿಗಳಲ್ಲಿ ಆಲಸ್ಯ. ಹಿತೈಷಿಗಳಿಂದ ಉತ್ತಮ ಸಹಕಾರ.

**ಸಿಂಹ:** ಕಾರ್ಖಾನೆ ಕೆಲಸಗಾರರಿಗೆ ಸಮಾಧಾನಕರ ದಿನ. ಪ್ರಯತ್ನಪೂರಕವಾದ ಸಫಲತೆ ಸಿಗುವುದು. ತಂದೆತಾಯಿಯಿಂದ ಪ್ರೋತ್ಸಾಹ. ಆರೋಗ್ಯ ವಿಚಾರದಲ್ಲಿ ಸ್ವಲ್ಪಮಟ್ಟಿನ ಕಾಳಜಿ ಅಗತ್ಯ.

**ಕನ್ಯಾ:** ಸೈನಿಕರಿಗೆ ಸಂತೋಷದ ದಿನ. ಜೀವನದಲ್ಲಿ ಸಾಧನೆಯ ಆತ್ಮತೃಪ್ತಿ. ಆರ್ಥಿಕ ವಿಷಯ ಅದರಲ್ಲೂ ಪಾಲುದಾರಿಕೆ ವ್ಯವಹಾರದಲ್ಲಿ ಹೆಚ್ಚಿನ ಗಮನ ವಹಿಸುವುದು ಅಗತ್ಯ.

**ತುಲಾ:** ಕಲಾವಿದರಿಗೆ ಸಮಾಧಾನಕರ ದಿನ. ಗೌರವ ಪ್ರಾಪ್ತಿ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ಸಾಂಸಾರಿಕವಾಗಿ ಉತ್ತಮದಿನಗಳನ್ನು ಎದುರುಗೊಳ್ಳಲಿದ್ದೀರಿ.

**ವೃಶ್ಚಿಕ:** ವಸ್ತ್ರಾದಿ ವ್ಯವಹಾರಸ್ಥರಿಗೆ ಅಧಿಕ ಲಾಭ. ಸಹೋದ್ಯೋಗಿಗಳಿಂದ ಸಂತೋಷದ ವಾತಾವರಣ. ಮನೆಯವರೊಂದಿಗೆ ಪುಣ್ಯ ಕ್ಷೇತ್ರಗಳಿಗೆ ಭೇಟಿ. ಆರೋಗ್ಯದಲ್ಲಿ ಕಿರಿಕಿರಿ.

**ಧನು:** ಓದು ಅಥವಾ ಉದ್ಯೋಗ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ. ರೈತರಿಗೆ ಸಂತೋಷದ ದಿನ. ಕಾರ್ಯಯೋಜನೆಯೊಂದನ್ನು ನಿರೂಪಿಸಲಿದ್ದೀರಿ. ಆರ್ಥಿಕ ಉನ್ನತಿಗೆ ದಾರಿ ಸುಗಮ.

**ಮಕರ:** ಮನಸ್ಸಿನಲ್ಲಿ ಗೊಂದಲಕರ ವಾತಾವರಣ ಕಂಡುಬರುತ್ತದೆ. ಸಂಸಾರದಲ್ಲಿ ಸಮಾಧಾನ ಮುಖ್ಯ. ಮಕ್ಕಳಿಂದ ಸಂತೋಷ. ದೃಢ ನಿರ್ಧಾರವಿರಲಿ. ದೂರ ಪ್ರಯಾಣದಲ್ಲಿ ಯಶಸ್ಸಿನೊಂದಿಗೆ ಸಂತಸ.

**ಕುಂಭ:** ಕಾರ್ಯ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನಿರಾಳ. ರಕ್ಷಣಾ ಇಲಾಖೆಯಲ್ಲಿರುವವರಿಗೆ ತುರ್ತು ಕೆಲಸಗಳು ಎದುರಾಗಲಿವೆ. ಮಿತ ವ್ಯಯ ಮಾಡುವಿರಿ. ಆರ್ಥಿಕವಾಗಿ ಸಬಲರಾಗುವಿರಿ.


**ಮೀನ:** ಮಧ್ಯವರ್ತಿಗಳಿಗೆ ಹೆಚ್ಚಿನ ಆರ್ಥಿಕ ಪ್ರಗತಿ ಕಂಡುಬರುವುದು. ಮಾನಸಿಕ ತೊಳಲಾಟ. ಆರೋಗ್ಯದಲ್ಲಿ ಏರಿಳಿತ ಕಂಡುಬರಲಿದೆ.

**ನಿಮ್ಮ ಜನ್ಮದಿನ 12-ಆಗಸ್ಟ್** ಇಂದು ಅತ್ಯಂತ ಶುಭದಾಯಕವಾಗಿದ್ದು, ಧಾರ್ಮಿಕಕಾರ್ಯದಲ್ಲಿ ಅತಿಯಾದ ಆಸಕ್ತಿ. ಉದ್ಯೋಗದಲ್ಲಿ ಯಶಸ್ಸು. ಕೀರ್ತಿ ಸ್ಥಾನಮಾನ ಪ್ರಾಪ್ತಿಯಾಗಲಿದೆ. ಹೊಸ ಉದ್ಯಮದಲ್ಲಿ ಹಣ ತೊಡಗಿಸುವ ಸಾಧ್ಯತೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವವರಿಗೆ ಅಧಿಕಾರ ಪ್ರಾಪ್ತವಾಗುವುದು.

## ಪದಬಂಧ 4686 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ರಾಜನ ಸಭೆ (3)
3.ಶ್ರೀಕೃಷ್ಣನ ಸೋದರ ಮಾವ (2)
5.ವಿರೋಧದ ವಿರುದ್ಧ ಪದ (2)
6.ವಿರಳ ಎಂದು ಹೀಗೆ ಹೇಳಿ (4)
7.ಇದು ಕನ್ನಡಿಗನ ಯೂನಿವರ್ಸಿಟಿ (7)
10.ಬಹಿರಂಗ ವ್ಯವಹಾರ ರೋಷದಿಂದ ಕೂಡಿದೆಯಲ್ಲಾ? (4)
11.ಸ್ವಪ್ರಯೋಜನವನ್ನು ಹೀಗೆನ್ನಿ (2)
13.ಇದು ವರ್ತಕನ ವಾದ! (2)
14.ಬಿದಿರು ಗರಿಗಳನ್ನು ಹೆಣೆದು ಮಾಡಿದ ತಟ್ಟಿ (3)

**ಮೇಲಿಂದ ಕೆಳಕ್ಕೆ**
1.ಪ್ರವಾಹ ಹೀಗೆ ಬಂದಿದೆ (2)
2.ಈತ ಪಕ್ಕಾ ಹಳ್ಳಿಯವ (3)
4.ಹತ್ತಿರ ಪದಕ್ಕೊಂದು ಪರ್ಯಾಯ ಪದ (3)
5.ಪದ ಹೇಳಿ ಪಡೆದ ಡಿಗ್ರಿ (3)
6.ಭೂಮಿಗಿರುವ ಮತ್ತೊಂದು ಹೆಸರು (3)
8.ವಿಷದೊಳಗಿರುವ ಹೆಚ್ಚಿನ ಗುಣ ಗೊತ್ತಾಯಿತೇ? (3)
9.ಇದು ನಿಶ್ಚಯವಾದುದು (3)
10.ಕುದುರೆ ಸವಾರನಿವನು (3)
11.ಆದರದಿಂದ ಬರಮಾಡಿಕೊಳ್ಳುವುದು (3)
12.ಇದು ಅನುಮಾನ! (2)



### 4685ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಆಭರಣ 3.ಮುಳ್ಳುಹಂದಿ 5.ಹಸಾದ 7.ಭವ 9.ವನ 10.ಅಂಕಣ 11.ಪಿಕ 12.ಣಬ 14.ವನಜ 16.ಗಿರಿದುರ್ಗ 17.ನವರಂಗ

**ಮೇಲಿಂದ ಕೆಳಕ್ಕೆ:** 1.ಆರಂಭ 2.ಣಹ 3.ಮುದ 4.ದಿವಾನ 6.ಸಾಮೂಹಿಕಭೋಜನ 8.ವನಪಾಲಕ 9.ವಶೀಕರಣ 11.ಪಿರಂಗಿ 13.ಬಳಗ 14.ವರ್ಗ 15.ಜನ

## ಸುಡೊಕು 5072

| | | | | | | | | |
|---|---|---|---|---|---|---|---|---|
| 2 | | 9 | | | 7 | 1 | | 4 |
| | 6 | | | | | | | |
| 5 | | 7 | 4 | | 6 | 2 | | 3 |
| | | | | | 5 | | 3 | 1 |
| | 5 | 1 | | 8 | | | 2 | |
| 3 | | | 9 | | | | | 8 |
| | | 2 | | 1 | | 8 | | 5 |
| 9 | | | 7 | | 8 | | 1 | 2 |
| | 8 | | | 2 | | 4 | | 6 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5071 ಸುಡೊಕು

| | | | | | | | | |
|---|---|---|---|---|---|---|---|---|
| 2 | 1 | 6 | 3 | 7 | 4 | 8 | 5 | 9 |
| 9 | 4 | 7 | 5 | 8 | 6 | 3 | 1 | 2 |
| 3 | 8 | 5 | 9 | 2 | 1 | 4 | 6 | 7 |
| 1 | 2 | 3 | 8 | 6 | 5 | 9 | 7 | 4 |
| 5 | 9 | 8 | 2 | 4 | 7 | 1 | 3 | 6 |
| 6 | 7 | 4 | 1 | 9 | 3 | 5 | 2 | 8 |
| 7 | 3 | 9 | 6 | 1 | 8 | 2 | 4 | 5 |
| 4 | 5 | 2 | 7 | 3 | 9 | 6 | 8 | 1 |
| 8 | 6 | 1 | 4 | 5 | 2 | 7 | 9 | 3 |

# ಬಿಜಿಎಂಎಲ್ ಜಮೀನಿನಲ್ಲಿ ಕೈಗಾರಿಕಾ ಟೌನ್‌ಶಿಪ್: ನಿರಾಣಿ ಮನವಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಟೌನ್‌ಶಿಪ್ ಸ್ಥಾಪಿಸಲು ಎಲ್ಲ ರೀತಿಯ ಸಹಕಾರ: ಜೋಶಿ ಭರವಸೆ
- ಕೈಗಾರಿಕೆಗಳಿಗೆ ಉತ್ತೇಜನ, ಉದ್ಯೋಗ ಸೃಷ್ಟಿಗೂ ಸಹಕಾರಿ: ನಿರಾಣಿ

**ಬೆಂಗಳೂರು:** ಕೋಲಾರ ಜಿಲ್ಲೆ ಕೆಜಿಎಫ್‌ನ ಭಾರತ್ ಗೋಲ್ಡ್ ಮೈನ್ಸ್ ಕಂಪನಿಯ (ಬಿಜಿಎಂಎಲ್) ವ್ಯಾಪ್ತಿಯಲ್ಲಿ ಬಳಕೆಯಾಗದೆ ಇರುವ ಜಮೀನಿನಲ್ಲಿ ಕೈಗಾರಿಕಾ ಟೌನ್‌ಶಿಪ್ (ಇಂಡಸ್ಟ್ರಿಯಲ್ ಟೌನ್‌ಶಿಪ್) ಆರಂಭಿಸಲು ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಮನವಿ ಮಾಡಿದ್ದಾರೆ.


ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ ಅವರನ್ನು ದೆಹಲಿಯಲ್ಲಿ ಬುಧವಾರ ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದ ನಿರಾಣಿ, ಕೆಜಿಎಫ್‌ನಲ್ಲಿ ಟೌನ್‌ಶಿಪ್ ನಿರ್ಮಾಣದ ಅಗತ್ಯದ ಬಗ್ಗೆ ಮನವರಿಕೆ ಮಾಡಿದರು.

ನಿರಾಣಿ ಕೋರಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಜೋಶಿ, 'ಸ್ಥಳ ಪರಿಶೀಲಿಸಿ, ವಸ್ತುಸ್ಥಿತಿ ಅಧ್ಯಯನ ಮಾಡಲು ಸದ್ಯದಲ್ಲಿ ಅಧಿಕಾರಿಗಳನ್ನು ಕಳುಹಿಸುತ್ತೇನೆ. ಟೌನ್‌ಶಿಪ್ ಸ್ಥಾಪಿಸಲು ಎಲ್ಲ ರೀತಿಯ ಸಹಕಾರ ನೀಡಲಾಗುವುದು' ಎಂದು ಭರವಸೆ ನೀಡಿದರು.

ಬಿಜಿಎಂಎಲ್ ವ್ಯಾಪ್ತಿಯಲ್ಲಿರುವ ಸುಮಾರು 3,212 ಎಕರೆ ಪ್ರದೇಶದಲ್ಲಿ ಡ್ರೋಣ್ ಮೂಲಕ ಸಮೀಕ್ಷೆ ನಡೆಸಿದ್ದ ಕೇಂದ್ರ ಸರ್ಕಾರ, ಈ ಪ್ರದೇಶ ಗಣಿಗಾರಿಕೆಗೆ ಸೂಕ್ತವಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ. ಹೀಗಾಗಿ, ಬಳಕೆಯಾಗದೆ ಉಳಿದಿರುವ ಜಮೀನಿನಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಿಸಲು ಅನುಮತಿ ನೀಡುವಂತೆ ನಿರಾಣಿ ಮನವಿ ಮಾಡಿದರು.

ಬೆಂಗಳೂರಿನಿಂದ ಕೆಜಿಎಫ್ ಸುಮಾರು 100 ಕಿ.ಮೀ ದೂರದಲ್ಲಿದೆ. ವಿಶ್ವದರ್ಜೆಯ ರಾಷ್ಟ್ರೀಯ ಹೆದ್ದಾರಿಗಳು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಅತ್ಯುತ್ತಮ ರೈಲ್ವೆ ಸಂಪರ್ಕ ಹೊಂದಿದ್ದು, ಕೈಗಾರಿಕೆ ಸ್ಥಾಪನೆಗೆ ಅನುಕೂಲಕಾರಿಯಾಗಿದೆ. ಚೆನ್ನೈ- ಬೆಂಗಳೂರು ಕೈಗಾರಿಕಾ ಕಾರಿಡಾರ್ ಕೂಡ ಇಲ್ಲಿಯೇ ಹಾದು ಹೋಗುತ್ತಿದೆ. ಟೌನ್‌ಶಿಪ್ ನಿರ್ಮಾಣದಿಂದ ಈ ಭಾಗದಲ್ಲಿ ಕೈಗಾರಿಕಾ ಚಟುವಟಿಕೆಗೆ ಉತ್ತೇಜನ ಸಿಗಲಿದೆ. ಅಲ್ಲದೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ಸುತ್ತಮುತ್ತಲ ಭಾಗಗಳಲ್ಲಿ ಉದ್ಯೋಗ ಸೃಷ್ಟಿಸಲು ಸಹಕಾರಿಯಾಗಲಿದೆ' ಎಂದು ನಿರಾಣಿ ಅವರು ವಿವರಿಸಿದರು.

**ಷೇರುಪೇಟೆ ವಹಿವಾಟು** 29




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 16,280 |
| ಇಂದಿನ ಅಂತ್ಯ | 16,282 |
| ▲ | 2 |
| ದಿನದ ಗರಿಷ್ಠ | 16,338 |

**ವಿನಿಮಯ ದರ**

| | |
|---|---|
| $ ಡಾಲರ್ | 74.44 |
| £ ಪೌಂಡ್ | 102.84 |
| € ಯುರೊ | 87.18 |
| ¥ ಯೆನ್ (100ಕ್ಕೆ) | 67 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹420 |
| 12 ಮೊಟ್ಟೆಗೆ | ₹60 |
| ಮೈಸೂರು | |
| 100 ಮೊಟ್ಟೆಗೆ | ₹420 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1475 (1470) |
| ಸೋಯಾ (ರಿಫೈನ್ಡ್) | ₹1390 (1375) |
| ಸೂರ್ಯಕಾಂತಿ (ರಿಫೈನ್ಡ್) | ₹1460(1450) |
| ಪಾಮೋಲಿನ್ | ₹1270 (1243) |







ಆರ್‌ಬಿಐ ಗವರ್ನರ್ ಜೊತೆ ಮಾತುಕತೆ: ಗಡ್ಕರಿ

# ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚುವರಿ ಮೀಸಲು ನಿಧಿ

**ನವದೆಹಲಿ (ಪಿಟಿಐ):** 'ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹೆಚ್ಚುವರಿ ವಿದೇಶಿ ವಿನಿಮಯ ಮೀಸಲು ನಿಧಿಯನ್ನು ರಸ್ತೆ ನಿರ್ಮಾಣ ಯೋಜನೆಗಳಿಗೆ ಬಳಸುವ ನೀತಿಯೊಂದನ್ನು ರೂಪಿಸುವ ಅಗತ್ಯವಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘವು (ಸಿಐಐ) ಆಯೋಜಿಸಿದ್ದ ವರ್ಚುವಲ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಾವು ಹೆಚ್ಚಿನ ಪ್ರಮಾಣದ ಮೀಸಲು ನಿಧಿಯನ್ನುಹೊಂದಿದ್ದೇವೆ.ದೇಶದಲ್ಲಿಮೂಲಸೌಕರ್ಯ ಅಭಿವೃದ್ಧಿಗೆ ಆ ಹೆಚ್ಚುವರಿ ಮೀಸಲು ನಿಧಿಯನ್ನು ಹೇಗೆ ಬಳಸಬಹುದು ಎನ್ನುವ ಕುರಿತು ನೀತಿಯೊಂದನ್ನು ರೂಪಿಸಲು ಆರ್‌ಬಿಐ ಗವರ್ನರ್ ಜೊತೆ ಮಾತನಾಡಲು ನಿರ್ಧರಿಸಿದ್ದೇನೆ' ಎಂದು ಹೇಳಿದ್ದಾರೆ.

ಆರ್‌ಬಿಐನ ಈಚಿನ ಮಾಹಿತಿಯ ಪ್ರಕಾರ, ದೇಶದ ವಿದೇಶಿ ವಿನಿಮಯ ಮೀಸಲು ನಿಧಿಯು ಜುಲೈ 30ರ ಅಂತ್ಯಕ್ಕೆ ₹ 69,759 ಕೋಟಿಗಳಷ್ಟು ಹೆಚ್ಚಾಗಿ ಒಟ್ಟಾರೆ ಮೀಸಲು ನಿಧಿಯು ₹ 45.95 ಲಕ್ಷ ಕೋಟಿಗಳಿಗೆ ಏರಿಕೆ ಕಂಡಿದೆ.

> ಆರ್ಥಿಕ ಬೆಳವಣಿಗೆಯು ಮತ್ತೆ ವೇಗ ಪಡೆದುಕೊಳ್ಳುತ್ತಿದ್ದು, ದೇಶಿ ಉದ್ಯಮವು ಸವಾಲುಗಳನ್ನು ಎದುರಿಸುವ ಮನೋಭಾವ ಹೆಚ್ಚಿಸಿಕೊಳ್ಳಬೇಕು
> **ನರೇಂದ್ರ ಮೋದಿ,** ಪ್ರಧಾನಿ

'ಭಾರತದಲ್ಲಿ ಮೂಲಸೌಕರ್ಯ ನಿಧಿ ಸ್ಥಾಪಿಸುವ ಕುರಿತಾಗಿ ವಿಶ್ವಬ್ಯಾಂಕ್, ಏಷ್ಯಾ ಅಭಿವೃದ್ಧಿ ಬ್ಯಾಂಕ್ ಮತ್ತು ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್ ಜೊತೆ ಮಾತುಕತೆ ನಡೆಸಲಾಗಿದ್ದು, ಉತ್ತಮ ಪ್ರತಿಕ್ರಿಯೆ ಬಂದಿಲ್ಲ. ಹೀಗಾಗಿ ಮೂಲಸೌಕರ್ಯ ಯೋಜನೆಗಳಿಗೆ ಕಡಿಮೆ ಬಡ್ಡಿದರಕ್ಕೆ ನೆರವು ನೀಡುವಂತಹ ಹಣಕಾಸು ಸಂಸ್ಥೆಗಳ ಅಗತ್ಯ ಇದೆ' ಎಂದು ಗಡ್ಕರಿ ಹೇಳಿದ್ದಾರೆ.

ಭಾರತೀಯ ರೈಲ್ವೆಯು 'ಐಆರ್‌ಎಫ್‌ಸಿ', ಇಂಧನ ಸಚಿವಾಲಯವು ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿ) ಹೊಂದಿರುವಂತೆಯೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೂ (ಎನ್‌ಎಚ್‌ಎಐ) ಒಂದು ಹಣಕಾಸು ಸಂಸ್ಥೆಯ ಅಗತ್ಯ ಇದೆ ಎಂದು ಸಚಿವ ಗಡ್ಕರಿ ಪ್ರತಿಪಾದಿಸಿದ್ದಾರೆ.

**ವರ್ಷದೊಳಗೆ ಖಾಸಗೀಕರಣ:** 'ಕೋವಿಡ್–19 ಸಾಂಕ್ರಾಮಿಕದಿಂದಾಗಿ ಹಿನ್ನಡೆ ಅನುಭವಿಸಿದ್ದ ಕೇಂದ್ರೋದ್ಯಮಗಳ ಷೇರುವಿಕ್ರಯ ಪ್ರಕ್ರಿಯೆ ಮತ್ತೆ ಚುರುಕು ಪಡೆದುಕೊಂಡಿದ್ದು, ಮಾರ್ಚ್ ಅಂತ್ಯದೊಳಗಾಗಿ ಪೂರ್ಣಗೊಳ್ಳಲಿದೆ' ಎಂದು ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ್ ಪಾಂಡೆ ಹೇಳಿದ್ದಾರೆ.

'ಏರ್ ಇಂಡಿಯಾ, ಬಿಪಿಸಿಎಲ್, ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಪವನ್ ಹನ್ಸ್, ಬಿಇಎಂಎಲ್ ಮತ್ತು ನೀಲಾಚಲ್ ಇಸ್ಪತ್ ನಿಗಮ ಲಿಮಿಟೆಡ್ ಕಂಪನಿಗಳ ಖಾಸಗೀಕರಣವು ಈ ವರ್ಷವೇ ಪೂರ್ಣಗೊಳ್ಳಲಿದೆ' ಎಂದು ತಿಳಿಸಿದ್ದಾರೆ.

ಸರ್ಕಾರವು 2021–22ರಲ್ಲಿ ಷೇರುವಿಕ್ರಯದ ಮೂಲಕ ಒಟ್ಟಾರೆ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 600-6500 |
| ನಡುಗೋಲು | 700-750 |
| ರಾಶಿ | 800-850 |
| ರಾಶಿ ಉತ್ತಮ | 900-950 |
| ಜರಡಿ | 1000-1050 |
| ಹೆರಕಿದ್ದು | 1200-1300 |
| ಹಸಿರು ಸಾಧಾರಣ | 800-850 |
| ಹಸಿರು ಉತ್ತಮ | 1000-1050 |
| ಹಸಿರು ಅತಿ ಉತ್ತಮ | 1300-1400 |
| ಕಾಳು ಮೆಣಸು | 380 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-45000 |
| ಹಳತು | 42500-52000 |
| **ಕುಮಟ** | |
| ಚಿಪ್ಪು | 32269-34899 |
| ಕೋಕ | 22099-32019 |
| ಫ್ಯಾಕ್ಟರಿ | 15169-20111 |
| ಹಳೆಚಾಲಿ | 41569-43599 |
| ಹೊಸಚಾಲಿ | 38299-40279 |
| **ಪುತ್ತೂರು** | |
| ಕೋಕ | 10500-26000 |
| ಹೊಸತು | 31000-45000 |
| **ಸಿದ್ದಾಪುರ** | |
| ಬಿಳಿಗೋಟು | 28699-34999 |
| ಚಾಲಿ | 37899-40901 |
| ಕೋಕ | 23699-31899 |
| ಕೆಂಪುಗೋಟು | 30399-30889 |
| ರಾಶಿ | 38699-42499 |
| ತಟ್ಟಿಬೆಟ್ಟೆ | 32699-38112 |
| **ರಾಮನಗರ ರೇಷ್ಮೆಗೂಡು** | |
| ಮಿಶ್ರತಳಿ | 305-422 |
| ದ್ವಿತಳಿ | 330-533 |

**ಕಾಫಿ** (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 13650 | 12750 | 12400 | 182 ಸೆಂಟ್ಸ್ |
| ಎಸಿ | 6150 | 4800 | 4950 | |
| ಆರ್‌ಪಿ | 6200 | 5800 | 6100 | ಲಂಡನ್ |
| ಆರ್‌ಸಿ | 3430 | 3300 | 3475 | 1858 ಡಾಲರ್ಸ್ |

# 30.86 ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆ ನಿರೀಕ್ಷೆ

**ನವದೆಹಲಿ (ಪಿಟಿಐ):** ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು 2020–21ನೇ ಬೆಳೆ ವರ್ಷದಲ್ಲಿ ಶೇ 3.74ರಷ್ಟು ಹೆಚ್ಚಾಗುವ ಅಂದಾಜು ಮಾಡಲಾಗಿದ್ದು, ದಾಖಲೆಯ 30.86 ಕೋಟಿ ಟನ್‌ಗಳಿಗೆ ತಲುಪಲಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಬುಧವಾರ ಹೇಳಿದೆ.

ಆಹಾರ ಧಾನ್ಯಗಳ ಉತ್ಪಾದನೆಯ ಕುರಿತು ಸಚಿವಾಲಯವು ಬುಧವಾರ ನಾಲ್ಕನೆಯ ಮುಂಗಡ ಅಂದಾಜನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ, ಮೂರನೇ ಅಂದಾಜಿಗೆ ಹೋಲಿಸಿದರೆ ನಾಲ್ಕನೇ ಅಂದಾಜಿನಲ್ಲಿ 32.2 ಲಕ್ಷ ಟನ್‌ಗಳಷ್ಟು ಹೆಚ್ಚು ಉತ್ಪಾದನೆ ಆಗಲಿದೆ ಎಂದು ಹೇಳಿದೆ. 2019–20ನೇ ಬೆಳೆ ವರ್ಷದಲ್ಲಿ 29.75 ಕೋಟಿ ಟನ್‌ಗಳಷ್ಟು ಗರಿಷ್ಠ ಪ್ರಮಾಣದ ಆಹಾರ ಧಾನ್ಯಗಳ ಉತ್ಪಾದನೆ ಆಗಿತ್ತು.

ರೈತರ ಅವಿರತ ಪರಿಶ್ರಮ, ವಿಜ್ಞಾನಿಗಳ ಕೌಶಲ ಹಾಗೂ ಸರ್ಕಾರದ ಕೃಷಿ ಮತ್ತು ರೈತ ಸ್ನೇಹಿ ನೀತಿಗಳಿಂದಾಗಿ ದೇಶದಲ್ಲಿ ದಾಖಲೆಯ ಪ್ರಮಾಣದ ಉತ್ಪಾದನೆ ಆಗುತ್ತದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಹೇಳಿದ್ದಾರೆ.

# ಬದಲಾವಣೆಗೆ ಅನುಗುಣವಾಗಿ ಕಾರ್ಯತಂತ್ರ: ಐಟಿಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉದ್ಯಮದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ಐಟಿಸಿ ತನ್ನ ಕಾರ್ಯತಂತ್ರವನ್ನು ಮರುಹೊಂದಿಸಿಕೊಳ್ಳುತ್ತಿದೆ. ಆ ಮೂಲಕ ಭವಿಷ್ಯದಲ್ಲಿ ಸುಸ್ಥಿರ ಬೆಳವಣಿಗೆ ಸಾಧಿಸಲು ಅಗತ್ಯವಾಗಿರುವ ವ್ಯಾಪಾರ ಮಾದರಿಗಳನ್ನು ಅಳವಡಿಸಿಕೊಳ್ಳುತ್ತಿದೆ ಎಂದು ಕಂಪನಿಯ ಅಧ್ಯಕ್ಷ ಸಂಜೀವ್ ಪುರಿ ತಿಳಿಸಿದ್ದಾರೆ.

ಬುಧವಾರ ವರ್ಚುವಲ್ ವೇದಿಕೆಯ ಮೂಲಕ ನಡೆದ ಕಂಪನಿಯ ವಾರ್ಷಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸ್ಪರ್ಧಾತ್ಮಕತೆಯ ಹೊಸ ಮಾದರಿಯನ್ನು ರೂಪಿಸಲು, ಹೊಸ ವ್ಯಾಪಾರ ಮಾದರಿಗಳನ್ನು ರಚಿಸಲು ಮತ್ತು ಹೊಸ ಅವಕಾಶಗಳನ್ನು ಬಳಸಿಕೊಳ್ಳಲು ಅತ್ಯಾಧುನಿಕ ಡಿಜಿಟಲ್ ತಂತ್ರಜ್ಞಾನಗಳಲ್ಲಿ ಹೂಡಿಕೆ ಮಾಡುವ ಮೂಲಕ ಕ್ರಿಯಾತ್ಮಕವಾದ 'ಭವಿಷ್ಯದ ತಂತ್ರಜ್ಞಾನ' (ಫ್ಯೂಚರ್‌ಟೆಕ್) ಉದ್ಯಮವನ್ನು ನಿರ್ಮಿಸುವೆಡೆಗೆ ಕಂಪನಿಯು ಗಮನ ಹರಿಸಿದೆ' ಎಂದು ಹೇಳಿದ್ದಾರೆ.

**ಮುಂಬೈ ಧಾರಣೆ**

**ಶೇಂಗಾ** 11-8-2021

| | |
|---|---|
| ಜಾವಾ 70/80(ಹೊಸ) | 9950-10000 |
| ಜಾವಾ 80/90(ಹೊಸ) | 9050-9100 |
| ದಪ್ಪ ಮಧ್ಯಪ್ರದೇಶ(ಹೊಸ) | 9550-9600 |
| ದಪ್ಪ ಗುಜರಾತ್(ಹೊಸ) | 9300-9400 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1485 (1480) |
| ಒಂದು ವಾರದ ಡೆಲಿವರಿ | 1480 (1475) |
| ಸೋಯಾ ಕಚ್ಚಾ | 1345 (1325) |
| ಪಾಮ್ ವಾರದ ಡೆಲಿವರಿ | 1268 (1241) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1400 (1390) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10 ಗ್ರಾಂ 46,100 (45,950)
ಬೆಳ್ಳಿ ಕೆ.ಜಿ 62,900 (62,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭಾರತ – ಇಂಗ್ಲೆಂಡ್ ತಂಡಗಳ ನಡುವಿನ ಎರಡನೇ ಟೆಸ್ಟ್ ಪಂದ್ಯ ಇಂದು ಆರಂಭ

# ‘ಲಾರ್ಡ್ಸ್’ ಜಯಕ್ಕೆ ವಿರಾಟ್–ರೂಟ್ ಕದನ

ಲಂಡನ್ (ಪಿಟಿಐ): ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಲಾರ್ಡ್ಸ್‌ನಲ್ಲಿ ಗುರುವಾರ ಆರಂಭವಾಗಲಿರುವ ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆ ಹೆಚ್ಚಿದೆ.

ಮಧ್ಯಮವೇಗಿ–ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಸೋಮವಾರ ಅಭ್ಯಾಸ ಮಾಡುವ ಸಂದರ್ಭದಲ್ಲಿ ತೀವ್ರ ಸ್ನಾಯುಸೆಳೆತದಿಂದ ಬಳಲಿದ್ದರು. ಆದ್ದರಿಂದ ಅವರು ಈ ಪಂದ್ಯದಲ್ಲಿ ಕಣಕ್ಕಿಳಿಯುವುದು ಅನುಮಾನ. ಅವರ ಸ್ಥಾನದಲ್ಲಿ ಸ್ಪಿನ್–ಆಲ್‌ರೌಂಡರ್ ಅಶ್ವಿನ್ ಆಡಬಹುದು.

ನಾಟಿಂಗ್‌ಹ್ಯಾಮ್‌ನಲ್ಲಿ ನಡೆದ ಮೊದಲ ಟೆಸ್ಟ್ ಡ್ರಾ ಆಗಿತ್ತು. ಆ ಪಂದ್ಯದಲ್ಲಿ ವಿರಾಟ್, ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು. ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ರವೀಂದ್ರ ಜಡೇಜ ಅವರ ಬ್ಯಾಟಿಂಗ್ ಕಳೆಗಟ್ಟಿತ್ತು. ಜಸ್‌ಪ್ರೀತ್ ಬೂಮ್ರಾ ಎರಡೂ ಇನಿಂಗ್ಸ್‌ಗಳಲ್ಲಿ ತಮ್ಮ ಸ್ವಿಂಗ್ ಮತ್ತು ಯಾರ್ಕರ್‌ಗಳ ಮೂಲಕ ಇಂಗ್ಲೆಂಡ್‌ಗೆ ಸಿಂಹಸ್ವಪ್ನರಾಗಿದ್ದರು.

ಕಳೆದ ಎರಡು ವರ್ಷಗಳಿಂದಲೂ ವಿರಾಟ್ ಮತ್ತು ಪೂಜಾರ ದೊಡ್ಡ ಮೊತ್ತವನ್ನು ಗಳಿಸುವಲ್ಲಿ ಯಶಸ್ವಿಯಾಗುತ್ತಿಲ್ಲ. ಉಪನಾಯಕ ರಹಾನೆ ಹೋದ ವರ್ಷ ಮೆಲ್ಬರ್ನ್‌ನಲ್ಲಿ ಶತಕ ದಾಖಲಿಸಿದ್ದು ಬಿಟ್ಟರೆ, ದೊಡ್ಡ ಇನಿಂಗ್ಸ್ ಕಟ್ಟುವಲ್ಲಿ ಸಫಲರಾಗಿಲ್ಲ.

ಲಂಡನ್‌ನಲ್ಲಿ 24 ಡಿಗ್ರಿ ಸೆಲ್ಸಿಯಸ್ ತಾಪಮಾನ ಇದೆ. ಈ ಪರಿಸ್ಥಿತಿಯಲ್ಲಿ ಆತಿಥೇಯ ಇಂಗ್ಲೆಂಡ್ ತಂಡವು ಹಸಿರು ಗರಿಕೆಗಳ ಪಿಚ್ ಉಳಿಸಿಕೊಳ್ಳುವುದೇ ಎಂಬ ಕುತೂಹಲ ಗರಿಗೆದರಿದೆ.


2018ರಲ್ಲಿ ಇಲ್ಲಿ ಸಿದ್ಧಪಡಿಸಲಾಗಿದ್ದ ಹಸಿರು ಪಿಚ್‌ನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಕ್ರಿಸ್ ವೋಕ್ಸ್ ಬೌಲಿಂಗ್ ಮುಂದೆ ಭಾರತ ತಂಡವು ಎರಡೂ ಇನಿಂಗ್ಸ್‌ಗಳಲ್ಲಿ ಕುಸಿದಿತ್ತು.

ಇಂತಹ ಪಿಚ್‌ನಲ್ಲಿ ಇಬ್ಬರು ಸ್ಪಿನ್ನರ್ ಗಳೊಂದಿಗೆ ಕಣಕ್ಕಿಳಿಯುವುದು ಕೊಹ್ಲಿ ಬಳಗಕ್ಕೆ ದುಬಾರಿಯಾಗಬಹುದು. ನಾಲ್ವರು ಮಧ್ಯಮವೇಗಿಗಳು ಮತ್ತು ಒಬ್ಬರು ಸ್ಪಿನ್ನರ್ ಸಂಯೋಜನೆ ಮಾಡಿದರೆ, ಇಶಾಂತ್ ಶರ್ಮಾ ಅಥವಾ ಉಮೇಶ್ ಯಾದವ್ ಅವರಲ್ಲಿ ಒಬ್ಬರು ಸ್ಥಾನ ಪಡೆಯಬಹುದು. ಮೊದಲ ಪಂದ್ಯದಲ್ಲಿ ಶತಕ ಬಾರಿಸಿರುವ ಇಂಗ್ಲೆಂಡ್ ನಾಯಕ ಜೋ ರೂಟ್, ಜಾನಿ ಬೆಸ್ಟೊ, ಜೋಸ್ ಬಟ್ಲರ್, ಜ್ಯಾಕ್ ಕ್ರಾಲಿ ಬ್ಯಾಟಿಂಗ್ ವಿಭಾಗದ ಪ್ರಮುಖರಾಗಿದ್ದಾರೆ.


ಅನುಭವಿ ಜೇಮ್ಸ್ ಆ್ಯಂಡರ್ಸನ್, ಒಲಿ ರಾಬಿನ್ಸನ್ ಮೊದಲ ಟೆಸ್ಟ್‌ನಲ್ಲಿ ಪ್ರವಾಸಿ ಬಳಗದ ಬ್ಯಾಟಿಂಗ್ ಪಡೆಗೆ ಪ್ರಬಲ ಸವಾಲೊಡ್ಡಿದ್ದರು. ಕೊಹ್ಲಿ ಸೇರಿದಂತೆ ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ಉತ್ತಮ ಅಡಿಪಾಯ ಹಾಕಿದರೆ, ಮಧ್ಯಕ್ರಮಾಂಕದಲ್ಲಿ ರಿಷಭ್ ಪಂತ್, ಜಡೇಜ ಅವರಿಂದ ಬರುವ ರನ್‌ಗಳು ತಂಡದ ಜಯಕ್ಕೆ ಸೋಪಾನವಾಗಬಲ್ಲವು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಭಾಗವಾಗಿರುವ ಈ ಸರಣಿಯಲ್ಲಿ ಜಯಿಸುವುದು ಉಭಯ ತಂಡಗಳಿಗೂ ಮಹತ್ವದ್ದಾಗಿದೆ. ಅದಕ್ಕಾಗಿ ನಡೆಯುವ ಹೋರಾಟವು ರೋಚಕತೆಯ ಹಂತ ತಲುಪುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.


ಜೋ ರೂಟ್ –ಎಎಫ್‌ಪಿ ಚಿತ್ರ



ವಿರಾಟ್ ಕೊಹ್ಲಿ ಬ್ಯಾಟಿಂಗ್ ಅಭ್ಯಾಸ –ಪಿಟಿಐ ಚಿತ್ರ




ಜೇಮ್ಸ್ ಆ್ಯಂಡರ್ಸನ್‌ಗೆ ಭುಜದ ನೋವು. ಬ್ರಾಡ್‌ಗೆ ಅಭ್ಯಾಸ ಮಾಡುವಾಗ ಗಾಯವಾಗಿದೆ. ಇವರಿಬ್ಬರು ಇಲ್ಲದಿರುವುದರಿಂದ ಕಠಿಣ ಸವಾಲು ಎದುರಿಸಬೇಕಾಗಿದೆ.

**ಜಾನಿ ಬೆಸ್ಟೊ,** ಇಂಗ್ಲೆಂಡ್ ತಂಡದ ಆಟಗಾರ

**ಮುಖ್ಯಾಂಶಗಳು**

- ಮಳೆಯಿಂದಾಗಿ ಮೊದಲ ಪಂದ್ಯ ಡ್ರಾ ಆಗಿತ್ತು
- ಲಯ ಕಂಡುಕೊಳ್ಳುವ ನಿರೀಕ್ಷೆಯಲ್ಲಿ ವಿರಾಟ್
- ಶಾರ್ದೂಲ್ ಠಾಕೂರ್, ಸ್ಟುವರ್ಟ್ ಬ್ರಾಡ್‌ಗೆ ಗಾಯ

### ತಂಡಗಳಿಗೆ ದಂಡ ಪಾಯಿಂಟ್ ಕಡಿತ

ನಾಟಿಂಗ್‌ಹ್ಯಾಮ್ ಟೆಸ್ಟ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ತಂಡವು ನಿಗದಿತ ಅವಧಿಯಲ್ಲಿ ಬೌಲಿಂಗ್ ಪೂರೈಸದ ಕಾರಣ ಪಂದ್ಯ ಶುಲ್ಕದ ಶೇ 40ರಷ್ಟು ಮೊತ್ತದ ದಂಡ ವಿಧಿಸಲಾಗಿದೆ. ಅಲ್ಲದೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಪಾಯಿಂಟ್‌ಗಳಲ್ಲಿ ಉಭಯ ತಂಡಗಳು ತಲಾ ಎರಡು ಅಂಕ ಕಳೆದುಕೊಂಡಿವೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ತಿಳಿಸಿದೆ.

## ನೀರಜ್ ಸಾಧನೆ ‘ಮಾಂತ್ರಿಕ ಕ್ಷಣ’ಕ್ಕೆ ಸೇರ್ಪಡೆ

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮೊತ್ತಮೊದಲ ಚಿನ್ನ ಗೆದ್ದುಕೊಟ್ಟ ನೀರಜ್ ಚೋಪ್ರಾ ಅವರು ಫೈನಲ್ ಸ್ಪರ್ಧೆಯಲ್ಲಿ ಜಾವೆಲಿನ್ ಎಸೆದ ಬಗೆ ಟೋಕಿಯೊ ಒಲಿಂಪಿಕ್ಸ್‌ನ ಟ್ರ್ಯಾಕ್ ಮತ್ತು ಫೀಲ್ಡ್‌ನ ಗಮನಾರ್ಹ ಘಟನೆಗಳಲ್ಲಿ ಒಂದಾಗಿ ದಾಖಲಾಗಿದೆ. ವರ್ಲ್ಡ್ ಅಥ್ಲೆಟಿಕ್ಸ್ (ಅಂತರರಾಷ್ಟ್ರೀಯ ಅಥ್ಲೆಟಿಕ್ಸ್ ಫೆಡರೇಷನ್) ಇದನ್ನು ಅಗ್ರ 10 ‘ಮಾಂತ್ರಿಕ ಕ್ಷಣ’ಗಳಲ್ಲಿ ಒಂದು ಎಂದು ಘೋಷಿಸಿದೆ.

23 ವರ್ಷದ ನೀರಜ್ ಚೋಪ್ರಾ ಕಳೆದ ಶನಿವಾರ ನಡೆದ ಸ್ಪರ್ಧೆಯಲ್ಲಿ 87.58 ಮೀಟರ್ಸ್ ದೂರ ಎಸೆದು ಚಿನ್ನ ಗೆದ್ದುಕೊಂಡಿದ್ದರು. ಇದರೊಂದಿಗೆ ಒಲಿಂಪಿಕ್ಸ್‌ನ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಎರಡನೇ ಕ್ರೀಡಾಪಟು ಎನಿಸಿಕೊಂಡಿದ್ದರು.

ಕ್ರೀಡೆಯ ಬಗ್ಗೆ ಹೆಚ್ಚು ಆಸಕ್ತಿ ಇರುವವರಿಗೆ ಮಾತ್ರ ಟೋಕಿಯೊ ಒಲಿಂಪಿಕ್ಸ್‌ಗೂ ಮೊದಲು ನೀರಜ್ ಚೋಪ್ರಾ ಅವರ ಬಗ್ಗೆ ಗೊತ್ತಿತ್ತು. ಆದರೆ ಒಲಿಂಪಿಕ್ ಇತಿಹಾಸದಲ್ಲಿ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ಗೆದ್ದುಕೊಟ್ಟ ನಂತರ ಅವರ ಖ್ಯಾತಿ ಗಗನಕ್ಕೇರಿದೆ. ಕೋಟ್ಯಂತರ ಮಂದಿ ಅವರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರೆ ಎಂದು ವೆಬ್‌ಸೈಟ್‌ನಲ್ಲಿ ವರ್ಲ್ಡ್ ಅಥ್ಲೆಟಿಕ್ಸ್ ಬರೆದುಕೊಂಡಿದೆ.

ಒಲಿಂಪಿಕ್ಸ್‌ಗೂ ಮೊದಲು ಚೋಪ್ರಾ ಅವರಿಗೆ ಇನ್‌ಸ್ಟಾಗ್ರಾಮ್‌ನಲ್ಲಿ 143,000 ಹಿಂಬಾಲಕರು ಇದ್ದರು. ಈಗ ಆ ಸಂಖ್ಯೆ 32 ಲಕ್ಷಕ್ಕೇರಿದೆ.


ನೀರಜ್ ಚೋಪ್ರಾ –ಪಿಟಿಐ ಚಿತ್ರ

### ಲಾಕ್ರಾ, ಅಮಿತ್‌ಗೆ ₹2.5 ಕೋಟಿ

ಭುವನೇಶ್ವರ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ಪುರುಷರ ಹಾಕಿ ತಂಡದಲ್ಲಿದ್ದ ಒಡಿಶಾದ ಬೀರೇಂದ್ರ ಲಾಕ್ರ ಮತ್ತು ಅಮಿತ್ ರೋಹಿದಾಸ್ ಅವರಿಗೆ ತಲಾ ₹ 2.5 ಕೋಟಿ, ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿದ ಮಹಿಳಾ ತಂಡದ ದೀಪ್ ಗ್ರೇಸ್ ಎಕ್ಕಾ ಹಾಗೂ ನಮಿತಾ ಟೊಪ್ಪೊ ಅವರಿಗೆ ತಲಾ ₹ 50 ಲಕ್ಷವನ್ನು ಸರ್ಕಾರದಿಂದ ನೀಡಲಾಯಿತು.

## ರ‍್ಯಾಂಕಿಂಗ್: ಅಗ್ರ 10ರಲ್ಲಿ ಬೂಮ್ರಾ

ದುಬೈ (ಪಿಟಿಐ): ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನ ಅಗ್ರ 10 ಆಟಗಾರರ ಪಟ್ಟಿಯಲ್ಲಿ ಸ್ಥಾನ ಗಳಿಸಿದ್ದಾರೆ. ವಿರಾಟ್ ಕೊಹ್ಲಿ ಐದನೇ ಸ್ಥಾನಕ್ಕೆ ಕುಸಿದಿದ್ದಾರೆ.

ನಾಟಿಂಗ್‌ಹ್ಯಾಂನಲ್ಲಿ ಭಾನುವಾರ ಕೊನೆಗೊಂಡ ಮೊದಲ ಟೆಸ್ಟ್ ಪಂದ್ಯದಲ್ಲಿ ಬೂಮ್ರಾ 110 ರನ್ ನೀಡಿ ಒಂಬತ್ತು ವಿಕೆಟ್ ಗಳಿಸಿದ್ದರು. ಇದು, ರ‍್ಯಾಂಕಿಂಗ್‌ನ ಬೌಲರ್‌ಗಳ ಪಟ್ಟಿಯಲ್ಲಿ ಅವರನ್ನು ಒಂಬತ್ತನೇ ಸ್ಥಾನಕ್ಕೆ ಏರಿಸಿದೆ.

ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಇಂಗ್ಲೆಂಡ್ ನಾಯಕ ಜೋ ರೂಟ್ ನಾಲ್ಕನೇ ಸ್ಥಾನ ಗಳಿಸಿದ್ದಾರೆ. ಭಾರತದ ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಮತ್ತು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಕ್ರಮವಾಗಿ ಆರು ಮತ್ತು ಏಳನೇ ಸ್ಥಾನದಲ್ಲಿ ಭದ್ರವಾಗಿ ಉಳಿದಿದ್ದಾರೆ. ಆಲ್‌ರೌಂಡರ್ ರವೀಂದ್ರ ಜಡೇಜ ಮೂರು ಸ್ಥಾನಗಳ ಏರಿಕೆ ಕಂಡಿದ್ದು 36ನೇ ಸ್ಥಾನಕ್ಕೆ ತಲುಪಿದ್ದಾರೆ. ಕೆ.ಎಲ್.ರಾಹುಲ್ 56ನೇ ಸ್ಥಾನದಲ್ಲಿದ್ದಾರೆ.


ಪ್ಯಾರಿಸ್ ಸೇಂಟ್ ಜರ್ಮನ್ ತಂಡ ಸೇರಿರುವ ಅರ್ಜೆಂಟೀನಾದ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರಿಗೆ 30ನೇ ಸಂಖ್ಯೆಯ ಜೆರ್ಸಿ ನೀಡಲಾಗಿದೆ. ಪ್ಯಾರಿಸ್‌ನಲ್ಲಿ ಬುಧವಾರ ಪತ್ರಿಕಾಗೋಷ್ಠಿಯ ನಂತರ ಮೆಸ್ಸಿ (ಬಲ) ಮತ್ತು ಕ್ಲಬ್‌ನ ಅಧ್ಯಕ್ಷ ನಸರ್ ಅಲ್‌ಖೆಲೈಫಿ ಅವರು ಜೆರ್ಸಿ ಪ್ರದರ್ಶಿಸಿದರು – ಎಎಫ್‌ಪಿ ಚಿತ್ರ

## ಕ್ರಿಕೆಟಿಗ ಕೇನ್ಸ್ ಆರೋಗ್ಯ ಗಂಭೀರ

ಮೆಲ್ಬರ್ನ್ (ರಾಯಿಟರ್ಸ್): ಹೃದ್ರೋಗದಿಂದ ಮಂಗಳವಾರ ಆಸ್ಪತ್ರೆಗೆ ದಾಖಲಾಗಿದ್ದ ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಕ್ರಿಸ್ ಕೇನ್ಸ್ ಅವರ ಸ್ಥಿತಿ ಇನ್ನೂ ಗಂಭೀರವಾಗಿದೆ.

ಕ್ರಿಸ್ ಸ್ಥಿತಿ ಗಂಭೀರವಾಗಿದ್ದು ಜೀವ ಸುರಕ್ಷಾ ಸಾಧನದ ನೆರವು ಒದಗಿಸಲಾಗಿದೆ. ಏರಾಟಿಕ್ ಡಿಸೆಕ್ಷನ್ ಎಂಬ ಕಾಯಿಲೆಯಿಂದ ಅವರು ಬಳಲುತ್ತಿದ್ದಾರೆ. ಮಂಗಳವಾರ ಅವರು ಕುಸಿದುಬಿದ್ದರು. ‘ಮಂಗಳವಾರ ದಾಖಲಾಗಿರುವ ಕೇನ್ಸ್ ಸ್ಥಿತಿ ಗಂಭೀರವಾಗಿದೆ’ ಎಂದು ಸಿಡ್ನಿಯ ಸೇಂಟ್ ವಿನ್ಸೆಂಟ್ ಆಸ್ಪತ್ರೆ ಮೂಲಗಳು ತಿಳಿಸಿವೆ.

‘ಹೋದ ವಾರ ಕ್ಯಾನ್‌ಬೆರಾದಲ್ಲಿ ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ಆದರೆ, ಆರೋಗ್ಯ ಸ್ಥಿತಿ ಮತ್ತಷ್ಟು ಬಿಗಡಾಯಿಸಿದ ಕಾರಣ, ಸೇಂಟ್ ವಿನ್ಸೆಂಟ್ ಆಸ್ಪತ್ರೆಗೆ ದಾಖಲಿಸಬೇಕಾಯಿತು’ ಎಂದು ಕ್ರಿಸ್ ಪತ್ನಿ ಮೆಲಾನಿ ಕೇನ್ಸ್ ತಿಳಿಸಿದ್ದಾರೆ.


ಕ್ರಿಸ್ ಕೇನ್ಸ್

## ‘ಬಯೋಬಬಲ್ ಒಂದು ಅವಕಾಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟಗಾರರು ಮಾನಸಿಕ ಆರೋಗ್ಯ ಕಾಯ್ದುಕೊಳ್ಳಲು ಸಕಾರಾತ್ಮಕವಾಗಿ ಯೋಚನೆ ಮಾಡುವುದು ಅಗತ್ಯ. ಈ ಕ್ಲಿಷ್ಟಕರ ಸಮಯದಲ್ಲಿಯೂ ಆಡುವ ಅವಕಾಶ ಸಿಗುತ್ತಿದೆಯೆನ್ನುವುದನ್ನು ಪರಿಗಣಿಸಿ ಕಣಕ್ಕಿಳಿದರೆ ಉತ್ತಮವಾಗಿ ಆಡಲು ಸಾಧ್ಯವಾಗುತ್ತದೆ ಎಂದು ಮಾಜಿ ಕ್ರಿಕೆಟಿಗ ವೆಂಕಟಪತಿರಾಜು ಅಭಿಪ್ರಾಯಪಟ್ಟರು.

ಭಾರತ–ಇಂಗ್ಲೆಂಡ್ ನಡುವಣ ಎರಡನೇ ಟೆಸ್ಟ್ ಪಂದ್ಯದ ಹಿನ್ನೆಲೆಯಲ್ಲಿ ‘ಪ್ರಜಾವಾಣಿ’ ಜೊತೆ ರಾಜು ಮಾತನಾಡಿದರು.

‘ಬಯೋಬಬಲ್ ಎಂಬುದು ಇನ್ನೂ ಹಲವು ವರ್ಷ ಪಾಲಿಸಬೇಕಾದ ನಿಯಮ. ಅದಕ್ಕೆ ನಾವು ಹೊಂದಿಕೊಳ್ಳಬೇಕು. ನವವಾಸ್ತವವನ್ನು ಒಪ್ಪಿಕೊಂಡು, ಆಟದತ್ತ ಗಮನ ಹರಿಸಬೇಕು. ಈ ಸ್ಥಿತಿಯನ್ನು ಒತ್ತಡ ಎಂದುಕೊಳ್ಳದೇ ಅವಕಾಶವೆಂದು ಪರಿಗಣಿಸಬೇಕು. ಮನೆಯಲ್ಲಿ ಕೂರುವ ಬದಲು ಆಡುವ ಅವಕಾಶಗಳನ್ನು ಬಳಸಿಕೊಳ್ಳಬೇಕು’ ಎಂದರು.

‘ಐಸಿಸಿಯ ವಾರ್ಷಿಕ ಕ್ಯಾಲೆಂಡರ್ ದಟ್ಟಣೆಯಿಂದ ಕೂಡಿದೆ. ಆದ್ದರಿಂದ ಎಲ್ಲ ಟೆಸ್ಟ್ ಪಂದ್ಯಗಳಿಗೆ ಕಾಯ್ದಿಟ್ಟ ದಿನ (ಆರನೇ ದಿನ) ನೀಡಲು ಸಾಧ್ಯವಾಗುವುದಿಲ್ಲ. ಡಬ್ಲ್ಯುಟಿಸಿ ಫೈನಲ್‌ನಂತಹ ಪಂದ್ಯದಲ್ಲಿ ಮೀಸಲು ದಿನ ಇರುವುದು ಸೂಕ್ತ’ ಎಂದು ರಾಜು ಹೇಳಿದರು.


ವೆಂಕಟಪತಿ ರಾಜು

## ಕೊರಿಯಾ ಓಪನ್ ಟೂರ್ನಿ ರದ್ದು

ನವದೆಹಲಿ (ಪಿಟಿಐ): ಕೋವಿಡ್ ಆತಂಕದಿಂದಾಗಿ ಕೊರಿಯಾ ಓಪನ್ ಮತ್ತು ಮಕಾವ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಗಳನ್ನು ರದ್ದುಗೊಳಿಸಲು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ನಿರ್ಧರಿಸಿದೆ. ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಕೂಡ ರದ್ದಾಗಿದೆ ಎಂದು ಫೆಡರೇಷನ್ ತಿಳಿಸಿದೆ.

ಚೀನಾ ಓಪನ್, ಜಪಾನ್ ಓಪನ್, ಫುಜೊ ಚೀನಾ ಓಪನ್ ಮತ್ತು ಹಾಂಗ್ ಕಾಂಗ್ ಓಪನ್ ಟೂರ್ನಿಗಳನ್ನು ಈಗಾಗಲೇ ರದ್ದುಪಡಿಸಲಾಗಿದೆ.




## ತವರಿಗೆ ಮರಳಿದ ಕೋಚ್ ಮರೈನ್

ನವದೆಹಲಿ (ಪಿಟ್ರೈ): ಒಲಿಂಪಿಕ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿ ಇತಿಹಾಸ ಬರೆದಿರುವ ಭಾರತ ಮಹಿಳಾ ಹಾಕಿ ತಂಡದ ಕೋಚ್ ಶೋರ್ಡ್ ಮರೈನ್ ತವರು ನೆಲವಾದ ನೆದರ್ಲೆಂಡ್ಸ್‌ಗೆ ಮರಳಿದ್ದಾರೆ. ನಾಲ್ಕು ವರ್ಷಗಳ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ವಾಪಸಾಗಿರುವ ಅವರು ತಮ್ಮನ್ನು ಗೌರವದಿಂದ ನಡೆಸಿಕೊಂಡಿಲ್ಲ ಎಂದು ಆರೋಪಿಸಿದ್ದಾರೆ. 2018ರಲ್ಲಿ ಪುರುಷರ ತಂಡದಿಂದ ಮಹಿಳಾ ತಂಡದ ಕೋಚ್ ಆಗಿ ಬದಲಿಸಿದ್ದು ಬೇಸರ ತಂದಿರುವ ವಿಷಯ ಎಂದಿದ್ದಾರೆ.

2017ರಲ್ಲಿ ಅವರನ್ನು ಮಹಿಳಾ ತಂಡದ ಕೋಚ್ ಆಗಿ ಕರೆಸಿಕೊಳ್ಳಲಾಗಿತ್ತು. ಆದರೆ ಪುರುಷರ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿತ್ತು. ಮುಂದಿನ ವರ್ಷ ಜೂನಿಯರ್ ವಿಶ್ವಕಪ್ ಗಳಿಸಿಕೊಟ್ಟ ಹರೇಂದ್ರ ಸಿಂಗ್ ಅವರನ್ನು ಪುರುಷರ ತಂಡದ ಕೋಚ್ ಆಗಿ ನೇಮಕ ಮಾಡಿ ಮರೈನ್ ಅವರನ್ನು ಮಹಿಳಾ ತಂಡದತ್ತ ಕಳುಹಿಸಲಾಗಿತ್ತು.

ಆ ಕಹಿ ಇನ್ನೂ ತಮ್ಮ ಮನಸ್ಸಿನಲ್ಲಿದೆ ಎಂದು ಮರೈನ್ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.


ಮರೈನ್ – ಪಿಟಿಐ ಚಿತ್ರ


ಆಹಿದಾ ಸಿಂಗ್


ಯಶಸ್ ರಾಜ್

## ಟೆನಿಸ್: ಯಶಸ್, ಆಹಿದಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಯಶಸ್ ರಾಜ್ ಮತ್ತು ಆಹಿದಾ ಸಿಂಗ್ ಅವರು ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಎಐಟಿಎ ಟ್ಯಾಲೆಂಟ್ ಸೀರಿಸ್–3ರ 12 ವರ್ಷದೊಳಗಿನವರ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಬುಧವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕಿತ ಯಶಸ್ ರಾಜ್ 6–1, 6–2ರಲ್ಲಿ ಅರ್ಜುನ್ ಮಣಿಕಂಠನ್ ಎದುರು ಜಯ ಗಳಿಸಿದರೆ, ಆಹಿದಾ ಸಿಂಗ್ ತಮಿಳುನಾಡಿನ ಸನ್ಮಿತ್ರ ಹರಿಣಿ ವಿರುದ್ಧ 6-3, 6-4ರ ಗೆಲುವು ದಾಖಲಿಸಿದರು.

## ರೊನಾಲ್ಡೊ ಎಫ್‌ಸಿ, ಬೆಂಗಳೂರು ಸಿಟಿ ಸೆಮಿಫೈನಲ್‌ಗೆ

ಬೆಂಗಳೂರು: ಅಗ್ನಿಪುತ್ರ ಎಫ್‌ಸಿಯನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿ ರೊನಾಲ್ಡೊ ಎಫ್‌ಸಿ ತಂಡ ರಾಜ್ಯ ಫುಟ್‌ಬಾಲ್ ಸಂಸ್ಥೆ ಮತ್ತು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ‘ಸಿ’ ಡಿವಿಷನ್ ಟೂರ್ನಿಯ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿತು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಸಿಟಿ ಎಫ್‌ಸಿ 2–0ಯಿಂದ ಹಾಕ್ಸ್ ಯುನೈಟೆಡ್ ಎಫ್‌ಸಿಯನ್ನು ಮಣಿಸಿತು. ಜೊನಾಥನ್ ಪೀರ್ಸ್ (11ನೇ ನಿಮಿಷ) ಮತ್ತು ಪರಾಗ್ ರಾವಲ್ (43ನೇ ನಿ) ಗೋಲು ಗಳಿಸಿದರು.

ಶುಕ್ರವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಮಹೇಶ್ ರಾಜ್ ಎಫ್‌ಸಿ ಮತ್ತು ಬೆಂಗಳೂರು ಪ್ಯಾಂಥರ್ಸ್ ಎಫ್‌ಸಿ ತಂಡಗಳು ಸೆಣಸಲಿದ್ದು ಬೆಂಗಳೂರು ಸಿಟಿ ಎಫ್‌ಸಿ ಮತ್ತು ರೊನಾಲ್ಡೊ ಎಫ್‌ಸಿ ನಡುವೆ ಪೈಪೋಟಿ ನಡೆಯಲಿದೆ.